# ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು




**ಜುಲೈ ೪ನೇ ವಾರ**

20-07-2026 TO 25-07-2026

# ಸಿಂಧು ಮುಡಿಗೆ ಜಪಾನ್ ಕಿರೀಟ

- ಸ್ಪೇನ್ ಮುಡಿಗೆ ಕಿರೀಟ
- ಮೊಲ್ಡೊವಾಕ್ಕೆ ಮುರ್ಮು ಭೇಟಿ
- ಶೂಟಿಂಗ್ ವಿಶ್ವಕಪ್: ಮೊದಲ ಪದಕ ಗೆದ್ದ ಭಾರತ
- ಆಸಿಯಾನ್, ಆಫ್ರಿಕಾಕ್ಕೆ ರಫ್ತು ಹೆಚ್ಚಳ




## ❖ ವಂಶವೃಕ್ಷ ದೃಢೀಕರಣಕ್ಕೆ ನೂತನ ಮಾರ್ಗಸೂಚಿ

- ಖಾತೆ ಬದಲಾವಣೆ, ಆಸ್ತಿ ವರ್ಗಾವಣೆ, ಸರ್ಕಾರದ ಸವಲತ್ತುಗಳನ್ನು ಪಡೆದುಕೊಳ್ಳಲು ಅಗತ್ಯವಿರುವ ವಂಶವೃಕ್ಷವನ್ನು ಪಡೆಯಲು ಅರ್ಜಿ ಸಲ್ಲಿಸುವ ವಿಧಾನ ಮತ್ತು ವಂಶವೃಕ್ಷವನ್ನು ದೃಢೀಕರಿಸುವ ಕುರಿತು ಕಂದಾಯ ಇಲಾಖೆಯು ನೂತನ ಮಾರ್ಗಸೂಚಿಯನ್ನು ಜಾರಿಗೆ ತಂದಿದೆ.
- ನೂತನ ಮಾರ್ಗಸೂಚಿಯ ಪ್ರಕಾರ, ವಂಶವೃಕ್ಷಕ್ಕಾಗಿ ಅರ್ಜಿ ಸಲ್ಲಿಸುವ ವ್ಯಕ್ತಿಯು ಇಲಾಖೆ ನಿಗದಿಪಡಿಸಿರುವ ನಮೂನೆಯಲ್ಲಿ ವಿವರ ಭರ್ತಿ ಮಾಡುವುದರ ಜತೆಗೆ, ₹100 ಮುಖಬೆಲೆಯ ಛಾಪಾಕಾಗದದಲ್ಲಿ ಪ್ರಮಾಣಪತ್ರ ಸಲ್ಲಿಸಬೇಕು. ವಂಶವೃಕ್ಷದಲ್ಲಿ ಉಲ್ಲೇಖಿಸಲಾಗುವ ಎಲ್ಲ ಜೀವಂತ ವ್ಯಕ್ತಿಗಳ ಆಧಾರ್ ವಿವರ ನಮೂದಿಸಬೇಕು.
- ವಂಶವೃಕ್ಷದಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳ ಆಧಾರ್/ಮತದಾರರ ಚೀಟಿ/ಪಡಿತರಚೀಟಿ/ಸರ್ಕಾರದ ಸಾಮಾಜಿಕ ಭದ್ರತಾ ಪಿಂಚಣಿ ದಾಖಲೆ ಪತ್ರ/ಉದ್ಯೋಗ ಕಾರ್ಡ್/ಯಶಸ್ವಿನಿ ಚೀಟಿ/ಚಾಲನಾ ಪರವಾನಗಿ/ಪ್ಯಾನ್ ಕಾರ್ಡ್‌ಗಳಲ್ಲಿ ಒಂದರ ವಿವರವನ್ನು ಪ್ರಮಾಣಪತ್ರದಲ್ಲಿ ನಮೂದಿಸಬೇಕು. ಕುಟುಂಬದ ಮೃತ ಸದಸ್ಯರನ್ನು ವಂಶವೃಕ್ಷದಲ್ಲಿ ಉಲ್ಲೇಖಿಸಿದ್ದರೂ, ಈ ನಿಯಮ ಅನ್ವಯವಾಗುತ್ತದೆ ಎನ್ನುತ್ತದೆ ಮಾರ್ಗಸೂಚಿ.

- ಅರ್ಜಿದಾರರು ನಾಡಕಚೇರಿ, ಗ್ರಾಮ ಒನ್ ಸೇವಾ ಕೇಂದ್ರ, ಕರ್ನಾಟಕ ಒನ್ ಸೇವಾ ಕೇಂದ್ರ, ಬಾಪೂಜಿ ಸೇವಾ ಕೇಂದ್ರಗಳಲ್ಲಿ ಭೌತಿಕ ಅರ್ಜಿಯನ್ನು ಸಲ್ಲಿಸಬಹುದು. ಇಲ್ಲವೇ ನಾಗರಿಕ ಆನ್‌ಲೈನ್ ಪೋರ್ಟಲ್‌ನಲ್ಲಿ ಆನ್‌ಲೈನ್ ಅರ್ಜಿಯನ್ನೂ ಸಲ್ಲಿಸಬಹುದು. ಅರ್ಜಿದಾರನು ಕರ್ನಾಟಕದ ನಿವಾಸಿಯಾಗಿದ್ದು ಆಧಾರ್ ಆಧಾರಿತ ಇ-ಕೆವೈಸಿ ದೃಢೀಕರಣ ಕಡ್ಡಾಯ ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.
- ಅರ್ಜಿ ಸಲ್ಲಿಕೆ ನಂತರ ಗ್ರಾಮ ಆಡಳಿತಾಧಿಕಾರಿಯು ಗ್ರಾಮಕ್ಕೆ ಭೇಟಿ ನೀಡಿ, ವಿವರಗಳನ್ನು ದೃಢೀಕರಿಸಿ ವರದಿ ಸಲ್ಲಿಸಬೇಕು. ಅದರ ಆಧಾರದಲ್ಲಿ ರಾಜಸ್ವ ನಿರೀಕ್ಷಕರು ಅರ್ಜಿ ಕುರಿತಾಗಿ ಉಪ ತಹಶೀಲ್ದಾರರಿಗೆ ಶಿಫಾರಸು ಮಾಡಬೇಕು. ಅರ್ಜಿಯ ಕುರಿತಾಗಿ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಉಪ ತಹಶೀಲ್ದಾರರದು.
- ಉಪ ತಹಶೀಲ್ದಾರರು 14 ದಿನಗಳಲ್ಲಿ ಅರ್ಜಿಯನ್ನು ವಿಲೇವಾರಿ ಮಾಡಬೇಕು ಎಂದು ವಿವರಿಸಿದೆ.ಉಪ ವಿಭಾಗಾಧಿಕಾರಿಯು ವಂಶವೃಕ್ಷ ದೃಢೀಕರಣ ಅರ್ಜಿಯ ಮೇಲ್ಮನವಿ ಪ್ರಾಧಿಕಾರವಾಗಿದ್ದು, ತಕರಾರು ಅರ್ಜಿಗಳು ಬಂದ 35 ದಿನಗಳೊಳಗೆ ಅವನ್ನು ವಿಲೇವಾರಿ ಮಾಡಬೇಕು ಎಂದು ತಿಳಿಸಿದೆ.




## ❖ ಪ್ರದೀಪ್ ಕೆಂಚನೂರು ಕೃತಿಗೆ ಸ್ವರ್ಣ ಕಮಲ ಪ್ರಶಸ್ತಿ

- 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಶನಿವಾರ ಪ್ರಕಟವಾಗಿದ್ದು, ಬೈಂದೂರು ತಾಲ್ಲೂಕಿನ ಪ್ರದೀಪ್ ಕೆಂಚನೂರು ಅವರ 'ನಾನಿರುವುದೆ ನಿಮಗಾಗಿ ನಾಡಿರುವುದೆ ನಮಗಾಗಿ: ಕನ್ನಡ ಸಿನಿಮಾದ ತತ್ವ ಮತ್ತು ರಾಜಕೀಯ' ಪುಸ್ತಕಕ್ಕೆ 2024ನೇ ಸಾಲಿನ ಸ್ವರ್ಣ ಕಮಲ ಪ್ರಶಸ್ತಿ ಲಭಿಸಿದೆ.
- ಸಿನಿಮಾ ರಂಗವನ್ನು ಕುರಿತ ಕೃತಿಗೆ ನೀಡುವ ಈ ಪ್ರಶಸ್ತಿಯು ₹1ಲಕ್ಷ ನಗದನ್ನು ಒಳಗೊಂಡಿದೆ. ಈ ಪುಸ್ತಕವನ್ನು ಕುಂದಾಪುರದ ಮಿರರ್ ಪುಸ್ತಕ ಪ್ರಕಾಶನ ಪ್ರಕಟಿಸಿದೆ.
- ಮಂಗಳೂರು ವಿಶ್ವವಿದ್ಯಾಲಯದಿಂದ ಇತಿಹಾಸ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಪ್ರದೀಪ್ ಅವರು 2020ರಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ 'ಕನ್ನಡ ಚಲನಚಿತ್ರದ ಸಿದ್ಧಾಂತ ಮತ್ತು ಸಾಂಸ್ಕೃತಿಕ ಪ್ರಶ್ನೆಗಳು' ವಿಷಯದ ಕುರಿತು ಪಿಎಚ್.ಡಿ. ಪದವಿ ಪಡೆದಿದ್ದರು.
- ಕರ್ನಾಟಕ ಚಲನಚಿತ್ರ ಅಕಾಡೆಮಿಯ ಸದಸ್ಯರಾಗಿಯೂ ಪ್ರದೀಪ್ ಅವರು ಕಾರ್ಯ ನಿರ್ವಹಿಸಿದ್ದರು.

# ಆಸಿಯಾನ್, ಆಫ್ರಿಕಾಕ್ಕೆ ರಫ್ತು ಹೆಚ್ಚಳ

## ₹8.56 ಲಕ್ಷ ಕೋಟಿ ಮೌಲ್ಯದ ಸರಕು, ಸೇವೆ ರಫ್ತು

**ನವದೆಹಲಿ (ಪಿಟಿಐ):** ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಆಸಿಯಾನ್ (ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘ) ಮತ್ತು ಆಫ್ರಿಕಾದ ದೇಶಗಳಿಗೆ ದೇಶದ ಸರಕು ಮತ್ತು ಸೇವೆಗಳ ರಫ್ತು ಪ್ರಮಾಣದಲ್ಲಿ ಶೇ 16ರಷ್ಟು ಏರಿಕೆಯಾಗಿದೆ.

ಇದು ಹಣಕಾಸಿನ ಮೌಲ್ಯದಲ್ಲಿ ₹8.56 ಲಕ್ಷ ಕೋಟಿಯಷ್ಟಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಅಂಕಿ–ಅಂಶಗಳು ತಿಳಿಸಿದೆ. ಈ ಎರಡೂ ಪ್ರದೇಶಗಳು ದೇಶದ ಸರಕು ಮತ್ತು ಸೇವೆಗಳ ರಫ್ತಿಗೆ ಅತಿದೊಡ್ಡ ಮಾರುಕಟ್ಟೆಗಳಾಗಿ ಹೊರಹೊಮ್ಮಿವೆ.

ಕಳೆದ ವರ್ಷದ ಇದೇ ಅವಧಿಯಲ್ಲಿ



ಆಸಿಯಾನ್ ಪ್ರದೇಶಕ್ಕೆ ₹60,659 ಕೋಟಿ ಮೌಲ್ಯದ ಸರಕು ಮತ್ತು ಸೇವೆಗಳು ರಫ್ತಾಗಿದ್ದವು. ಅದು ಈ ಬಾರಿ ₹1 ಲಕ್ಷ ಕೋಟಿ ದಾಟಿದ್ದು, ಶೇ 67ರಷ್ಟು ಹೆಚ್ಚಳವಾಗಿದೆ. ಆಫ್ರಿಕಾ ಪ್ರದೇಶದ ರಫ್ತಿನಲ್ಲಿ ಶೇ 53ರಷ್ಟು ಏರಿಕೆಯಾಗಿದ್ದು, ₹92,434 ಕೋಟಿಯಾಗಿದೆ.

ಅಮೆರಿಕ, ಕೆನಡಾ ಮತ್ತು ಮೆಕ್ಸಿಕೊಗೆ ದೇಶದ ರಫ್ತು ಶೇ 2.6ರಷ್ಟು ಏರಿಕೆಯಾಗಿದ್ದು, ₹1.85 ಲಕ್ಷ ಕೋಟಿಯಾಗಿದೆ. ಯುರೋಪ್‌ಗೆ ₹1.63 ಲಕ್ಷ ಕೋಟಿ, ಈಶಾನ್ಯ ಏಷ್ಯಾಕ್ಕೆ ₹79,916 ಕೋಟಿ, ದಕ್ಷಿಣ ಏಷ್ಯಾಕ್ಕೆ ₹58,734 ಕೋಟಿಯಾಗಿದೆ. ರಷ್ಯಾ, ಅರ್ಮೇನಿಯ, ಬೆಲಾರುಸ್ ಮತ್ತು ಕಜಕ್‌ಸ್ತಾನ್‌ಗೆ ರಫ್ತು ಶೇ 7.7ರಷ್ಟು ಹೆಚ್ಚಳವಾಗಿದ್ದು, ₹10,591 ಕೋಟಿಯಾಗಿದೆ ಎಂದು ತಿಳಿಸಿದೆ.

ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ದೇಶದಿಂದ ಒಟ್ಟು ₹15.66 ಲಕ್ಷ ಕೋಟಿ ಮೌಲ್ಯದ ಸರಕು ಮತ್ತು ಸೇವೆಗಳು ರಫ್ತಾಗಿದ್ದವು. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 14ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

Publication Date
20/07/2026

Presented by ಪ್ರಜಾವಾಣಿ

### ಜಪಾನ್ ಓಪನ್: ಯಮಾಗುಚಿ ಎದುರು ನೇರ ಗೇಮ್‌ಗಳಲ್ಲಿ ಗೆಲುವು

# ಪ್ರಶಸ್ತಿ ಬರ ನೀಗಿಸಿಕೊಂಡ ಸಿಂಧು

**ಟೋಕಿಯೊ (ಪಿಟಿಐ):** ಅನುಭವಿ ಆಟಗಾರ್ತಿ ಪಿ.ವಿ.ಸಿಂಧು ಅವರು ಭಾನುವಾರ ಜಪಾನ್ ಓಪನ್ ಸೂಪರ್ 750 ಬ್ಯಾಡ್ಮಿಂಡನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಕಿರೀಟ ಗೆದ್ದುಕೊಂಡರು. ಅದರೊಂದಿಗೆ, ಎರಡು ವರ್ಷಗಳ ಪ್ರಶಸ್ತಿ ಬರ ನೀಗಿಸಿಕೊಂಡರು. ಈ ಟೂರ್ನಿಯ ಪ್ರಶಸ್ತಿ ಜಯಿಸಿದ ಭಾರತದ ಮೊದಲ ಆಟಗಾರ್ತಿ ಎಂಬ ಹಿರಿಮೆಗೂ ಪಾತ್ರರಾದರು.

31 ವರ್ಷ ವಯಸ್ಸಿನ ಸಿಂಧು ಅವರು ಫೈನಲ್ ಹಣಾಹಣಿಯಲ್ಲಿ 21–17, 21–17ರಿಂದ ನೇರ ಗೇಮ್‌ಗಳಲ್ಲಿ ಸ್ಥಳೀಯ ನೆಚ್ಚಿನ ತಾರೆ ಅಕಾನೆ ಯಮಾಗುಚಿ ಅವರನ್ನು ಸೋಲಿಸಿದರು. ಬಿಡಬ್ಲ್ಯುಎಫ್ 750 ಶ್ರೇಣಿಯ ಟೂರ್ನಿಯಲ್ಲಿ ಸಿಂಧು ಇದೇ ಮೊದಲ ಬಾರಿಗೆ ಚಾಂಪಿಯನ್ ಆದರು.

‘ಬಹಳ ಸಂತೋಷವಾಗುತ್ತಿದೆ. ನಾನು 2024ರಲ್ಲಿ ಸೈಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯ ಬಳಿಕ ಎಲ್ಲಿಯೂ ಪ್ರಶಸ್ತಿ ಗೆದ್ದಿರಲಿಲ್ಲ. ಹೀಗಾಗಿ, ನನಗೆ ಮಾತುಗಳೇ ತೋಚದಂತಾಗಿದೆ’ ಎಂದು ಪಂದ್ಯದ ನಂತರ ಸಿಂಧು ಪ್ರತಿಕ್ರಿಯಿಸಿದರು.

**ಸಿಂಧು ಉತ್ಸಾಹ:** ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಪಂದ್ಯದುದ್ದಕ್ಕೂ ಪಾರಮ್ಯ ಮೆರೆದರು. ತಮ್ಮ ‘ಟ್ರೇಡ್‌ಮಾರ್ಕ್’ ಆಕ್ರಮಣಕಾರಿ ಬಿರುಸಿನ ಹೊಡೆತ ಹಾಗೂ ಚಾಣಾಕ್ಷ ರಿಟರ್ನ್‌ಗಳೊಂದಿಗೆ ಗಮನ ಸೆಳೆದರು. ಶಿಸ್ತುಬದ್ಧವಾಗಿ ಆಡಿ ಮೂರು ಬಾರಿಯ ವಿಶ್ವ ಚಾಂಪಿಯನ್ ಯಮಾಗುಚಿ ಎದುರು ಮೇಲುಗೈ ಸಾಧಿಸಿದರು. ಪಂದ್ಯ ಗೆದ್ದ ನಂತರ ಕೋಚ್ ಇರ್ವಾನ್‌ಸ್ಯಾ ಆದಿ ಪ್ರಥಮ ಅವರನ್ನು ಆಲಿಂಗಿಸಿ, ಭಾವುಕರಾದರು.

ಉತ್ಸಾಹದಲ್ಲಿ ಆಡಿದ ಸಿಂಧು ಅವರ ಪಾದಚಲನೆಯೂ ಸೊಗಸಾಗಿತ್ತು. ಅಂಕಣದ ಮೂಲೆ–ಮೂಲೆಗೂ ತೆರಳಿ ಕಾಕ್ ಅನ್ನು ರಿಟರ್ನ್ ಮಾಡಿದರು. ಆಗಾಗ ಬಲವಾದ ‘ಸ್ಮ್ಯಾಷ್’ ಹೊಡೆತ ಹಾಗೂ ‘ಡ್ರಾಪ್‌ಶಾಟ್’ಗಳನ್ನು ಪ್ರಯೋಗಿಸಿದರು. ‘ನೆಟ್‌ಪ್ಲೇ’ ಮೂಲಕ ಎದುರಾಳಿಯು ಕಾಕ್ ಅನ್ನು ಎತ್ತರಕ್ಕೆ ಹೊಡೆಯುವಂತೆ ಮಾಡಿ, ‘ಬಾಡಿ ಸ್ಮ್ಯಾಷ್’ ಮತ್ತು ‘ಕ್ರಾಸ್‌ಕೋರ್ಟ್’ ಹೊಡೆತಗಳೊಂದಿಗೆ ಪಾಯಿಂಟ್ಸ್ ಸಂಗ್ರಹಿಸುತ್ತಾ ಹೋದರು.

ಮೊದಲ ಗೇಮ್‌ನ ಆರಂಭದಲ್ಲಿ ಸಿಂಧು ಮೇಲುಗೈ ಸಾಧಿಸಿದರಾದರೂ, ವಿರಾಮದ ವೇಳೆಗೆ ಜಪಾನ್ ಆಟಗಾರ್ತಿ 11–9ರಲ್ಲಿ ಮುನ್ನಡೆ ಕಂಡುಕೊಂಡರು. ವಿರಾಮದ ನಂತರ ಪುಟಿದೆದ್ದ ಸಿಂಧು ಸತತ ಪಾಯಿಂಟ್‌ಗಳೊಂದಿಗೆ 16–12ರ ಮುನ್ನಡೆ ಸಾಧಿಸಿದರು. ಅದೇ ಲಯದಲ್ಲಿ 21–17ರಿಂದ ಗೇಮ್ ತಮ್ಮದಾಗಿಸಿಕೊಂಡರು.

ಎರಡನೇ ಗೇಮ್‌ನಲ್ಲಿಯೂ 8–3ರಿಂದ ಆರಂಭಿಕ ಮುನ್ನಡೆ ಸಾಧಿಸಿದರು. ವಿರಾಮದ ವೇಳೆಗೆ 11–7ರಲ್ಲಿ ಮುಂದಿದ್ದ ಅವರು ಅಂತಿಮವಾಗಿ 21–19ರಲ್ಲಿ ಗೇಮ್ ತಮ್ಮದಾಗಿಸಿಕೊಂಡರು.

ಯಮಾಗುಚಿ ಅವರು ಆರನೇ ಬಾರಿ ಇಲ್ಲಿ ಫೈನಲ್ ತಲುಪಿದ್ದರು. ಇವರಿಬ್ಬರು ಈ ಹಿಂದೆ 24 ಬಾರಿ ಮುಖಾಮುಖಿಯಾಗಿದ್ದು, 14ರಲ್ಲಿ ಯಮಾಗುಚಿ ಗೆದ್ದಿದ್ದರು.



ಕೋಚ್ ಇರ್ವಾನ್‌ಸ್ಯಾ ಆದಿ ಪ್ರಥಮ (ಬಲ) ಜೊತೆಗೆ ಪಿ.ವಿ.ಸಿಂಧು ಸಂಭ್ರಮ — ಎಎಫ್‌ಪಿ ಚಿತ್ರ

### ‘ದೃಢ ವಿಶ್ವಾಸ ಫಲ ನೀಡಿದೆ’

‘ದೃಢ ಆತ್ಮವಿಶ್ವಾಸ ಹಾಗೂ ತಾಳ್ಮೆಯ ಮನೋಭಾವ ಇಂದು ಫಲ ನೀಡಿದೆ. ಮುಂದಿನ ತಿಂಗಳು ನಡೆಯಲಿರುವ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿಯೂ ಇದೇ ಲಯವನ್ನು ಮುಂದುವರಿಸುವ ಭರವಸೆ ನನಗಿದೆ’ ಎಂದು ಸಿಂಧು ಅವರು ಹೇಳಿದರು.

‘ತಾಳ್ಮೆಯಿಂದ ಆಡಿದ್ದು ಹಾಗೂ ಸ್ವಯಂ ಪ್ರಮಾದಗಳನ್ನು ಗಣನೀಯವಾಗಿ ತಗ್ಗಿಸಿಕೊಂಡಿದ್ದರಿಂದ ಪ್ರಶಸ್ತಿ ಗೆಲ್ಲಲು ಸಾಧ್ಯವಾಯಿತು’ ಎಂದರು.

Publication Date
20/07/2026

Presented by ಪ್ರಜಾವಾಣಿ


# ಬ್ರಿಟನ್ ಪ್ರಧಾನಿಯಾಗಿ ಆ್ಯಂಡಿ ಬರ್ನ್‌ಹಮ್ ಅಧಿಕಾರ ಸ್ವೀಕಾರ

ಲಂಡನ್ (ಪಿಟಿಐ): ಲೇಬರ್ ಪಕ್ಷದ ನಾಯಕ ಆ್ಯಂಡಿ ಬರ್ನ್‌ಹಮ್ ಅವರು ಬ್ರಿಟನ್‌ನ ನೂತನ ಪ್ರಧಾನಿಯಾಗಿ ಸೋಮವಾರ ಅಧಿಕಾರ ಸ್ವೀಕರಿಸಿದರು.

ಕಿಯರ್ ಸ್ಟಾರ್ಮರ್ ಅವರು ಪ್ರಧಾನಿ ಹುದ್ದೆ ಮತ್ತು ಲೇಬರ್ ಪಕ್ಷದ ನಾಯಕನ ಸ್ಥಾನಕ್ಕೆ ಜೂನ್ 21ರಂದು ರಾಜೀನಾಮೆ ಘೋಷಿಸಿದ್ದರು. ಒಂದು ತಿಂಗಳ ಅಂತರದಲ್ಲಿಯೇ ನೂತನ ಪ್ರಧಾನಿಯ ನೇಮಕವಾಗಿದೆ.

ಸೋಮವಾರ ಬೆಳಿಗ್ಗೆ ಬಂಕಿಂಗ್‌ಹ್ಯಾಮ್ ಅರಮನೆಯಲ್ಲಿ ರಾಜ ಚಾರ್ಲ್ಸ್–3 ಅವರನ್ನು ಭೇಟಿಯಾಗಿ ಸ್ಟಾರ್ಮರ್ ಅಧಿಕೃತವಾಗಿ ರಾಜೀನಾಮೆ ಸಲ್ಲಿಸುವ ಮೂಲಕ ನೂತನ ಪ್ರಧಾನಿ ಆಯ್ಕೆ ದಾರಿ ಸುಗಮಗೊಂಡಿತು.

10 ಡೌನಿಂಗ್ ಸ್ಟ್ರೀಟ್‌ನಲ್ಲಿ ಭಾಷಣ ಮಾಡಿದ ಆ್ಯಂಡಿ ಬರ್ನ್‌ಹಮ್ ಅವರು, ‘ಸಮಸ್ಯೆ ಪರಿಹಾರದ ಕುರಿತಂತೆ ಎಲ್ಲರೂ ರಾಜಕೀಯ ಮಾಡುತ್ತಾರೆ. ಆದರೆ, ನಾನು ದೇಶವನ್ನು ಈಗಿನ ಸ್ಥಿತಿಯಲ್ಲಿ ಸುರಕ್ಷತೆಯತ್ತ ಕೊಂಡೊಯ್ಯುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ’ ಎಂದು ಭರವಸೆ ನೀಡಿದರು.



ಆ್ಯಂಡಿ ಬರ್ನ್‌ಹಮ್

ಹಿಂದಿನ ಉತ್ತರಾಧಿಕಾರಿಗಳು ಆಡಳಿತ ಸೌಧದಿಂದಲೇ ದೇಶವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಆ್ಯಂಡಿ ಅವರು, 10 ಡೌನಿಂಗ್ ಸ್ಟ್ರೀಟ್‌ನಲ್ಲಿ ಭಾಷಣ ಮಾಡುವ ಮೂಲಕ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದರು.

‘ಬ್ರಿಟನ್ ಅನ್ನು ಸಂಕಷ್ಟದಿಂದ ಪಾರು ಮಾಡಲು ಯತ್ನಿಸುತ್ತೇವೆ. ಕಳೆದ 40 ವರ್ಷಗಳಲ್ಲಿಯೇ ಅತ್ಯಂತ ದೊಡ್ಡ ಬದಲಾವಣೆಯನ್ನು ತರಲಿದ್ದು, ಹೊಸ ರಾಜಕೀಯ ಹಾಗೂ ಆರ್ಥಿಕ ಮಾದರಿಯನ್ನು ದೇಶದಲ್ಲಿ ಪರಿಚಯಿಸಲಿದ್ದೇವೆ’ ಎಂದು ಹೇಳಿದರು.

**ಆ್ಯಂಡಿ ಬರ್ನ್‌ಹಮ್ ಅವರಿಗೆ ನನ್ನ ಸಂಪೂರ್ಣ ಬೆಂಬಲವಿದೆ. ಬ್ರಿಟನ್ ಈಗ ಬಲಿಷ್ಠವಾಗಿದೆ. ನನ್ನ ಸಾಧನೆಗಳ ಬಗ್ಗೆಯೂ ಹೆಮ್ಮೆ ಇದೆ**
**ಕಿಯರ್ ಸ್ಟಾರ್ಮರ್,** ಮಾಜಿ ಪ್ರಧಾನಿ

ಪತ್ನಿ ಮೇರಿ ಫ್ರಾನ್ಸ್ ವ್ಯಾನ್ ಹೀಲ್ ಜೊತೆಗೂಡಿ ಡೌನಿಂಗ್ ಸ್ಟ್ರೀಟ್‌ಗೆ ಬಂದ ಆ್ಯಂಡಿ ಅವರನ್ನು ಹಲವು ಸಹೋದ್ಯೋಗಿಗಳು ಕೂಡ ಸುತ್ತುವರಿದಿದ್ದರು. ಈ ಪೈಕಿ ಕೆಲವರನ್ನು ನೂತನ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳುವ ನಿರೀಕ್ಷೆಯಿದೆ.

‘ಬೀದಿಯಲ್ಲಿ ವಾಸಿಸುತ್ತಿರುವ ನಿರಾಶ್ರಿತರಿಗೆ ಮನೆಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದು’ ಎಂದು ಚೊಚ್ಚಲ ಭಾಷಣದಲ್ಲಿಯೇ ತಿಳಿಸಿದ್ದಾರೆ.

Publication Date
21/07/2026

Presented by ಪ್ರಜಾವಾಣಿ

## ❖ ಮಾಜಿ ನ್ಯಾಯಾಧೀಶರಿಗೆ ನಿವೃತ್ತಿಯ ನಂತರ ಸೌಲಭ್ಯದಲ್ಲಿ ತಾರತಮ್ಯ; ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚನೆ

- ಏಕರೂಪದ ಭತ್ಯೆಗೆ ಸಮಿತಿ ರಚಿಸಿ: ಕೇಂದ್ರಕ್ಕೆ 'ಸುಪ್ರೀಂ' ಸೂಚನೆ, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳಿಗೆ ನಿವೃತ್ತಿಯ ನಂತರ ಚಾಲಕರ ನಿಯೋಜನೆ, ಭದ್ರತಾ ವ್ಯವಸ್ಥೆ ಹಾಗೂ ಪ್ರಯಾಣದ ಸಂದರ್ಭದಲ್ಲಿ ಸರ್ಕಾರಿ ವಸತಿನಿಲಯದಲ್ಲಿ ಉಳಿಯಲು ಅವಕಾಶ ನೀಡುವ ಏಕರೂಪದ ಭತ್ಯೆ ಜಾರಿಗೊಳಿಸುವ ನಿಟ್ಟಿನಲ್ಲಿ ಸಮಿತಿ ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.
- ವಿವಿಧ ರಾಜ್ಯಗಳಲ್ಲಿ ನೀಡುವ ಸೌಲಭ್ಯಗಳಲ್ಲಿ ಸಾಕಷ್ಟು ವ್ಯತ್ಯಾಸವಿರುವುದನ್ನು ಗಮನಿಸಿರುವ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ ಮತ್ತು ವಿ.ಮೋಹನ ಅವರ ಪೀಠವು, ಎರಡು ವಾರದ ಒಳಗಾಗಿ ಸಮಿತಿ ರಚಿಸುವಂತೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಸೂಚನೆ ನೀಡಿದೆ. ಮೂರು ತಿಂಗಳ ಒಳಗಾಗಿ ಈ ಸಮಿತಿ ವರದಿ ಸಲ್ಲಿಸಬೇಕು ಎಂದು ಸ್ಪಷ್ಟಪಡಿಸಿದೆ.
- ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳ ಒಕ್ಕೂಟದ ಅಧ್ಯಕ್ಷ ವಿ.ಎಸ್.ದವೆ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಯ ವಿಚಾರಣೆ ನಡೆಸಿ ಈ ಸೂಚನೆ ನೀಡಿದೆ.
- ಚಾಲಕರು ಹಾಗೂ ಭದ್ರತಾ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ರಾಜ್ಯ ಸರ್ಕಾರ ನೀಡುತ್ತಿರುವ ಭತ್ಯೆ ಕುರಿತಂತೆ ಪ್ರಶ್ನಿಸಿದ ಸಿಜೆಐ, '₹45 ಸಾವಿರದಿಂದ ₹50 ಸಾವಿರದಲ್ಲಿ ಚಾಲಕರು ಹಾಗೂ ಭದ್ರತಾ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಸಾಧ್ಯವೇ' ಎಂದು ಪ್ರಶ್ನಿಸಿತು.

- 'ಹಲವು ರಾಜ್ಯಗಳ ನಡುವೆ ಭತ್ಯೆಯ ವಿಚಾರದಲ್ಲಿ ಏಕರೂಪತೆಯಿಲ್ಲ. ಕೇಂದ್ರ ಸರ್ಕಾರವೇ ಸಮಿತಿ ರಚಿಸಿ, ನಿಯಮಾವಳಿಗಳನ್ನು ರೂಪಿಸಬೇಕು. ಕೇಂದ್ರ ಸರ್ಕಾರ ಕೂಡ ಅನುದಾನಗಳನ್ನು ಹೊಂದಿಸಬಹುದು. ನೀವು ಮಾಡದಿದ್ದರೆ, ನಾವೇ ಸಮಿತಿ ರಚಿಸಬೇಕಾಗುತ್ತದೆ' ಎಂದು ಸಾಲಿಸಿಟರ್ ಜನರಲ್‌ಗೆ ಸಿಜೆಐ ತಿಳಿಸಿದರು.
- ಇದಕ್ಕೆ ಉತ್ತರಿಸಿದ ಮಹ್ರಾ, ಸಮಿತಿ ರಚಿಸಲು ಕೇಂದ್ರ ಸರ್ಕಾರಕ್ಕೆ ಯಾವುದೇ ಸಮಸ್ಯೆಯಿಲ್ಲ. ಎಲ್ಲರ ಅಭಿಪ್ರಾಯಗಳನ್ನು ಪರಿಗಣಿಸಲಾಗುವುದು' ಎಂದು ಹೇಳಿದರು.
- ಮುಂದಿನ ವಾರದ ಒಳಗಾಗಿ ಸಮಿತಿ ರಚಿಸುವಂತೆ ತಿಳಿಸಿದ ಸಿಜೆಐ ಅರ್ಜಿ ವಿಚಾರಣೆಯನ್ನು ಮುಂದೂಡಿದರು.

# ಎಲ್‌ಟಿಸಿಜಿ ರದ್ದು ಸದ್ಯಕ್ಕೆ ಇಲ್ಲ

## ಲೋಕಸಭೆಗೆ ನೀಡಿದ ಉತ್ತರದಲ್ಲಿ ಸ್ಪಷ್ಟನೆ ಒದಗಿಸಿದ ಕೇಂದ್ರ ಸರ್ಕಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಷೇರು ಮಾರುಕಟ್ಟೆಗಳಿಂದ ಸಿಗುವ ಲಾಭಕ್ಕೆ ವಿಧಿಸುವ ದೀರ್ಘಾವಧಿ ಬಂಡವಾಳ ವೃದ್ಧಿ (ಎಲ್‌ಟಿಸಿಜಿ) ತೆರಿಗೆಯನ್ನು ರದ್ದುಪಡಿಸುವ ಯಾವುದೇ ಪ್ರಸ್ತಾವವು ಕೇಂದ್ರ ಸರ್ಕಾರದ ಮುಂದೆ ಇಲ್ಲ ಎಂದು ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಲೋಕಸಭೆಗೆ ತಿಳಿಸಿದ್ದಾರೆ.




ಸಮಾಜವಾದಿ ಪಕ್ಷದ ಆನಂದ ಭದೌರಿಯಾ ಅವರು 'ಮಾರುಕಟ್ಟೆಯಲ್ಲಿ ಪೂರಕ ವಾತಾವರಣ ಸೃಷ್ಟಿಸುವ ಉದ್ದೇಶದಿಂದ, ದೇಶಿ ಹೂಡಿಕೆದಾರರನ್ನು ರಕ್ಷಿಸಲು' ಕೇಂದ್ರ ಸರ್ಕಾರವು ಎಲ್‌ಟಿಸಿಜಿ ತೆರಿಗೆಯನ್ನು ಯಾವಾಗ ರದ್ದುಪಡಿಸಲಿದೆ ಎಂದು ಕೇಳಿದ್ದರು.

ಇದಕ್ಕೆ ಲಿಖಿತ ಉತ್ತರ ನೀಡಿರುವ ಸಚಿವ ಚೌಧರಿ ಅವರು, 'ಈಗ ಅಂತಹ ಯಾವುದೇ ಪ್ರಸ್ತಾವ ಪರಿಗಣನೆಯಲ್ಲಿ ಇಲ್ಲ. ಬಂಡವಾಳ ವೃದ್ಧಿ ತೆರಿಗೆ ದರ ಸೇರಿದಂತೆ ತೆರಿಗೆ ಸಂಬಂಧಿತ ನೀತಿಗಳನ್ನು ವಾರ್ಷಿಕ ಮುಂಗಡಪತ್ರ ಸಿದ್ಧಪಡಿಸುವ ಪ್ರಕ್ರಿಯೆಯ ಭಾಗವಾಗಿ ಮತ್ತು ಶಾಸನಾತ್ಮಕ ಪ್ರಕ್ರಿಯೆಗಳ ಭಾಗವಾಗಿ ಕಾಲಕಾಲಕ್ಕೆ ಪರಿಶೀಲಿಸಲಾಗುತ್ತದೆ. ಆರ್ಥಿಕ ಸ್ಥಿತಿಗತಿಗಳನ್ನು ಪರಿಗಣಿಸಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ' ಎಂದು ತಿಳಿಸಿದ್ದಾರೆ.

ಎಲ್‌ಟಿಸಿಜಿ ತೆರಿಗೆಯನ್ನು ತೆಗೆದು ವಿದೇಶಿ ಹಾಗೂ ಭಾರತದ ಹೂಡಿಕೆದಾರರ ನಡುವೆ ಸಮಾನತೆಯನ್ನು ತರುವ ಉದ್ದೇಶ ಇದೆಯೇ ಎಂಬ ಪ್ರಶ್ನೆಯನ್ನೂ ಭದೌರಿಯಾ ಅವರು ಕೇಳಿದ್ದರು. 'ಎಲ್‌ಟಿಸಿಜಿ ಪ್ರಮಾಣ ಶೇ 12.5ರಷ್ಟು ಇದೆ. ಇದು ಷೇರುಗಳ ಮೇಲೆ ಹಣ ತೊಡಗಿಸುವ ದೇಶಿ ಹೂಡಿಕೆದಾರರಿಗೂ ವಿದೇಶಿ ಹೂಡಿಕೆದಾರರಿಗೂ (ಎಫ್‌ಪಿಐ) ಒಂದೇ ಪ್ರಮಾಣದಲ್ಲಿದೆ' ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

ಷೇರುಗಳಲ್ಲಿ ಹಣ ತೊಡಗಿಸಿ, ದೀರ್ಘಾವಧಿಯಲ್ಲಿ ಬಂಡವಾಳದ ವೃದ್ಧಿ ಕಾಣುವವರಿಗೆ ವಿಧಿಸುವ ಎಲ್‌ಟಿಸಿಜಿ ಮೂಲಕ ಕೇಂದ್ರ ಸರ್ಕಾರವು 2023–24ನೇ ಹಣಕಾಸು ವರ್ಷದಲ್ಲಿ (ತೆರಿಗೆ ತೀರ್ಮಾನ ವರ್ಷ 2024–25) ₹72,249 ಕೋಟಿ ವರಮಾನ ಗಳಿಸಿದೆ.

ಈ ತೆರಿಗೆಯ ಮೂಲಕ ದೊರೆತ ವರಮಾನವು 2024–25ನೇ ಹಣಕಾಸು ವರ್ಷದಲ್ಲಿ ₹1.29 ಲಕ್ಷ ಕೋಟಿ ಹೆಚ್ಚಾಗಿದೆ ಎಂದು ಸಚಿವರು ನೀಡಿರುವ ಉತ್ತರದಲ್ಲಿ ಉಲ್ಲೇಖಿಸಲಾಗಿದೆ.

2025–26ನೇ ಹಣಕಾಸು ವರ್ಷಕ್ಕೆ ಸಂಬಂಧಿಸಿದ ಆದಾಯ ತೆರಿಗೆ ವಿವರಗಳನ್ನು ಸಲ್ಲಿಸುವ ಪ್ರಕ್ರಿಯೆ ಇನ್ನೂ ಚಾಲ್ತಿಯಲ್ಲಿ ಇರುವ ಕಾರಣಕ್ಕೆ ಈ ವರ್ಷದಲ್ಲಿ ಎಲ್‌ಟಿಸಿಜಿ ಮೂಲಕ ದೊರೆತ ವರಮಾನದ ವಿವರ ಲಭ್ಯವಿಲ್ಲ ಎಂದು ಹೇಳಿದ್ದಾರೆ.

Publication Date
21/07/2026

Presented by ಪ್ರಜಾವಾಣಿ

Dr. Rajkumar Academy

## ಲಿಖಿತ ಉತ್ತರದಲ್ಲಿ ಸಂಸತ್ತಿಗೆ ಪೆಟ್ರೋಲಿಯಂ ಸಚಿವಾಲಯ ಮಾಹಿತಿ

# ‘ಎಥೆನಾಲ್ ಹೆಚ್ಚಳ ನಿರ್ಧಾರ ಆಗಿಲ್ಲ’

ನವದೆಹಲಿ (ಪಿಟಿಐ): ‘ಪೆಟ್ರೋಲ್‌ನಲ್ಲಿ ಶೇ 20ಕ್ಕಿಂತ ಹೆಚ್ಚು ಪ್ರಮಾಣದ ಎಥೆನಾಲ್ ಮಿಶ್ರಣ ಮಾಡುವ ಬಗ್ಗೆ ಸರ್ಕಾರವು ಇದುವರೆಗೆ ಯಾವುದೇ ನಿರ್ಧಾರ ಮಾಡಿಲ್ಲ’ ಎಂದು ಕೇಂದ್ರ ಪೆಟ್ರೋಲಿಯಂ ಸಚಿವಾಲಯ ಸಂಸತ್ತಿಗೆ ತಿಳಿಸಿದೆ.

ಮುಂದಿನ ದಿನಗಳಲ್ಲಿ ಎಥೆನಾಲ್ ಪ್ರಮಾಣವನ್ನು ಹೆಚ್ಚಳ ಮಾಡಬೇಕಾದರೆ, ವಿವರವಾದ ವೈಜ್ಞಾನಿಕ ಮತ್ತು ತಾಂತ್ರಿಕ ಅಧ್ಯಯನ ನಡೆಸಿ, ವಾಹನ ತಯಾರಿಕಾ ಕಂಪನಿಗಳು, ತೈಲೋತ್ಪನ್ನ ಮಾರಾಟ ಕಂಪನಿಗಳು ಮತ್ತು ಸಂಶೋಧನಾ ಸಂಸ್ಥೆಗಳೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ಸಂಸತ್ತಿಗೆ ನೀಡಿದ ಲಿಖಿತ ಉತ್ತರದಲ್ಲಿ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ರಾಜ್ಯ ಖಾತೆ ಸಚಿವ ಸುರೇಶ್ ಗೋಪಿ ತಿಳಿಸಿದ್ದಾರೆ.

> **ಆಯ್ದ ರಿಟೇಲ್ ಬಂಕ್‌ಗಳಲ್ಲಿ ಕಡಿಮೆ ಎಥೆನಾಲ್ ಮಿಶ್ರಣ ಅಥವಾ ಎಥೆನಾಲ್ ಮಿಶ್ರಣ ಇಲ್ಲದ ಪೆಟ್ರೋಲ್ ಅನ್ನು ಮಾರಾಟ ಮಾಡುವ ಯಾವುದೇ ಪ್ರಸ್ತಾಪವಿಲ್ಲ**
>
> **ಸುರೇಶ್ ಗೋಪಿ**
>
> ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ರಾಜ್ಯ ಖಾತೆ ಸಚಿವ

2013–14ರಲ್ಲಿ ಲೀಟರ್ ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣದ ಪ್ರಮಾಣ ಶೇ 1.53ರಷ್ಟಿತ್ತು. ಅದು 2025–26ರ ವೇಳೆಗೆ ಶೇ 20ಕ್ಕೆ ಏರಿಕೆಯಾಗಿದೆ. ಇದರಿಂದ ಈ ಅವಧಿಯಲ್ಲಿ ₹1.97 ಲಕ್ಷ ಕೋಟಿ ವಿದೇಶಿ ವಿನಿಮಯ ಮೀಸಲನ್ನು ಉಳಿಸಲಾಗಿದೆ. ಅಲ್ಲದೆ, 316 ಲಕ್ಷ ಟನ್ ಕಚ್ಚಾ ತೈಲ ಆಮದು ಕಡಿಮೆಯಾಗಿದ್ದು, 952 ಲಕ್ಷ ಟನ್ ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆ ತಗ್ಗಿದೆ. ಎಥೆನಾಲ್ ಉತ್ಪಾದನೆಯಿಂದ ರೈತರಿಗೆ ₹1.66 ಲಕ್ಷ ಕೋಟಿ ಆದಾಯ ದೊರೆತಿದೆ ಎಂದಿದ್ದಾರೆ.



ಎಥೆನಾಲ್ ಬಳಸುವುದರಿಂದ ವಾಹನಗಳ ಎಂಜಿನ್ ಹಾಳಾಗಿರುವುದು, ತುಕ್ಕು ಹಿಡಿಯುವಿಕೆ ಸೇರಿದಂತೆ ಯಾವುದೇ ಸಮಸ್ಯೆ ಕಂಡು ಬಂದಿರುವ ಕುರಿತು ವಾಹನ ತಯಾರಿಕಾ ಕಂಪನಿಗಳು, ಆಟೊಮೊಬೈಲ್ ಸಂಘಟನೆಗಳು ಅಥವಾ ಗ್ರಾಹಕರಿಂದ ಸಮರ್ಥನೀಯ ದೂರುಗಳು ಬಂದಿಲ್ಲ ಎಂದು ತಿಳಿಸಿದ್ದಾರೆ.

2024–25ರ ಆರ್ಥಿಕ ವರ್ಷದಲ್ಲಿ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರಾಟ ಕಂಪನಿಗಳು 1,033 ಕೋಟಿ ಲೀಟರ್ ಎಥೆನಾಲ್ ಖರೀದಿಸಿದ್ದವು. ಇದು ಹಣಕಾಸಿನ ಮೌಲ್ಯದಲ್ಲಿ ₹73,996 ಕೋಟಿಯಷ್ಟಾಗಿತ್ತು. ಕಳೆದ ಆರ್ಥಿಕ ವರ್ಷದಲ್ಲಿ ₹49,577 ಕೋಟಿ ಮೌಲ್ಯದ 705 ಕೋಟಿ ಲೀಟರ್ ಎಥೆನಾಲ್ ಖರೀದಿಸಿವೆ ಎಂದು ತಿಳಿಸಿದ್ದಾರೆ.

Publication Date
21/07/2026

Presented by ಪ್ರಜಾವಾಣಿ

## ❖ 1.2 ಕೋಟಿ ಮಾನವ ದಿನ ಸೃಷ್ಟಿಸುವ ಗುರಿ: ಸಚಿವ ಖಂಡ್ರೆ

- ವಿಬಿ ಜಿ ರಾಮ್‌ಜಿ ಯೋಜನೆಯಡಿ ಈವರೆಗೆ 5 ಲಕ್ಷ ಮಾನವ ದಿನ ಉದ್ಯೋಗ ಸೃಷ್ಟಿಸಲಾಗಿದೆ. ಈ ತಿಂಗಳ ಅಂತ್ಯದೊಳಗೆ 10 ಲಕ್ಷ ಮಾನವ ದಿನ ಉದ್ಯೋಗ ಸೃಷ್ಟಿಸುವುದರ ಜತೆಗೆ ಮುಂದೆ ತಿಂಗಳಿಗೆ 1.25 ಕೋಟಿ ಮಾನವ ದಿನ ಸೃಷ್ಟಿಸುವ ಗುರಿ ಹೊಂದಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದರು.
- ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಚೀಟಿ (ಜಾಬ್ ಕಾರ್ಡ್) ಹೊಂದಿರುವ ಪ್ರತಿಯೊಬ್ಬರಿಗೂ 125 ದಿನ ಉದ್ಯೋಗ ದೊರಕಲಿದೆ. ಇದರಿಂದ ಗುಳೆ ಹೋಗುವುದನ್ನು ತಡೆಯಲು ಸಾಧ್ಯ. ಗ್ರಾಮಪಂಚಾಯಿತಿಗೆ ಉದ್ಯೋಗ ಕೇಳಿ ಬಂದವರಿಗೆಲ್ಲಾ ಉದ್ಯೋಗ ನೀಡಲಾಗುವುದು ಎಂದರು. ಕೇಂದ್ರ ಸರ್ಕಾರ ನರೇಗಾದಡಿ ನೀಡುತ್ತಿದ್ದ 90:10 ಅನುಪಾತ ಬದಲಿಸಿ 60:40 ಅನುಪಾತ ಮಾಡಿದ್ದು, ರಾಜ್ಯದ ಮೇಲೆ ಹೊರೆ ಯಾಗಿದ್ದರೂ ಕೂಡ ಬಡವರ, ಗ್ರಾಮೀಣರ, ದಲಿತರ ಮತ್ತು ವಂಚಿತರ ಹಿತದೃಷ್ಟಿಯಿಂದ ವಿಬಿ ಜಿ ರಾಮ್ ಜಿ ಯೋಜನೆ ಜುಲೈ 1 ರಿಂದಲೇ ಜಾರಿ ತರಲಾಗಿದೆ. ಗ್ರಾಮ ಪಂಚಾಯಿತಿಗೆ ಉದ್ಯೋಗ ಕೇಳಿ ಬಂದವರಿಗೆಲ್ಲಾ ಉದ್ಯೋಗ ನೀಡಲಾಗುತ್ತಿದೆ ಎಂದು ಅವರು ಹೇಳಿದರು.
- ವಿಬಿ ಜಿ ರಾಮ್‌ಜಿಯಡಿ 318ಕಾಮಗಾರಿ ಕೈಗೆತ್ತಿಕೊಳ್ಳಲು ಅವಕಾಶ ವಿದೆ. ಹೊಸದಾಗಿ ಹೆಚ್ಚುವರಿ ಕ್ರಿಯಾ ಯೋಜನೆ ಸಲ್ಲಿಸಲು ಪೋರ್ಟಲ್‌ನಲ್ಲಿ ಅವಕಾಶವಿದೆ. ಜೊತೆಗೆ ಶಾಲಾ ಕೊಠಡಿ, ಆರೋಗ್ಯ ಕೇಂದ್ರ, ಸರ್ಕಾರಿ ಕಟ್ಟಡಗಳ ದುರಸ್ತಿ, ನಿರ್ವಹಣೆ, ಕೃಷಿ ಹೊಂಡ, ವಿತರಣಾ ಕಾಲುವೆ, ಹನಿ ನೀರಾವರಿ, ಕಿರು ಅರಣ್ಯದಂತಹ ಯೋಜನೆಗಳನ್ನು ಕೈಗೊಳ್ಳಲು ಅವಕಾಶವಿದೆ. ಗ್ರಾಮೀಣ ಜನರು ಇದರ ಸದುಪಯೋಗ ಪಡೆಯಬೇಕು ಎಂದು ಖಂಡ್ರೆ ಮನವಿ ಮಾಡಿದರು.
- ವಿಬಿ ಜಿ ರಾಮ್ ಜಿಗೆ ಮೊದಲ ತ್ರೈಮಾಸಿಕದಲ್ಲಿ ₹2.900 ಕೋಟಿ ಬಿಡುಗಡೆ ಆಗಿದೆ. ಹೀಗಾಗಿ ಗ್ರಾಮೀಣ ಭಾಗದಲ್ಲಿ ಉದ್ಯೋಗ ಸಮಸ್ಯೆ ಬರುವುದಿಲ್ಲ ಎಂದರು.


## ಕೇಂದ್ರೀಯ ಪ್ರೌಢಶಾಲಾ ಪರೀಕ್ಷಾ ಮಂಡಳಿಗೆ ಸೂಚನೆ ನೀಡಿದ ಸುಪ್ರೀಂ ಕೋರ್ಟ್

# ಅಪಾರ್: ಅರ್ಜಿ ನಮೂನೆ ತಿದ್ದುಪಡಿ ಮಾಡಿ

ನವದೆಹಲಿ (ಪಿಟಿಐ): ರಾಜ್ಯದ ಎಲ್ಲ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 'ಆಧಾರ್' ಮಾದರಿಯಲ್ಲಿ 12 ಅಂಕಿಯ 'ಅಪಾರ್' ವಿಶಿಷ್ಟ ಗುರುತಿನ ಚೀಟಿ ನೀಡುವ ಮುನ್ನ ಪೋಷಕರು ಒಪ್ಪಿಗೆ ಸೂಚಿಸುವ ಹಾಗೂ ನಿರಾಕರಿಸುವ ಅರ್ಜಿ ನಮೂನೆಗಳನ್ನು ತಿದ್ದುಪಡಿ ಮಾಡುವಂತೆ ಒಡಿಶಾ ಹೈಕೋರ್ಟ್ ನೀಡಿದ್ದ ಆದೇಶವನ್ನು ಜಾರಿಗೆ ತರಬೇಕು ಎಂದು ಕೇಂದ್ರೀಯ ಪ್ರೌಢಶಾಲಾ ಪರೀಕ್ಷಾ ಮಂಡಳಿಗೆ (ಸಿಬಿಎಸ್‌ಇ) ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

2020ರ ನೂತನ ಶಿಕ್ಷಣ ನೀತಿಯ ಪ್ರಕಾರ, 'ಅಪಾರ್' ಗುರುತಿನ ಚೀಟಿಗೆ ವಿದ್ಯಾರ್ಥಿಗಳ ಹೆಸರು ನೋಂದಣಿಗೂ ಮುಂಚೆ ಪೋಷಕರ ಒಪ್ಪಿಗೆ ಕಡ್ಡಾಯ. ಪೋಷಕರ ಆಧಾರ್, ಚುನಾವಣಾ ಆಯೋಗ ನೀಡಿದ ಮತದಾರರ ಗುರುತು ಚೀಟಿ, ಚಾಲನಾ ಪರವಾನಗಿ ಸಂಖ್ಯೆ (ಡ್ರೈವಿಂಗ್ ಲೈಸೆನ್ಸ್) ಲಿಂಕ್ ಮಾಡಿ ವಿದ್ಯಾರ್ಥಿಗಳ ಐ.ಡಿ ಸೃಷ್ಟಿಸಲಾಗುತ್ತದೆ. ಶೈಕ್ಷಣಿಕ ದಾಖಲೆ, ಪಠ್ಯೇತರ ಚಟುವಟಿಕೆಗಳನ್ನು ಒಂದೇ ವೇದಿಕೆಯಲ್ಲಿ ದಾಖಲಿಸಲು ಹಾಗೂ ಅಂಕಪಟ್ಟಿಗಳನ್ನು ಶೇಖರಿಸಿಡಲು 'ಅಪಾರ್' ನೆರವಾಗಲಿದೆ.

ವಿದ್ಯಾರ್ಥಿಗಳು 'ಅಪಾರ್' ಐ.ಡಿ ಸಿಂಧುವಾಗಬೇಕಾದರೆ ಆಧಾರ್ ಕಾರ್ಡ್ ಹೊಂದಿರುವುದನ್ನು ಕಡ್ಡಾಯಗೊಳಿಸಲಾಗಿದೆ. ಈ ಕುರಿತಂತೆ ನಾಲ್ವರು ವಿದ್ಯಾರ್ಥಿಗಳ ಹೆತ್ತವರು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ ಮತ್ತು ವಿ.ಮೋಹನಾ ಅವರ ಪೀಠವು,




### ಏಕರೂಪದ ಗುರುತಿನಚೀಟಿ

ಕೇಂದ್ರ ಶಾಲಾ ಶಿಕ್ಷಣ ಸಚಿವಾಲಯದ ರಾಷ್ಟ್ರೀಯ ಶಿಕ್ಷಣ ನೀತಿ 2020 (ಎನ್‌ಇಪಿ) ಯೋಜನೆ ಅಡಿ ವಿದ್ಯಾರ್ಥಿಗಳಿಗೆ ದೇಶದಾದ್ಯಂತ ಏಕರೂಪದ ಗುರುತಿನ ಚೀಟಿ ನೀಡಲು 'ಒಂದು ದೇಶ, ಏಕರೂಪದ ವಿದ್ಯಾರ್ಥಿ ಗುರುತಿನ ಚೀಟಿ' ಶಿಫಾರಸು ಮಾಡಲಾಗಿತ್ತು. ಅದರಂತೆ ಎಲ್ಲಾ ವಿದ್ಯಾರ್ಥಿಗಳಿಗೂ 'ಅಪಾರ್' ವಿಶಿಷ್ಟ ಗುರುತಿನ ಚೀಟಿ ನೀಡಲಾಗುತ್ತಿದೆ.

ಈಗಾಗಲೇ ರಾಜ್ಯ ಪಠ್ಯಕ್ರಮದ ಶಾಲೆಗಳ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದ ಎಸ್‌ಟಿಎಸ್ (ಸ್ಟೂಡೆಂಟ್ ಟ್ರ್ಯಾಕಿಂಗ್ ಸಿಸ್ಟಮ್) ಗುರುತಿನ ಚೀಟಿ ಮತ್ತು ಕೇಂದ್ರ ಸರ್ಕಾರದ ಪಿಇಎನ್ ನಂಬರ್ (ಪರ್ಮನೆಂಟ್ ಎಜ್ಯುಕೇಷನ್ ನಂಬರ್) ಚಾಲ್ತಿಯಲ್ಲಿ ಇದೆ.

ಅರ್ಜಿಗಳನ್ನು ತಿದ್ದುಪಡಿ ಮಾಡುವಂತೆ ಒಡಿಶಾ ಹೈಕೋರ್ಟ್ ನೀಡಿರುವ ಆದೇಶವನ್ನು ಜಾರಿಗೊಳಿಸುವಂತೆ ತಿಳಿಸಿದೆ.

ಹೈಕೋರ್ಟ್ ನೀಡಿದ್ದ ಆದೇಶವನ್ನು ಕೇಂದ್ರ ಸರ್ಕಾರವು ಪ್ರಶ್ನಿಸಿಲ್ಲ. ಹೀಗಾಗಿ, ರಾಷ್ಟ್ರದಾದ್ಯಂತ ನಮೂನೆಗಳನ್ನು ತಿದ್ದುಪಡಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ನ್ಯಾಯಪೀಠ ಆದೇಶಿಸಿದೆ.

Publication Date
21/07/2026

Presented by

# ವಿಶ್ವ ಚಾಂಪಿಯನ್ನರಿಗೆ ಆತ್ಮೀಯ ಸ್ವಾಗತ

## ಮ್ಯಾಡ್ರಿಡ್‌ನಲ್ಲಿ ವಿಜಯೋತ್ಸವ

- 10 ಲಕ್ಷಕ್ಕೂ ಅಧಿಕ ಮಂದಿ ಭಾಗಿ

ಮ್ಯಾಡ್ರಿಡ್ (ಎಎಫ್‌ಪಿ): ವಿಶ್ವಕಪ್ ಫುಟ್‌ಬಾಲ್ ನೂತನ ಚಾಂಪಿಯನ್ ಸ್ಪೇನ್ ತಂಡವು ಅಮೆರಿಕದಿಂದ ಸೋಮವಾರ ಮಧ್ಯಾಹ್ನ ಇಲ್ಲಿಗೆ ಬಂದಿಳಿದಾಗ ಸಾಕಷ್ಟು ಸಂಖ್ಯೆಯಲ್ಲಿ ಸೇರಿದ್ದ ಅಭಿಮಾನಿಗಳು ಭವ್ಯ ಸ್ವಾಗತ ಕೋರಿದರು.

ಅಮೆರಿಕದ ನ್ಯೂಜರ್ಸಿಯಲ್ಲಿ ಸ್ಪೇನ್ ತಂಡ ಫೈನಲ್‌ನಲ್ಲಿ ಅರ್ಜೆಂಟೀನಾವನ್ನು ಸೋಲಿಸಿದ ಬಳಿಕ ಸ್ಪೇನ್ ರಾಜಧಾನಿಯಲ್ಲಿ ರಾತ್ರಿಯಿಡೀ ಸಂಭ್ರಮಾಚರಣೆ ನಡೆದಿತ್ತು. ಆದರೂ, ನಿದ್ದೆಯನ್ನೂ ಲೆಕ್ಕಿಸದೆ ಅಭಿಮಾನಿಗಳು ಸೋಮವಾರ ರಾತ್ರಿ ನಡೆದ ತಂಡದ ವಿಜಯೋತ್ಸವದ ಪರೇಡ್‌ನಲ್ಲಿ ಪಾಲ್ಗೊಂಡರು. ಸಾಗರೋಪಾದಿಯಲ್ಲಿ ಕಿಕ್ಕಿರಿದು ನೆರೆದಿದ್ದ ಅವರು ನೆಚ್ಚಿನ ಆಟಗಾರರನನ್ನು ಕಣ್ತುಂಬಿಕೊಂಡರು. ಕೆಲವರು ರಸ್ತೆ ಪಕ್ಕದ ಕಟ್ಟಡ, ಕಂಬ, ಮರಗಳನ್ನೇರಿ ಕುಳಿತುಕೊಂಡಿದ್ದೂ ಕಂಡುಬಂತು.

ತಂಡದ ನಾಯಕ ರಾಡ್ರಿ ಅವರು ವಿಶ್ವಕಪ್ ಟ್ರೋಫಿ ಎತ್ತಿಹಿಡಿದು ವಿಮಾನದಿಂದ ಇಳಿದರು. ಉಳಿದ ಆಟಗಾರರುಅವರನ್ನುಹಿಂಬಾಲಿಸಿದರು. ಭಾನುವಾರ ನಡೆದ ಫೈನಲ್‌ನಲ್ಲಿ ಲಾ ರೋಜಾ ಪಡೆ 1-0 ಗೋಲಿನಿಂದ ಅರ್ಜೆಂಟೀನಾ ತಂಡವನ್ನು ಸೋಲಿಸಿತ್ತು.

ಆಟಗಾರರು ನಿಗದಿಯಂತೆ ಸ್ಪೇನ್ ದೊರೆ ಆರನೇ ಫಿಲಿಪ್ ಅವರನ್ನು ಮ್ಯಾಡ್ರಿಡ್ ಹೊರವಲಯದಲ್ಲಿರುವ ಝರ್ಝುಯೆಲಾ ಅರಮನೆಯಲ್ಲಿ ಭೇಟಿಯಾದರು. ಬಳಿಕ ತಂಡವು, ದೇಶದ ಪ್ರಧಾನಿ ಪೆಡ್ರೊ ಸ್ಯಾಂಚೆಝ್ ಅವರನ್ನು ಆಡಳಿತ ಕೇಂದ್ರವಾದ ಲಾ ಮೊಂಕ್ಲೊವಾದಲ್ಲಿ ಭೇಟಿಯಾಯಿತು.

ನಂತರ, ರಾಡ್ರಿ ಪಡೆಯು ಮ್ಯಾಡ್ರಿಡ್‌ನಲ್ಲಿ ತೆರೆದ ಬಸ್ ಮೇಲೆ ವಿಜಯೋತ್ಸವದಲ್ಲಿ ಭಾಗಿಯಾಯಿತು. ಪ್ರಧಾನಿ ಕಚೇರಿಯಿಂದ ಮೆರವಣಿಗೆ ಆರಂಭವಾಯಿತು.

ಪರೇಡ್ ಮಾರ್ಗದುದ್ದಕ್ಕೂ ಸುಮಾರು 10 ಲಕ್ಷ ಜನರು ಸೇರಿದ್ದರು. ಹೀಗಾಗಿ ಹೆಚ್ಚುವರಿ ಭದ್ರತಾ ವ್ಯವಸ್ಥೆ ಏರ್ಪಡಿಸಲಾಗಿತ್ತು.

ಸ್ಪೇನ್‌ನ ಮಹಿಳಾ ತಂಡವು ಮೂರು ವರ್ಷಗಳ ಹಿಂದೆ (2023) ವಿಶ್ವಕಪ್ ಚಾಂಪಿಯನ್ ಆಗಿತ್ತು. ಈಗ ಪುರುಷರ ತಂಡವೂ ಚಾಂಪಿಯನ್ ಆಗಿದ್ದು, ಏಕಕಾಲದಲ್ಲಿ ಎರಡೂ ಟ್ರೋಫಿಗಳನ್ನು ಹೊಂದಿರುವ ಮೊದಲ ತಂಡವೆಂಬ ಶ್ರೇಯಸ್ಸು ಈ ದೇಶದ್ದಾಗಿದೆ.

### ಸ್ಪೇನ್ ಅಜೇಯ ದಾಖಲೆ

ಸ್ಪೇನ್ ಪುರುಷರ ತಂಡವು ಫಿಫಾ ವಿಶ್ವಕಪ್ ಸೇರಿದಂತೆ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಸತತ 38 ಪಂದ್ಯಗಳಲ್ಲಿ ಗೆಲುವು ದಾಖಲಿಸುವ ಮೂಲಕ ಅಜೇಯವಾಗಿ ಉಳಿದುಕೊಂಡಿದೆ. ಈ ಮೂಲಕ ಸತತ 37 ಪಂದ್ಯಗಳನ್ನು ಗೆದ್ದಿದ್ದ ಇಟಲಿ ತಂಡದ ದಾಖಲೆಯನ್ನು ಸ್ಪೇನ್ ಮುರಿಯಿತು.



ವಿಶ್ವ ಚಾಂಪಿಯನ್ ಸ್ಪೇನ್ ಫುಟ್‌ಬಾಲ್ ತಂಡದ ಆಟಗಾರರನ್ನು ದೊರೆ ಆರನೇ ಫಿಲಿಪ್ (ಮಧ್ಯ) ಅವರು ಮ್ಯಾಡ್ರಿಡ್‌ನ ಹೊರವಲಯದಲ್ಲಿರುವ ಝರ್ಝುಯೆಲಾ ಅರಮನೆಯಲ್ಲಿ ಬರಮಾಡಿಕೊಂಡರು 'ಎಕ್ಸ್' ಚಿತ್ರ

### ಪಂದ್ಯದ ಬಳಿಕವೂ ರೆಡ್ ಕಾರ್ಡ್


ಪಂದ್ಯ ಮುಗಿದ ತಕ್ಷಣ ಸ್ಪೇನ್ ಆಟಗಾರರು ಗೆಲುವಿನ ಸಂಭ್ರಮಾಚರಣೆಗೆ ಮೈದಾನಕ್ಕೆ ಓಡಿ ಬಂದರು. ಈ ವೇಳೆ ಅರ್ಜೆಂಟೀನಾದ ಮಿಡ್‌ಫೀಲ್ಡರ್ ಲಿಯಾಂಡ್ರೊ ಪರೆಡೆಸ್ ಅವರು ಓಡಿ ಬಂದು ಸ್ಪೇನ್‌ನ ಡಿಫೆಂಡರ್ ಎರಿಕ್ ಗಾರ್ಸಿಯಾ ಅವರನ್ನು ತಳ್ಳಿದರು.ಈ ವೇಳೆ ಗಾರ್ಸಿಯಾ ಬೆಂಬಲಕ್ಕೆ ಧಾವಿಸಿದ ಸ್ಪೇನ್ ಯುವ ಆಟಗಾರ ಗಾವಿ ಅವರನ್ನೂ ಪರೆಡೆಸ್ ತಳ್ಳಿ, ಅವರ ಜರ್ಸಿಯನ್ನು ಎಳೆದರು. ಇದರಿಂದಾಗಿ ಆಟಗಾರರ ನಡುವಿನ ಘರ್ಷಣೆ ತಾರಕಕ್ಕೇರಿತು.

ಈ ಅಶಿಸ್ತಿನ ವರ್ತನೆಯನ್ನು ಗಂಭೀರವಾಗಿ ಪರಿಗಣಿಸಿದ ರೆಫರಿ ಅವರು ಪೆರೆಡೆಸ್ ಅವರಿಗೆ ಕೆಂಪು ಕಾರ್ಡ್ ಪ್ರದರ್ಶಿಸಿದರು. ಅರ್ಜೆಂಟೀನಾ ಮುಖ್ಯ ಕೋಚ್ ಲಿಯೋನೆಲ್ ಸ್ಕಾಲೋನಿ ಹಾಗೂ ಸಹ ಕೋಚ್ ನಿಕೋಲಸ್ ಒಟಮೆಂಡಿ ಮೈದಾನಕ್ಕೆ ಬಂದು ಪರೆಡೆಸ್ ಮತ್ತು ಇತರ ಆಟಗಾರರನ್ನು ತಡೆದು ಪರಿಸ್ಥಿತಿಯನ್ನು ತಿಳಿಗೊಳಿಸಲು ಹರಸಾಹಸಪಟ್ಟರು.

2030ರ ವಿಶ್ವಕಪ್‌ಗೆ ಸ್ಪೇನ್ ಜಂಟಿ ಆತಿಥ್ಯ ವಹಿಸಿದ್ದು, ತವರಿನಲ್ಲಿ ಟ್ರೋಫಿ ಉಳಿಸಿಕೊಳ್ಳುವ ಅವಕಾಶ ಹೊಂದಿದೆ. ಪೋರ್ಚುಗಲ್ ಮತ್ತು ಮೊರಾಕ್ಕೊ ಕೂಡ ಆತಿಥ್ಯದಲ್ಲಿ ಭಾಗಿಯಾಗಿವೆ.

**ಬಾಲಕ ಸಾವು:** ಮ್ಯಾಡ್ರಿಡ್‌ನಲ್ಲಿ ವಿಜಯೋತ್ಸವದ ವೇಳೆ ಕಾರಂಜಿಯ ಕಂಬ ಜನರ ಭಾರ ತಾಳಲಾರದೇ ಕುಸಿದ ಪರಿಣಾಮ 13 ವರ್ಷದ ಬಾಲಕ ಮೃತಪಟ್ಟಿದ್ದಾನೆ.

### ಭಾರತದಲ್ಲೂ ಕಾಲ್ಚಳಕ ತೋರಿದ್ದ ಟೊರೆಸ್



ಸ್ಪೇನ್ ತಂಡದ ಗೆಲುವಿನ ರೂವಾರಿ ಫೆರಾನ್ ಟೊರೆಸ್ ಅವರು 2017ರಲ್ಲಿ ಭಾರತದ ಆತಿಥ್ಯದಲ್ಲಿ ನಡೆದಿದ್ದ ಫಿಫಾ 17 ವರ್ಷದೊಳಗಿನವರ ವಿಶ್ವಕಪ್‌ನಲ್ಲಿ ಪಾಲ್ಗೊಂಡು ಕಾಲ್ಚಳಕ ಮೆರೆದಿದ್ದರು.

26 ವರ್ಷದ ಟೊರೆಸ್ ಅವರು ಭಾನುವಾರ ನಡೆದ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಅರ್ಜೆಂಟೀನಾ ವಿರುದ್ಧ ಸ್ಪೇನ್ ಪರ ನಿರ್ಣಾಯಕ ಗೋಲು ಹೊಡೆದು ಮಿಂಚಿದರು.

ಒಂಬತ್ತು ವರ್ಷಗಳ ಹಿಂದೆ, 17 ವರ್ಷದ ಆಟಗಾರನಾಗಿದ್ದ ಟೊರೆಸ್ ಭಾರತಕ್ಕೆ ಬಂದಿದ್ದರು. ಯೂತ್ ವಿಶ್ವಕಪ್‌ನಲ್ಲಿ ಸ್ಪೇನ್ ತಂಡವು ಬೆಳ್ಳಿ ಪದಕ ಗೆಲ್ಲುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

ಟೊರೆಸ್ ಅವರ ಅಸಾಧಾರಣ ಪ್ರತಿಭೆಯು ಕೊಚ್ಚಿಯ ಜವಾಹರಲಾಲ್ ನೆಹರು ಕ್ರೀಡಾಂಗಣ ಮತ್ತು ಕೋಲ್ಕತ್ತದ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣದಲ್ಲಿ ಬಹಳ ಹಿಂದೆಯೇ ಅನಾವರಣವಾಗಿತ್ತು.

Publication Date
21/07/2026

Presented by

# ಈಜು: ದಿನಿಧಿಗೆ ಮತ್ತೊಂದು ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಉದಯೋನ್ಮುಖ ತಾರೆ ದಿನಿಧಿ ದೇಸಿಂಗು ಅವರು ಬ್ಯಾಂಕಾಕ್‌ನಲ್ಲಿ ಸೋಮವಾರ ಮುಕ್ತಾಯವಾದ 12ನೇ ಏಷ್ಯನ್ ವಯೋವರ್ಗದ ಈಜು ಚಾಂಪಿಯನ್‌ಷಿಪ್‌ನ 16 ವರ್ಷದೊಳಗಿನ ಬಾಲಕಿಯರ 100 ಮೀ. ಫ್ರೀಸ್ಟೈಲ್‌ನಲ್ಲಿ ಬೆಳ್ಳಿ ಪದಕ ಜಯಿಸಿದರು.

ಬೆಂಗಳೂರಿನ ಈಜುಪಟು 56.67 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಚೀನಾದ ಜಿಯಾರುಯಿ ಲಿ (54.44 ಸೆ.) ಕೂಟ ದಾಖಲೆಯೊಂದಿಗೆ ಸ್ವರ್ಣ ಗೆದ್ದರೆ, ಅದೇ ದೇಶದ ಯಿಬೈ ಶಿ (56.77 ಸೆ.) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ದಿನಿಧಿ ಅವರು ಕೂಟದಲ್ಲಿ ಗೆದ್ದ ಮೂರನೇ ಪದಕವಿದು. ಮೊದಲ ದಿನವಾದ ಶನಿವಾರ ಬಾಲಕಿಯರ 200 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಚಿನ್ನ ಜಯಿಸಿದ್ದ ಅವರು 4x100 ಮೀ. ಮೆಡ್ಲೆ ರಿಲೆಯಲ್ಲಿ ಸಾನ್ವಿ ದೇಶ್‌ವಾಲ್, ಜಿಯಾ ಯಾದವ್ ಹಾಗೂ ತನಿಷಿ ಗುಪ್ತಾ ಜೊತೆಗೂಡಿ ಕಂಚಿನ ಪದಕ ಜಯಿಸಿದ್ದರು.



ಪದಕದೊಂದಿಗೆ ದಿನಿಧಿ ದೇಸಿಂಗು

ಉಳಿದಂತೆ ಅಂತಿಮ ದಿನ ಭಾರತದ ಸ್ಪರ್ಧಿಗಳಿಗೆ ಯಾವುದೇ ಪದಕ ಒಲಿಯಲಿಲ್ಲ. ಕರ್ನಾಟಕದ ಸಮರ್ಥ್ ಗೌಡ ಅವರನ್ನೊಳಗೊಂಡ ತಂಡವು 16 ವರ್ಷದೊಳಗಿನ ಬಾಲಕರ 4x200 ಮೀ. ರಿಲೆಯಲ್ಲಿ ನಾಲ್ಕನೇ ಸ್ಥಾನ ಪಡೆದುಕೊಂಡಿತು. ಸಮರ್ಥ್ ಅವರು ಇದೇ ವಯೋಮಾನದ 100 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ 6ನೇ ಸ್ಥಾನಿಯಾಗಿ ಸ್ಪರ್ಧೆ ಮುಗಿಸಿದರು.

ಬೆಂಗಳೂರಿನ ದರ್ಶನ್ ಎಸ್. ಅವರು ಬಾಲಕರ 200 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಭಾನುವಾರ ಕಂಚಿನ ಪದಕ ಜಯಿಸಿದ್ದರು.

Publication Date
21/07/2026

Presented by ಪ್ರಜಾವಾಣಿ

# ಅರ್ಜುನ್‌ಗೆ ಜಂಟಿ ಅಗ್ರಸ್ಥಾನ

## ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್: ಗುಕೇಶ್ ವಿರುದ್ಧ ಜಯ

ಚೆನ್ನೈ (ಪಿಟಿಐ): ವಿಶ್ವ ಚಾಂಪಿಯನ್ ಗುಕೇಶ್ ಅವರು ಮಾಡಿದ ತಪ್ಪುಗಳನ್ನು ಬಂಡವಾಳ ಮಾಡಿಕೊಂಡು ಜಯ ಸಾಧಿಸಿದ ಅರ್ಜುನ್ ಇರಿಗೇಶಿ, ಸೋಮವಾರ ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿಯ ಐದನೇ ಸುತ್ತಿನ ನಂತರ ಜಂಟಿ ಅಗ್ರಸ್ಥಾನಕ್ಕೆ ಏರಿದರು.

ಇನ್ನು ಎರಡು ಸುತ್ತುಗಳು ಪಂದ್ಯ ಉಳಿದಿರುವಂತೆ ಅರ್ಜುನ್ ಅವರು ಫ್ರಾನ್ಸ್‌ನ ಗ್ರ್ಯಾಂಡ್‌ಮಾಸ್ಟರ್ ಅಲಿರೇಜಾ ಫಿರೋಝ್‌ಜಾ ಜೊತೆ (ತಲಾ 3.5 ಪಾಯಿಂಟ್ಸ್) ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ನಾಲ್ಕನೇ ಸುತ್ತಿನವರೆಗೆ ಅಗ್ರಸ್ಥಾನದಲ್ಲಿದ್ದ ಅಲಿರೇಝಾ ಸೋಮವಾರ ರಷ್ಯಾದ ಗ್ರ್ಯಾಂಡ್‌ಮಾಸ್ಟರ್ ಡಿಮಿತ್ರಿ ಅಂದ್ರೇಯಿಕಿನ್ ಅವರ ಜೊತೆ ಡ್ರಾ ಮಾಡಿಕೊಂಡರು.

ಉಜ್ಬೇಕಿಸ್ತಾನದ ಗ್ರ್ಯಾಂಡ್‌ಮಾಸ್ಟರ್ ನೊದಿರ್ಬೆಕ್ ಅಬ್ದುಸತ್ತಾರೋವ್ ಅವರು ಕಪ್ಪು ಕಾಯಿಗಳಲ್ಲಿ ಆಡಿ ಭಾರತದ ನಿಹಾಲ್ ಸರಿನ್ (2) ಅವರನ್ನು ಸೋಲಿಸಿದರು. ಇದು ಟೂರ್ನಿಯಲ್ಲಿ ಅಬ್ದುಸತ್ತಾರೋವ್ ಅವರಿಗೆ ಮೊದಲ ಜಯವಾಗಿದ್ದು, ಮೂರು ಪಾಯಿಂಟ್‌ಗಳೊಡನೆ ಏಕಾಂಗಿಯಾಗಿ ಎರಡನೇ ಸ್ಥಾನದಲ್ಲಿದ್ದಾರೆ.



ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ ಚಿತ್ರ: ಎಂಜಿಡಿ1

ಭಾರತದ ಇನ್ನೊಬ್ಬ ಆಟಗಾರ ಎಂ.ಪ್ರಾಣೇಶ್ (2) ಅವರು ಜರ್ಮನಿಯ ವಿನ್ಸೆಂಟ್ ಕೀಮರ್ (2) ಜೊತೆ ಡ್ರಾ ಮಾಡಿಕೊಂಡರು.

ಎಂಟು ಆಟಗಾರರು ಭಾಗವಹಿಸಿರುವ ಈ ಟೂರ್ನಿಯು ₹75 ಲಕ್ಷ ಬಹುಮಾನ ಹೊಂದಿದೆ.

**ಆರನೇ ಸುತ್ತಿನ ಮುಖಾಮುಖಿ:** ಹ್ಯಾನ್ಸ್ ನೀಮನ್– ಡಿಮಿತ್ರಿ ಅಂದ್ರೇಯಿಕಿನ್; ನೊದಿರ್ಬೆಕ್ ಅಬ್ದುಸತ್ತಾರೋವ್– ಅಲಿರೇಝಾ ಫೀರೋಜ್‌ಝಾ; ಪ್ರಾಣೇಶ್– ಡಿ.ಗುಕೇಶ್; ಅರ್ಜುನ್ ಇರಿಗೇಶಿ– ನಿಹಾಲ್ ಸರಿನ್.

Publication Date
21/07/2026

Presented by ಪ್ರಜಾವಾಣಿ

## ವ್ಯಾಪಾರ, ತಂತ್ರಜ್ಞಾನ, ಪ್ರವಾಸೋದ್ಯಮ ಕ್ಷೇತ್ರಗಳಲ್ಲಿನ ಸಂಬಂಧ ವೃದ್ಧಿಗೆ ಕ್ರಮ

# ಮೊಲ್ಡೊವಾಕ್ಕೆ ಮುರ್ಮು ಭೇಟಿ

ಚಿಸಿನೋ(ಮೊಲ್ಡೊವಾ) (ಪಿಟಿಐ): ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೋಮವಾರ ಮೊಲ್ಡೊವಾಕ್ಕೆ ಐತಿಹಾಸಿಕ ಭೇಟಿ ನೀಡಿದರು.

ಭಾರತದ ರಾಷ್ಟ್ರಪತಿಯೊಬ್ಬರು ಈ ದೇಶಕ್ಕೆ ಭೇಟಿ ನೀಡಿರುವುದು ಇದೇ ಮೊದಲು.

'ಮುರ್ಮು ಅವರನ್ನು ಮೊಲ್ಡೊವಾ ಉಪಪ್ರಧಾನಿ ಮತ್ತು ವಿದೇಶಾಂಗ ಸಚಿವ ಮಿಹೈ ಪೋಪ್ಸೊಯಿ ಅವರು ಸ್ವಾಗತಿಸಿದರು' ಎಂದು ರಾಷ್ಟ್ರಪತಿ ಭವನದ 'ಎಕ್ಸ್'ನಲ್ಲಿ ಪೋಸ್ಟ್ ಮಾಡಲಾಗಿದೆ.

ವ್ಯಾಪಾರ, ತಂತ್ರಜ್ಞಾನ, ಪ್ರವಾಸೋದ್ಯಮ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿನ ಸಂಬಂಧವನ್ನು ಬಲಪಡಿಸುವ ನಿಟ್ಟಿನಲ್ಲಿ ರಾಷ್ಟ್ರಪತಿ ಅವರು ಈ ಪ್ರವಾಸ ಕೈಗೊಂಡಿದ್ದಾರೆ.

ಮೊಲ್ಡೊವಾ–ಭಾರತ ಸಂಸದೀಯ ಸಮಿತಿಯ ಸದಸ್ಯರ ಜೊತೆ ಮತ್ತು ಭಾರತೀಯ ಸಮುದಾಯದೊಂದಿಗೆ ಮುರ್ಮು ಅವರು ಸಂವಾದ ನಡೆಸಿದರು.

ಮುರ್ಮು ಅವರು ಮಂಗಳವಾರ ಮತ್ತು ಬುಧವಾರ ಉತ್ತರ ಮೆಸಿಡೋನಿಯಾಕ್ಕೆ ಭೇಟಿ ನೀಡಲಿದ್ದಾರೆ. ಗುರುವಾರ ಮತ್ತು ಶುಕ್ರವಾರ ರೊಮೇನಿಯಾಕ್ಕೆ ಭೇಟಿ ನೀಡಿದ ಬಳಿಕ ತಮ್ಮ ತ್ರಿರಾಷ್ಟ್ರ ಪ್ರವಾಸವನ್ನು ಮುಕ್ತಾಯಗೊಳಿಸಲಿದ್ದಾರೆ.

ಗ್ರಾಹಕ ವ್ಯವಹಾರ ಮತ್ತು ಆಹಾರ ಖಾತೆ ರಾಜ್ಯ ಸಚಿವೆ ಜಯಂತಿಬಾಯಿ ಬಂಭಾನಿಯಾ, ರಾಜ್ಯಸಭಾ ಸದಸ್ಯ ದಿನೇಶ್ ಶರ್ಮಾ ಮತ್ತು ಲೋಕಸಭಾ ಸದಸ್ಯ ವಿಜಯ್ ಬಘೇಲ್ ಅವರ ನಿಯೋಗವು ರಾಷ್ಟ್ರಪತಿ ಅವರ ಜೊತೆಗೆ ಪ್ರವಾಸ ಕೈಗೊಂಡಿದೆ.

ಮೊಲ್ಡೊವಾದಲ್ಲಿ ಸುಮಾರು ಎರಡು ಸಾವಿರ ಭಾರತೀಯರಿದ್ದಾರೆ. ಇವರಲ್ಲಿ 1,800 ವೈದ್ಯಕೀಯ ವಿದ್ಯಾರ್ಥಿಗಳೇ ಇದ್ದಾರೆ.



ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮೊಲ್ಡೊವಾ ರಾಷ್ಟ್ರಪತಿ ಮೈತಾ ಸಂದು ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು —ಪಿಟಿಐ ಚಿತ್ರ

Publication Date
21/07/2026

Presented by ಪ್ರಜಾವಾಣಿ

## ❖ ಸಿಂಧೂ ಜಲ ಒಪ್ಪಂದ: ಕೆನಡಾ ಬೆಂಬಲ ಕೋರಿದ ಪಾಕಿಸ್ತಾನ

- ಸಿಂಧೂ ಜಲ ಒಪ್ಪಂದವನ್ನು ಮರುಸ್ಥಾಪಿಸುವ ಸಂಬಂಧ ಪಾಕಿಸ್ತಾನದ ಉಪ ಪ್ರಧಾನಿ ಇಶಾಕ್ ದಾರ್ ಅವರು ಕೆನಡಾದ ಸಹಾಯವನ್ನು ಕೋರಿದ್ದಾರೆ.
- ಎರಡು ದಿನಗಳ ಭೇಟಿಗಾಗಿ ಪಾಕಿಸ್ತಾನಕ್ಕೆ ಬಂದಿರುವ ಕೆನಡಾದ ವಿದೇಶಾಂಗ ಸಚಿವೆ ಅನಿತಾ ಆನಂದ್ ಅವರೊಂದಿಗೆ ಸೋಮವಾರ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ಪ್ರಸ್ತಾಪಿಸಿದ್ದಾರೆ.
- 1960ರ ಸಿಂಧೂ ಜಲ ಒಪ್ಪಂದವು ಭಾರತ ಮತ್ತು ಪಾಕಿಸ್ತಾನದ ನಡುವಿನ ವಿಶ್ವಬ್ಯಾಂಕ್ ಮಧ್ಯಸ್ಥಿಕೆಯ ಒಪ್ಪಂದವಾಗಿದೆ. ಇದು ಸಿಂಧೂ ಜಲಾನಯನ ಪ್ರದೇಶದ ಆರು ನದಿಗಳ ನೀರಿನ ಹಂಚಿಕೆಯನ್ನು

ನಿಯಂತ್ರಿಸುತ್ತದೆ. ಪೂರ್ವ ನದಿಗಳನ್ನು ಭಾರತಕ್ಕೆ ಮತ್ತು ಪಶ್ಚಿಮದ ನದಿಗಳನ್ನು ಹೆಚ್ಚಾಗಿ ಪಾಕಿಸ್ತಾನಕ್ಕೆ ಹಂಚಿಕೆ ಮಾಡಲಾಗಿದೆ' ಎಂದು ತಿಳಿಸಿದ್ದಾರೆ.

- 'ಭಾರತವು ಸಿಂಧೂ ನದಿ ನೀರು ಒಪ್ಪಂದವನ್ನು ತಕ್ಷಣವೇ ಮರು ಸ್ಥಾಪಿಸಲು, ನೀರನ್ನು ಯುದ್ಧ ತಂತ್ರವಾಗಿ ಬಳಸುವುದನ್ನು ಕೊನೆಗೊಳಿಸಲು ಹಾಗೂ ಅಂತರರಾಷ್ಟ್ರೀಯ ಕಾನೂನು ಮತ್ತು ಒಪ್ಪಂದವನ್ನು ಎತ್ತಿಹಿಡಿಯಲು ಕೆನಡಾ ಸೇರಿದಂತೆ ಮಿತ್ರ ರಾಷ್ಟ್ರಗಳ ಬೆಂಬಲವನ್ನು ಕೋರುತ್ತೇವೆ' ಎಂದು ದಾರ್ ಮನವಿ ಮಾಡಿದ್ದಾರೆ.
- ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ದಾಳಿ ನಡೆಸಿದ ಒಂದು ದಿನದ ನಂತರದಿಂದ ಭಾರತವು ಈ ಒಪ್ಪಂದವನ್ನು ಅಮಾನತಿನಲ್ಲಿ ಇರಿಸಿದೆ.

# ಕರ್ನಾಟಕದ ನಾಲ್ಕನೇ ಪಂಪ್ಡ್ ಸ್ಟೋರೇಜ್ ಯೋಜನೆಗೆ ಪ್ರಸ್ತಾವ

• ಚಿರಂಜೀವಿ ಕುಲಕರ್ಣಿ

**ಬೆಂಗಳೂರು:** ರಾಜ್ಯದ ನಾಲ್ಕನೇ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನಲ್ಲಿ ಜಾರಿಗೊಳಿಸಲು ಸುಮಾರು 750 ಎಕರೆ ಭೂಮಿ ಬೇಕೆಂದು ಸೆರುಲಿಯನ್ ಎನರ್ಜಿ ಸೊಲ್ಯೂಷನ್ಸ್ ಕಂಪನಿಯು ಪ್ರಸ್ತಾವ ಸಲ್ಲಿಸಿದೆ. ಯೋಜನೆಯು 300 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಿದೆ.

ಮೇಲ್ಮಟ್ಟದ ಮತ್ತು ಕೆಳಮಟ್ಟದ ಸಂಗ್ರಹಾಗಾರಗಳನ್ನು ನಿರ್ಮಿಸಲು ಸಂಕನೂರು ಗ್ರಾಮದಲ್ಲಿ 65 ಎಕರೆ ಅರಣ್ಯ ಭೂಮಿ ಸೇರಿ ಸುಮಾರು 747 ಎಕರೆ ಭೂಮಿ ಬೇಕೆಂದು ಕಂಪನಿಯು ಕೇಳಿದೆ.

ಯೋಜನಾ ಸ್ಥಳದಿಂದ ಸುಮಾರು 12 ಕಿ.ಮೀ ದೂರದಲ್ಲಿ ಹರಿಯುವ ಭೀಮಾ ನದಿಯಿಂದ 0.243 ಟಿಎಂಸಿ ಅಡಿಯಷ್ಟು ನೀರನ್ನು ಒಂದೇ ಬಾರಿಗೆ ಎತ್ತುವ ಉದ್ದೇಶ ಯೋಜನೆಯದ್ದು. ಅದಕ್ಕೆ ಇತ್ತೀಚೆಗಷ್ಟೇ ನಿಯಮಗಳನ್ನು ರೂಪಿಸಲಾಗಿದೆ ಎಂದು ಅರಣ್ಯ ಇಲಾಖೆಯ ಮೂಲಗಳು ತಿಳಿಸಿವೆ.

ದೊಡ್ಡ ಪ್ರಮಾಣದ ಬ್ಯಾಟರಿ ಶಕ್ತಿ ಸಂಗ್ರಹಣಾ ವ್ಯವಸ್ಥೆಗಳ ಕೊರತೆಯಿರುವುದರಿಂದ, ದೇಶದಲ್ಲಿ ನವೀಕರಿಸಬಹುದಾದ ಇಂಧನ ಸಂಪನ್ಮೂಲಗಳ ಪ್ರಮುಖ ಭಾಗವಾಗಿ ಪಂಪ್ಡ್ ಸ್ಟೋರೇಜ್ ಯೋಜನೆಗಳಿಗೆ ಆದ್ಯತೆ ದೊರಕುತ್ತಿದೆ. ಇಂಧನ ಬಳಕೆಯು ಹೆಚ್ಚಾಗುತ್ತಿದ್ದಂತೆ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಪರಿಸರ ಸೂಕ್ಷ್ಮ ಪ್ರದೇಶಗಳಲ್ಲೂ ಇಂಥ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಮುಂದಾಗಿರುವುದರಿಂದ ಪರಿಸರವಾದಿಗಳಿಂದ ವಿರೋಧ ವ್ಯಕ್ತವಾಗುತ್ತಿದೆ.


ಭೀಮಾ ನದಿ

'ಯೋಜನೆಯು ಪರಿಸರದ ಮೇಲೆ ಹೆಚ್ಚಿನ ಪರಿಣಾಮ ಬೀರುವುದಿಲ್ಲ' ಎಂದು ಕಂಪನಿಯು ಭರವಸೆ ನೀಡಿದೆ. 'ಒಮ್ಮೆ ಪಡೆದ ನೀರನ್ನು ಎರಡು ಸಂಗ್ರಹಾಗಾರ ಗಳ ನಡುವೆ ಮರುಪರಿಚಲನೆ ಮಾಡಲಾಗುತ್ತದೆ. ಕೆಳಗಿನ ಸಂಗ್ರಹಾಗಾರದಿಂದ ನೀರನ್ನು ಪಂಪ್ ಮಾಡಲು ನವೀಕರಿಸಬಹುದಾದ ಶಕ್ತಿಯನ್ನು ಬಳಸಲಾಗುತ್ತದೆ' ಎಂದು ತಿಳಿಸಿದೆ.

'ಯೋಜನೆಯ ಯಶಸ್ಸಿನ ಪ್ರಮಾಣ ಶೇ 80ರಷ್ಟಿರುತ್ತದೆ. ಸಂಗ್ರಹಿಸಿದ ವಿದ್ಯುತ್ ಅನ್ನು ಬಳಸಲು ಹಾಗೂ ಪಂಪಿಂಗ್ ಹಂತದಲ್ಲಿ ಪೂರೈಸಲು, 220 ಕೆವಿ ಡಬಲ್ ಸರ್ಕ್ಯೂಟ್ ಪ್ರಸರಣ ಮಾರ್ಗವನ್ನು ಕೆಪಿಟಿಸಿಎಲ್‌ನ ಶಹಾಬಾದ್ ಉಪಕೇಂದ್ರಕ್ಕೆ ಸಂಪರ್ಕಿಸಲಾಗುವುದು. ಅಂತಿಮ ಸಂಪರ್ಕದ ಕುರಿತು ಮುಂದಿನ ದಿನಗಳಲ್ಲಿ ನಿರ್ಧಾರ ಕೈಗೊಳ್ಳಲಾಗುವುದು' ಎಂದು ತಿಳಿಸಿದೆ.

### 'ದುಷ್ಪರಿಣಾಮ ಆಗದು ಎಂದು ಖಚಿತಪಡಿಸಲಿ'

'ಚಿತ್ತಾಪುರದ ವನ್ಯಜೀವಿ ವೈವಿಧ್ಯದ ಬಗ್ಗೆ ಸಮರ್ಪಕ ದಾಖಲೆಗಳಿಲ್ಲದಿದ್ದರೂ, ಆ ಪ್ರದೇಶದಲ್ಲಿ ಯಾವುದೇ ಯೋಜನೆಯು ಪರಿಸರ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರದಂತೆ ಸರ್ಕಾರವು ಖಚಿತಪಡಿಸಿಕೊಳ್ಳಬೇಕು' ಎಂದು ಕಲಬುರಗಿಯ ಅರ್ಥಶಾಸ್ತ್ರಜ್ಞರಾದ ಸಂಗೀತ ಕಟ್ಟಿಮನಿ ಪ್ರತಿಪಾದಿಸುತ್ತಾರೆ. 'ಯೋಜನೆಗಳಿಗಾಗಿ ಕೃಷಿ ಯೋಗ್ಯ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದನ್ನು ತಪ್ಪಿಸಿದರೆ ರೈತರ ಜೀವನೋಪಾಯಕ್ಕೆ ಧಕ್ಕೆಯಾಗದು. ಭೂಮಿಯನ್ನು ಕಳೆದುಕೊಳ್ಳುವ ರೈತರಿಗೆ ಸೂಕ್ತ ಪರಿಹಾರವನ್ನೂ ಸರ್ಕಾರ ದೊರಕಿಸಬೇಕು' ಎಂಬುದು ಅವರ ಆಗ್ರಹ.

ಶರಾವತಿ ಕಣಿವೆಯ ಸಿಂಹಬಾಲದ ಸಿಂಗಳೀಕ ಅಭಯಾರಣ್ಯ ಮತ್ತು ಮೂಕಾಂಬಿಕಾ ವನ್ಯಜೀವಿ ಅಭಯಾರಣ್ಯದಲ್ಲಿ ಪ್ರಸ್ತಾಪಿಸಲಾದ ನಾಲ್ಕು ಪ್ರಮುಖ ಪಂಪ್ಡ್ ಸ್ಟೋರೇಜ್ ಯೋಜನೆಗಳ ಪೈಕಿ ಎರಡು ಯೋಜನೆಗಳಿಗೆ ವಿರೋಧ ವ್ಯಕ್ತವಾಗಿದ್ದು, 'ಪಶ್ಚಿಮ ಘಟ್ಟಗಳ ಅಲ್ಪಾವಧಿ ಹಾಗೂ ದೀರ್ಘಾವಧಿಯ ಪರಿಸರ ವ್ಯವಸ್ಥೆಗೆ ಇವು ಹಾನಿಕಾರಕವಾಗಲಿವೆ' ಎಂದು ಪರಿಸರ ಸಂರಕ್ಷಣಾವಾದಿಗಳು ಪ್ರತಿಪಾದಿಸಿದ್ದಾರೆ. ಬೆಳಗಾವಿಯ ಸವದತ್ತಿಯಲ್ಲಿ ಪ್ರಸ್ತಾಪಿಸಲಾದ ಪಂಪ್ಡ್ ಸ್ಟೋರೇಜ್ ಯೋಜನೆಯಿಂದ, ಆ ಪ್ರದೇಶದ ನರಿ, ತೋಳ, ಪಟ್ಟೆ ಕತ್ತೆ ಕಿರುಬ ಸೇರಿ ವನ್ಯಜೀವಿಗಳ ಮೇಲೆ ಮಾರಕ ಪರಿಣಾಮಗಳನ್ನು ಉಂಟು ಮಾಡುತ್ತದೆ ಎಂದು ದೂರಿದರೂ, ಟೀಕೆಗಳು ಬಲವಾಗಿಲ್ಲ.

Publication Date 21/07/2026

Presented by

# ಮನೆ ಬಾಗಿಲಿಗೆ ಪ್ರಮಾಣಪತ್ರ

## 'ನಿಮ್ಮ ಮತ ನಿಮ್ಮ ಹಕ್ಕು, ನಿಮ್ಮ ಮತ- ನಿಮ್ಮ ಬದುಕು'– ಗ್ಯಾರಂಟಿಗೆ ಸಿ.ಎಂ ಚಾಲನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಗೆ ಅಗತ್ಯ ದಾಖಲೆಗಳನ್ನು ಸುಲಭವಾಗಿ ಒದಗಿಸಲು ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸುಮಾರು 4.85 ಕೋಟಿ ಕುಟುಂಬಗಳ ಮನೆ ಬಾಗಿಲಿಗೆ ತೆರಳಿ ಉಚಿತ ಜಾತಿ ಪ್ರಮಾಣಪತ್ರ ಮತ್ತು ಶಾಶ್ವತ ನಿವಾಸಿ ಪ್ರಮಾಣಪತ್ರ (ಪಿಆರ್‌ಸಿ) ವಿತರಿಸಲು ಸರ್ಕಾರ ಮುಂದಾಗಿದೆ.

ಆ ಮೂಲಕ, ಇಡೀ ದೇಶದಲ್ಲಿ ಈ ದಾಖಲೆಯನ್ನು ಮನೆ ಮನೆಗೆ ತಲುಪಿಸುವ ಕಾರ್ಯ ಕೈಗೊಂಡ ಪ್ರಥಮ ರಾಜ್ಯ ಕರ್ನಾಟಕ ಆಗಲಿದೆ. ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಲು ಚುನಾವಣಾ ಆಯೋಗ ಸೂಚಿಸಿರುವ 11 ದಾಖಲೆಗಳಲ್ಲಿ ಶಾಶ್ವತ ನಿವಾಸಿ ಪ್ರಮಾಣಪತ್ರ ಕೂಡಾ ಒಂದು.

ಈ ಸೇವೆಗೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೋಮವಾರ ಚಾಲನೆ ನೀಡಿದರು. ಶಾಶ್ವತ ನಿವಾಸಿ ಪ್ರಮಾಣಪತ್ರ ಸೇವೆಯ ವೆಬ್ ಸೈಟ್ ಮತ್ತು ವಾಟ್ಸ್‌ಆ್ಯಪ್ ಸೇವೆಗೂ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಮುಖ್ಯಮಂತ್ರಿ, 'ಜನರು ಯಾವುದೇ ಕಾರಣಕ್ಕೂ ತಮ್ಮ ಹಕ್ಕುಗಳಿಂದ ವಂಚಿತ ಆಗಬಾರದೆಂದು ಈ ಅಭಿಯಾನದ ಮೂಲಕ ಸೌಲಭ್ಯಗಳನ್ನು ನೇರವಾಗಿ ಮನೆ ಬಾಗಿಲಿಗೆ ತಲುಪಿಸಲಾಗುತ್ತಿದೆ. ಸರ್ಕಾರ ಮತ್ತು ಜನರ ನಡುವಿನ ಅಂತರ ನಿವಾರಣೆ ಆಗಬೇಕು ಮತ್ತು ಸರ್ಕಾರಿ ಕಚೇರಿಗಳಿಗೆ ಅಲೆಯಬಾರದೆಂಬ ದೃಷ್ಟಿಯಿಂದ ಸರ್ಕಾರ ಈ ಕಾರ್ಯವನ್ನು ಕೈಗೊಂಡಿದೆ' ಎಂದರು.

'ಚುನಾವಣಾ ಆಯೋಗ ಸೂಚಿಸಿರುವ ಕ್ರಮಗಳನ್ನು ಚಾಚೂ ತಪ್ಪದೆ ಸರ್ಕಾರ ಪಾಲಿಸುತ್ತಿದೆ. ರಾಜ್ಯದ ನಿವಾಸಿಗಳಿಗೆ ಅಗತ್ಯವಿರುವ ಪ್ರಮಾಣಪತ್ರಗಳನ್ನು ನೀಡುವುದು ರಾಜ್ಯ ಸರ್ಕಾರದ ಹೊಣೆಗಾರಿಕೆ. ಇಂತಹ ನಿರ್ಧಾರವನ್ನು ಯಾವ ಸರ್ಕಾರವೂ ಮಾಡಿಲ್ಲ. ನಾವು ಅಧಿಕಾರವನ್ನು ದುರುಪಯೋಗ ಮಾಡುತ್ತಿದ್ದೇವೆ ಎಂದು ಕೆಲವರಿಗೆ ಗಾಬರಿ ಇರಬಹುದು. ಆದರೆ, ಸಾರ್ವಜನಿಕರಿಗೆ ಸಹಾಯ ಮಾಡಲು ಇದನ್ನು ಮಾಡಲಾಗಿದೆ' ಎಂದು ಸಮರ್ಥಿಸಿದರು.

'ಈ ಸೇವೆಗಳಿಗೆ ಆನ್‌ಲೈನ್ ಮೂಲಕ, ಸೇವಾ ಕೇಂದ್ರಗಳಲ್ಲಿ, ಹೋಬಳಿ ಮಟ್ಟದಲ್ಲಿ ತೆರೆಯಲಾಗಿರುವ ಸೌಲಭ್ಯ ಕೇಂದ್ರಗಳಲ್ಲಿ ಅರ್ಜಿ ಪಡೆಯುವ ಅವಕಾಶ ಕಲ್ಪಿಸಲಾಗಿದೆ. ನನ್ನ ಮತ್ತು ಉಪ ಮುಖ್ಯಮಂತ್ರಿಯ ಭಾವಚಿತ್ರವಿರುವ ಪ್ರಮಾಣಪತ್ರ ನೀಡಲಾಗುವುದು. ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದವರು ಸರ್ಕಾರಿ ಸೌಲಭ್ಯಗಳನ್ನು ಕಳೆದುಕೊಳ್ಳಲಿದ್ದಾರೆ' ಎಂದರು.

ರಾಜ್ಯಪಾಲರಿಗೆ ಬಿಜೆಪಿ ದೂರು ನೀಡಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ನಾವು ಕಾನೂನು ಪ್ರಕಾರ ಮಾಡಿದ್ದೇವೆ. ಈ ಬಗ್ಗೆ ಚುನಾವಣಾಧಿಕಾರಿಗಳು, ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇವೆ. ದೇಶದ ಕಾನೂನು, ಮಾನದಂಡದ ಪ್ರಕಾರ ನಾವು ಪಿಆರ್‌ಸಿ ಕೊಡುತ್ತಿದ್ದೇವೆ' ಎಂದರು.

'ರಾಜ್ಯದಲ್ಲಿ ಜನಿಸಿದ ಆಧಾರದಲ್ಲಿ ಈ ಪಿಆರ್‌ಸಿ ನೀಡಲು ತೀರ್ಮಾನಿಸಲಾಗಿದೆ' ಎಂದು ಜಿ.ಪರಮೇಶ್ವರ ತಿಳಿಸಿದರು.

Publication Date 21/07/2026

### ಮಾನದಂಡಗಳು ಏನೇನು?

ಶಾಶ್ವತ ನಿವಾಸಿ ಪ್ರಮಾಣಪತ್ರ ಪಡೆಯಲು ಅರ್ಜಿದಾರರು ಕರ್ನಾಟಕದಲ್ಲಿ ಜನಿಸಿರಬೇಕು ಅಥವಾ ನಿಗದಿತ ಅರ್ಹತೆಗಳನ್ನು ಪೂರೈಸಿರಬೇಕು. ರಾಜ್ಯದಲ್ಲಿ ಕನಿಷ್ಠ 10 ವರ್ಷ ವಾಸಿಸಿರಬೇಕು. ಕರ್ನಾಟಕದಲ್ಲೇ ದ್ವಿತೀಯ ಪಿಯುಸಿ ಅಥವಾ ತತ್ಸಮಾನ ಶಿಕ್ಷಣ ಪೂರ್ಣಗೊಳಿಸಿರಬೇಕು. ರಾಜ್ಯದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿರಬೇಕು. ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಗಳಲ್ಲಿ ಕನಿಷ್ಠ ಏಳು ವರ್ಷ ಸೇವೆ ಸಲ್ಲಿಸಿರಬೇಕು. ತಂದೆ, ತಾಯಿ, ಪತಿ ಅಥವಾ ಪತ್ನಿ ಕರ್ನಾಟಕದಲ್ಲಿ ಕನಿಷ್ಠ 10 ವರ್ಷ ವಾಸಿಸಿರುವ ದಾಖಲೆ ಇರಬೇಕು. ಕರ್ನಾಟಕದಲ್ಲಿ ಸ್ಥಿರಾಸ್ತಿ ಹೊಂದಿರಬೇಕು ಅಥವಾ ಕಾನೂನುಬದ್ಧವಾಗಿ ಉಪಯೋಗಿಸುತ್ತಿರಬೇಕು. ಮತದಾರರ ಪಟ್ಟಿಯಲ್ಲಿ ಹೆಸರು ಇರಬೇಕು. ಕರ್ನಾಟಕದ ನಿವಾಸಿಯನ್ನು ವಿವಾಹವಾಗಿದ್ದರೆ ರಾಜ್ಯದಲ್ಲೇ ವಾಸಿಸುತ್ತಿರಬೇಕು.


ಮನೆ ಮನೆಗೆ ತೆರಳಿ ಉಚಿತ ಜಾತಿ ಪ್ರಮಾಣಪತ್ರ ಹಾಗೂ ಶಾಶ್ವತ ನಿವಾಸ ಪ್ರಮಾಣ ಪತ್ರ ವಿತರಣೆಗೆ ಡಿ.ಕೆ. ಶಿವಕುಮಾರ್ ಚಾಲನೆ ನೀಡಿದರು. ಉಪಮುಖ್ಯಮಂತ್ರಿ ಜಿ.ಪರಮೇಶ್ವರ, ಕಂದಾಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಉಪಸ್ಥಿತರಿದ್ದರು

### ಪಡೆಯುವ ವಿಧಾನಗಳು ಯಾವುವು?

ಜಾತಿ ಪ್ರಮಾಣಪತ್ರಗಳ ವಿತರಣಾ ಪ್ರಕ್ರಿಯೆ ಸೋಮವಾರದಿಂದ ಆರಂಭವಾಗಿದ್ದು, ನಾಲ್ಕು ವಿಧಾನಗಳ ಮೂಲಕ ಸಾರ್ವಜನಿಕರನ್ನು ತಲುಪಲಿದೆ.

**ಮನೆ ಮನೆಗೆ ವಿತರಣೆ:** ಒಟ್ಟು 4.85 ಕೋಟಿ ಡಿಜಿಟಲ್ ಜಾತಿ ಪ್ರಮಾಣಪತ್ರಗಳನ್ನು ಗ್ರಾಮವಾರು ವಿಂಗಡಿಸಿ ಪಿಡಿಎಫ್ ರೂಪದಲ್ಲಿ ಜಿಲ್ಲಾಧಿಕಾರಿಗಳಿಗೆ ಒದಗಿಸಲಾಗಿದೆ. ಈ ಪ್ರತಿಗಳನ್ನು ಮುದ್ರಿಸಿ ಸಾರ್ವಜನಿಕರ ಮನೆ ಬಾಗಿಲಿಗೆ ತಲುಪಿಸಲಾಗುವುದು. ಪ್ರಮಾಣಪತ್ರ ವಿತರಿಸಿದ ಬಳಿಕ, ವಿತರಕರು ಮೊಬೈಲ್ ಸಂಖ್ಯೆಯನ್ನು ದಾಖಲಿಸಿ, ಆ್ಯಪ್ ಮೂಲಕ ಒಟ್ಟು ವಿತರಣೆಯ ವಿವರಗಳನ್ನು ದಾಖಲಿಸುತ್ತಾರೆ.

**ವೆಬ್‌ಸೈಟ್ ಮೂಲಕ ಉಚಿತ ಡೌನ್‌ಲೋಡ್:** ಜಾತಿ ಪ್ರಮಾಣಪತ್ರವನ್ನು ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಲು ವಿಶೇಷ ವೆಬ್‌ಸೈಟ್ ಅಭಿವೃದ್ಧಿಪಡಿಸಲಾಗಿದೆ. ಆರ್.ಡಿ.ಸಂಖ್ಯೆ, ರೇಷನ್ ಕಾರ್ಡ್ ಸಂಖ್ಯೆ, ಆಧಾರ್ ಸಂಖ್ಯೆಯನ್ನು ನಮೂದಿಸಿ ಜಾತಿ ಪ್ರಮಾಣಪತ್ರ ಪಡೆಯಬಹುದು.

ವೆಬ್‌ಸೈಟ್ ಲಿಂಕ್: https://nadakacheri.karnataka.gov.in/AJSKCertificates

**ಸಹಾಯ ಕೇಂದ್ರಗಳು:** ಜಾತಿ ಪ್ರಮಾಣಪತ್ರವನ್ನು ಉಚಿತವಾಗಿ ಡೌನ್‌ಲೋಡ್ ಮಾಡಿಕೊಂಡು ಮುದ್ರಿಸಿಕೊಳ್ಳಲು ಹೋಬಳಿ ಮಟ್ಟದಲ್ಲಿ ಸಹಾಯ ಕೇಂದ್ರ ಸ್ಥಾಪಿಸಲಾಗಿದೆ.

Presented by

# ಸ್ಪೇನ್ ಮುಡಿಗೆ ಕಿರೀಟ

## ನಡೆಯಲಿಲ್ಲ ಮೆಸ್ಸಿ ಆಟ

ನ್ಯೂಯಾರ್ಕ್ (ಎಎಫ್‌ಪಿ): 'ಕೆಂಪು ಸೇನೆ' ಖ್ಯಾತಿಯ ಸ್ಪೇನ್ ತಂಡವು ರಚಿಸಿದ ಅಭೇದ್ಯ ಕೋಟೆಯನ್ನು ದಾಟಲು ಸೂಪರ್ ಸ್ಟಾರ್ ಲಯೊನೆಲ್ ಮೆಸ್ಸಿ ಮತ್ತು ಅವರ ಅರ್ಜೆಂಟೀನಾ ತಂಡಕ್ಕೆ ಸಾಧ್ಯವಾಗಲಿಲ್ಲ. ಭಾನುವಾರ ರಾತ್ರಿ ನ್ಯೂಜರ್ಸಿ ಕ್ರೀಡಾಂಗಣದಲ್ಲಿ ನಡೆದ ಫಿಫಾ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಸ್ಪೇನ್ ತಂಡವು ಅರ್ಜೆಂಟೀನಾ ತಂಡವನ್ನು ಮಣಿಸಿ ಕಿರೀಟ ಧರಿಸಿತು

**ಫಲಿತಾಂಶ**

**1** ಸ್ಪೇನ್

**0** ಅರ್ಜೆಂಟೀನಾ

**ಗೋಲು ಗಳಿಕೆ**

ಫೆರಾನ್ ಟೊರೆಸ್ (106ನೇ ನಿಮಿಷ)



ಸ್ಪೇನ್ ತಂಡದ ನಾಯಕ ರಾದ್ರಿ

**1** ಟೂರ್ನಿಯುದ್ದಕ್ಕೂ ಅದ್ಭುತವಾದ ರಕ್ಷಣಾ ತಂತ್ರಗಾರಿಕೆ ಪ್ರದರ್ಶಿಸಿದ ಸ್ಪೇನ್ ಆಡಿದ ಎಂಟು ಪಂದ್ಯಗಳಲ್ಲಿ ಬಿಟ್ಟು ಕೊಟ್ಟಿದ್ದು ಒಂದು ಗೋಲು ಮಾತ್ರ

**10** ಟೂರ್ನಿಯಲ್ಲಿ ಫ್ರಾನ್ಸ್ ತಂಡದ ಕೈಲಿಯನ್ ಎಂಬಾಪೆ ಗಳಿಸಿದ ಗೋಲುಗಳು. ಅವರು 'ಚಿನ್ನದ ಬೂಟು' ಪಡೆದರು. ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ 8 ಗೋಲು ಗಳಿಸಿದರು

**22** ಕೈಲಿಯನ್ ಎಂಬಾಪೆ ಅವರು ವಿಶ್ವಕಪ್ ಇತಿಹಾಸದಲ್ಲಿ ಅತ್ಯಧಿಕ ಗೋಲು ಗಳಿಸಿದ ಆಟಗಾರನಾದರು. ಈ ಹಾದಿಯಲ್ಲಿ ಅವರು ಲಯೊನೆಲ್ ಮೆಸ್ಸಿ (21) ದಾಖಲೆಯನ್ನು ಮೀರಿದರು

**14** ಟೂರ್ನಿಯಲ್ಲಿ ಸ್ಪೇನ್ ತಂಡವು ಗಳಿಸಿದ ಒಟ್ಟು ಗೋಲುಗಳು

**2** ನೇ ಸಲ
ಸ್ಪೇನ್ ದೇಶವು ಎರಡನೇ ಸಲ ವಿಶ್ವಕಪ್ ವಿಜಯಿಯಾಯಿತು. 2010ರಲ್ಲಿ ಜಯಿಸಿತ್ತು



ಲಯೊನೆಲ್ ಮೆಸ್ಸಿ



ಕೈಲಿಯನ್ ಎಂಬಾಪೆ

Publication Date
21/07/2026

Presented by ಪ್ರಜಾವಾಣಿ

## ❖ ಮಧ್ಯಪ್ರದೇಶ ವಿಧಾನಸಭೆಯಲ್ಲಿ ಯುಸಿಸಿ ಮಂಡನೆ

- ಮಧ್ಯಪ್ರದೇಶ ಸರ್ಕಾರವು ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಮಸೂದೆಯನ್ನು ವಿಧಾನಸಭೆಯಲ್ಲಿ ಸೋಮವಾರ ಮಂಡಿಸಿತು.
- ಮುಖ್ಯಮಂತ್ರಿ ಮೋಹನ್ ಯಾದವ್ ಅವರಿಗೆ ಸಂಬಂಧಿಸಿದ ಭೂಮಿ ಖರೀದಿ ಪ್ರಕರಣದ ಬಗ್ಗೆ ಚರ್ಚೆ ನಡೆಸುವಂತೆ ವಿರೋಧ ಪಕ್ಷಗಳು ಪಟ್ಟು ಹಿಡಿದಿದ್ದವು. ಈ ಗದ್ದಲದ ಮಧ್ಯೆಯೇ ಸರ್ಕಾರವು ಯುಸಿಸಿ ಮಸೂದೆಯನ್ನು ಮಂಡನೆ ಮಾಡಿತು.
- ಉಜ್ಜಯಿನಿಯಲ್ಲಿ ನಡೆದಿದೆ ಎನ್ನಲಾದ ಹಗರಣದ ಚರ್ಚೆಗೆ ಕಾಂಗ್ರೆಸ್ ಸದಸ್ಯರು ಆಗ್ರಹಿಸಿದರೂ ಮುಂಗಾರು ಅಧಿವೇಶನದ ಮೊದಲ ದಿನವೇ ರಾಜ್ಯ ಸರ್ಕಾರವು ಈ ಮಸೂದೆಯನ್ನು ಮಂಡಿಸಿತು. ಇದಕ್ಕೆ ವಿರೋಧ ವ್ಯಕ್ತಪಡಿಸಿ ಕಾಂಗ್ರೆಸ್ ಸದಸ್ಯರು, ಸ್ಪೀಕರ್ ಪೀಠದ ಬಳಿ ಹೋಗಿ ಪ್ರತಿಭಟಿಸಿದರು. ಇದರಿಂದಾಗಿ ಸದನದಲ್ಲಿ ಗದ್ದಲ ಉಂಟಾಗಿ 30 ನಿಮಿಷ ಕಲಾಪವನ್ನು ಮುಂದೂಡಲಾಯಿತು.

## ❖ ಭಾರತ ಔಷಧ ನಿಯಂತ್ರಕ ಮಹಾನಿರ್ದೇಶನಾಲಯ (ಡಿಸಿಜಿಐ) ಒಪ್ಪಿಗೆ: ಡೆಂಗಿ ಲಸಿಕೆಗೆ ಅನುಮತಿ

- ಡೆಂಗಿ ನಿಯಂತ್ರಿಸುವ ಲಸಿಕೆ 'ಕ್ಯುಡೆಂಗಾ'ವನ್ನು (ಟಿಎಕೆ-003) ಭಾರತದ ಮಾರುಕಟ್ಟೆಗೆ ಬಿಡುಗಡೆಗೊಳಿಸಲು ಭಾರತ ಔಷಧ ನಿಯಂತ್ರಕ ಮಹಾನಿರ್ದೇಶನಾಲಯ (ಡಿಸಿಜಿಐ) ಅನುಮತಿ ನೀಡಿದೆ ಎಂದು 'ಟಿಕೆಡಾ ಬಯೋಫಾರ್ಮಾಸ್ಯುಟಿಕಲ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ತಿಳಿಸಿದೆ.
- 'ಕ್ಯುಡೆಂಗಾ'ವು ಡೆಂಗಿ ನಿಯಂತ್ರಿಸಲು ದೇಶದಲ್ಲಿ ಅನುಮತಿ ಪಡೆದ ಮೊದಲ ಲಸಿಕೆಯಾಗಿದೆ. 4ರಿಂದ 60 ವರ್ಷದೊಳಗಿನವರು ಈ ಲಸಿಕೆಯನ್ನು ಪಡೆಯಬಹುದಾಗಿದೆ. ಯಾವುದೇ ಪೂರ್ವ ಪರೀಕ್ಷೆಯಿಲ್ಲದೇ, ಈ ಹಿಂದೆ ಡೆಂಗಿಗೆ ಒಳಗಾದವರು ಪಡೆಯಬಹುದಾಗಿದೆ' ಎಂದು ಜಪಾನ್‌ನ ಪ್ರಮುಖ ಫಾರ್ಮಾಸ್ಯುಟಿಕಲ್ ಕಂಪನಿ ತಿಳಿಸಿದೆ.
- 2022ರಲ್ಲಿ ಲಸಿಕೆಯನ್ನು ಬಿಡುಗಡೆ ಗೊಳಿಸಿದ ಬಳಿಕ 43 ದೇಶಗಳಲ್ಲಿ ಇದರ ಬಳಕೆಗೆ ಅನುಮತಿ ನೀಡಲಾಗಿತ್ತು. ಜಾಗತಿಕವಾಗಿ ಈಗಾಗಲೇ 3.20 ಕೋಟಿ ಮಂದಿ ಲಸಿಕೆ ಪಡೆದಿದ್ದಾರೆ. ಇದೀಗ ಅನುಮತಿ ದೊರಕಿರುವುದು ಭಾರತದಲ್ಲಿ ಡೆಂಗಿ ನಿಯಂತ್ರಣದ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ' ಎಂದು ಸಂಸ್ಥೆಯ ಅಂತರಖಂಡಗಳ (ಇಂಟರ್‌ಕಾಂಟಿನೆಂಟಲ್) ಮಾರುಕಟ್ಟೆ ವಿಭಾಗದ ಮುಖ್ಯಸ್ಥ ಮಹೇಂದರ್ ನಾಯಕ್ ತಿಳಿಸಿದ್ದಾರೆ.

**ಲಸಿಕೆ ವಿಶೇಷ**

- 4ರಿಂದ 60 ವರ್ಷದ ಒಳಗಿನವರು ತೆಗೆದುಕೊಳ್ಳಬಹುದು
- ಮೊದಲ ಲಸಿಕೆ ಪಡೆದ ಮೂರು ತಿಂಗಳ ನಂತರ 2ನೇ ಲಸಿಕೆ (ಡೋಸ್) ಪಡೆಯಬೇಕು
- ಲಸಿಕೆ ಪ್ರಮಾಣ 0.5 ಎಂ.ಎಲ್
- ಜಾಗತಿಕವಾಗಿ 3.20 ಕೋಟಿ ಮಂದಿ ಲಸಿಕೆ ಪಡೆದಿದ್ದಾರೆ
- ನಾಲ್ಕು ಬಗೆಯ ಡೆಂಗಿಯಿಂದ ರಕ್ಷಣೆ
- ಲಸಿಕೆ ಪಡೆಯುವ ಮೊದಲು ಯಾವುದೇ ಪರೀಕ್ಷೆಯ ಅಗತ್ಯವಿಲ್ಲ

## ಬೆಳೆ ಪ್ರದೇಶ ಗಣನೀಯ ಕುಸಿತ, ವಾಣಿಜ್ಯ ಬೆಳೆಗಳತ್ತ ರೈತರ ಒಲವು

# ಹಾಸನ: ಆಲೂಗಡ್ಡೆ ತೊರೆಯಿತೇ ಸ್ಥಾನ?

> ಉತ್ತಮ ಬೆಲೆ ಸಿಕ್ಕರೆ ಖರ್ಚು ಮಾಡಿದ್ದ ಹಣ ವಾಪಸ್ ಬರುತ್ತದೆ. ಆದರೆ ರೋಗ, ಹವಾಮಾನ ವೈಪರೀತ್ಯದಿಂದ ನಷ್ಟವಾದರೆ, ಖರ್ಚು ಮಾಡಿದ ಅರ್ಧ ಹಣವೂ ಸಿಗುವುದಿಲ್ಲ
>
> **ದರ್ಶನ್**, ರೈತ, ಮರಸು ಹೊಸಳ್ಳಿ ಆಲೂರು ತಾಲ್ಲೂಕು

> ನಾಲ್ಕು ದಶಕಗಳ ಹಿಂದೆ ಹಾಸನ ಆಲೂಗಡ್ಡೆಗೆ ಬೇಡಿಕೆ ಇತ್ತು. ಈಗ ಆಗ್ರಾ ಆಲೂಗಡ್ಡೆ ವರ್ಷವಿಡೀ ಲಭ್ಯವಿರುತ್ತದೆ. ವಿಪರೀತ ರೋಗ, ಮಳೆಯಿಂದ ರೈತರು ಮತ್ತು ವ್ಯಾಪಾರಿಗಳಿಗೆ ಲಾಭ ಅಪರೂಪ
>
> **ಮೋಹನ್**
> ಆಲೂಗಡ್ಡೆ ವ್ಯಾಪಾರಿ, ಹಾಸನ

> ಗುಣಮಟ್ಟದ ಬೀಜದ ಕೊರತೆ, ಹೆಚ್ಚುತ್ತಿರುವ ಉತ್ಪಾದನಾ ವೆಚ್ಚ, ಮುಂಗಾರು ಹಂಗಾಮಿನಲ್ಲಿ ಗಡ್ಡೆಗಳ ಕೊಳೆತ, ಮೊಳಕೆ ವೈಫಲ್ಯ, ಬೆಳೆ ಹಾನಿ ಹಾಗೂ ಅಂಗಮಾರಿ ರೋಗ ಸೇರಿ ಹಲವು ಕಾರಣಗಳಿಂದಾಗಿ ಬೆಳೆಯುವ ಪ್ರದೇಶ ಗಣನೀಯವಾಗಿ ಇಳಿಕೆಯಾಗಿದೆ
>
> **ಶ್ರೇಯಸ್ ಪಟೇಲ್**, ಸಂಸದ

• ಚಿದಂಬರಪ್ರಸಾದ

ಎರಡು ದಶಕಗಳ ಹಿಂದೆ ಹಾಸನ ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಮೇ ತಿಂಗಳ ಬಳಿಕ ಸುತ್ತಾಡಿದರೆ ಆಲೂಗಡ್ಡೆ ಬಿತ್ತನೆ ಮಾಡಿದ ವಿಶಾಲವಾದ ಗದ್ದೆಗಳು ಹೆಜ್ಜೆ ಹೆಜ್ಜೆಗೂ ಕಾಣಸಿಗುತ್ತಿದ್ದವು. ಆದರೆ ಕೆಲವು ವರ್ಷಗಳಿಂದೀಚೆಗೆ ಆಲೂಗಡ್ಡೆ ಬೆಳೆದಿರುವ ಗದ್ದೆಗಳನ್ನು ನೋಡಬೇಕಿದ್ದರೆ ಹುಡುಕಿಕೊಂಡು ಹೋಗಬೇಕು.

ಕರ್ನಾಟಕದಲ್ಲಿ ಆಲೂಗಡ್ಡೆ ಬೆಳೆ ಅಂದರೆ ಹಾಸನ ಎಂದು ಹೇಳುತ್ತಿದ್ದ ಕಾಲ ಒಂದಿತ್ತು. ಆಗ ರಾಜ್ಯದ ಒಟ್ಟು ಆಲೂಗಡ್ಡೆ ಉತ್ಪಾದನೆಯಲ್ಲಿ ಹಾಸನ ಜಿಲ್ಲೆಯ ಪಾಲು ಇದ್ದಿದ್ದು ಶೇ 40ರಷ್ಟು. ಕೇವಲ 15 ವರ್ಷಗಳಲ್ಲಿ ಜಿಲ್ಲೆಯು ಈ ಹೆಗ್ಗಳಿಕೆಯನ್ನು ಕಳೆದುಕೊಂಡಿದೆ. ಜಿಲ್ಲೆಗೆ ದೊಡ್ಡ ಹೆಸರು ತಂದುಕೊಟ್ಟಿದ್ದ ಆಲೂಗಡ್ಡೆ ಬೆಳೆಯಿಂದ ರೈತರು ವಿಮುಖರಾಗುತ್ತಿದ್ದು, ಬೆಳೆಯುವ ಪ್ರದೇಶದ ವ್ಯಾಪ್ತಿ ವರ್ಷದಿಂದ ವರ್ಷಕ್ಕೆ ಗಣನೀಯವಾಗಿ ಕುಸಿಯುತ್ತಿದೆ.

ರೋಗಬಾಧೆ, ಕಳಪೆ ಬಿತ್ತನೆ ಆಲೂಗಡ್ಡೆಯ ಸಮಸ್ಯೆ, ಹೆಚ್ಚುತ್ತಿರುವ ಉತ್ಪಾದನಾ ವೆಚ್ಚ, ಹೆಚ್ಚು ಲಾಭದಾಯಕ ಪರ್ಯಾಯ ವಾಣಿಜ್ಯ ಬೆಳೆಗಳತ್ತ ರೈತರು ಒಲವು ತೋರುತ್ತಿರುವುದು ಹಾಗೂ ಮಾರುಕಟ್ಟೆಯ ಅನಿಶ್ಚಿತ ಸ್ಥಿತಿ ಆಲೂಗಡ್ಡೆ ಬೆಳೆ ವಿಸ್ತೀರ್ಣದ ಕುಸಿತಕ್ಕೆ ಪ್ರಮುಖ ಕಾರಣಗಳು.

### 50 ಸಾವಿರ ಹೆಕ್ಟೇರ್‌ನಿಂದ 3,500 ಹೆಕ್ಟೇರ್‌ಗೆ

2010ರವರೆಗೂ ಜಿಲ್ಲೆಯ ಕೃಷಿ ಆರ್ಥಿಕತೆಯಲ್ಲಿ ಆಲೂಗಡ್ಡೆ ಬೆಳೆ ಮಹತ್ವದ ಪಾತ್ರ ನಿರ್ವಹಿಸುತ್ತಿತ್ತು. 2000-01ರಿಂದ 2009-10ರವರೆಗೆ ಜಿಲ್ಲೆಯಲ್ಲಿ ಪ್ರತಿವರ್ಷ 45 ಸಾವಿರದಿಂದ 50 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ರೈತರು ಆಲೂಗಡ್ಡೆ ಬೆಳೆಯುತ್ತಿದ್ದರು. ಆದರೆ 2010-11ರಿಂದ 2015-16ರ ಅವಧಿಯಲ್ಲಿ ಈ ವಿಸ್ತೀರ್ಣವು 18 ಸಾವಿರ ಹೆಕ್ಟೇರ್‌ಗೆ ಕುಸಿಯಿತು.

ಇದಾದ ಬಳಿಕ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. 2016-17ರಿಂದ 2020-21ರ ಅವಧಿಯಲ್ಲಿ ಸರಾಸರಿ ಬಿತ್ತನೆ ವಿಸ್ತೀರ್ಣ 10 ಸಾವಿರ ಹೆಕ್ಟೇರ್‌ಗೆ ಸೀಮಿತವಾಯಿತು. ಕಳೆದ ಐದು ವರ್ಷಗಳ ಅಂಕಿ-ಅಂಶಗಳು ಇನ್ನಷ್ಟು ಆತಂಕ ಮೂಡಿಸುವಂತಿದ್ದು, ಜಿಲ್ಲೆಯ ಸರಾಸರಿ ಬಿತ್ತನೆ ವಿಸ್ತೀರ್ಣ ಕೇವಲ 5,980 ಹೆಕ್ಟೇರ್‌ಗೆ ಕುಸಿದಿದೆ. ಈ ವರ್ಷ ಈ ವರೆಗೆ 3,545 ಹೆಕ್ಟೇರ್ ಪ್ರದೇಶದಲ್ಲಷ್ಟೇ ಆಲೂಗಡ್ಡೆ ಬಿತ್ತನೆಯಾಗಿದೆ.


ಆಲೂಗಡ್ಡೆ ಬಿತ್ತನೆ ಬೀಜಕ್ಕೆ ಉಪಚಾರ ಮಾಡುತ್ತಿರುವುದು.

### ಅಂಗಮಾರಿ ಹೊಡೆತಕ್ಕೆ ರೈತ ತತ್ತರ

ಆಲೂಗಡ್ಡೆ ಬೆಳೆಯ ಕುಸಿತಕ್ಕೆ ಪ್ರಮುಖ ಕಾರಣ ಅಂಗಮಾರಿ ರೋಗದ ಬಾಧೆ. ಜಿಲ್ಲೆಯಲ್ಲಿ ಆರಂಭದಿಂದಲೂ ರೈತರು ಹೆಚ್ಚಾಗಿ ಕುಫ್ರಿ ಜ್ಯೋತಿ ತಳಿಯನ್ನು ಬೆಳೆಯುತ್ತಿದ್ದರು. ಉತ್ತಮ ಇಳುವರಿ ನೀಡುವ ಗುಣ ಹೊಂದಿದ್ದರೂ ಈ ತಳಿಗೆ ಅಂಗಮಾರಿ ರೋಗ ಬಾಧಿಸುತ್ತಿತ್ತು. ಈ ತಳಿಯು ರೋಗ ನಿರೋಧಕ ಶಕ್ತಿ ಹೊಂದಿರಲಿಲ್ಲ.

2008-09ರ ಅವಧಿಯಲ್ಲಿ ಅಂಗಮಾರಿ ರೋಗವು ವ್ಯಾಪಕವಾಗಿ ಹರಡಿ ಅನೇಕ ರೈತರ ಬೆಳೆಗಳನ್ನು ಸಂಪೂರ್ಣವಾಗಿ ಹಾಳು ಮಾಡಿತು. ಹಲವು ಕಡೆ ರೈತರು ಅಪಾರ ಪ್ರಮಾಣದಲ್ಲಿ ನಷ್ಟ ಅನುಭವಿಸಿದರು. ರೋಗ ನಿಯಂತ್ರಣಕ್ಕಾಗಿ ವಿವಿಧ ಶಿಲೀಂಧ್ರನಾಶಕಗಳನ್ನು ಬಳಸಿದರೂ ನಿರೀಕ್ಷಿತ ಮಟ್ಟದಲ್ಲಿ ಯಶಸ್ಸು ಸಿಗಲಿಲ್ಲ.

ಆ ವರ್ಷ ಆಲೂಗಡ್ಡೆ ಕೃಷಿಯ ಮೇಲಿನ ಭರವಸೆಯನ್ನು ರೈತರು ಕಳೆದುಕೊಂಡರು. ಮುಂದಿನ ಕೆಲ ವರ್ಷಗಳಲ್ಲಿಯೂ ರೋಗಬಾಧೆಯ ಆತಂಕ ಮುಂದುವರಿದಿದ್ದರಿಂದ ಅನೇಕ ರೈತರು ಆಲೂಗಡ್ಡೆ ಬೆಳೆಯಿಂದ ದೂರ ಸರಿಯಲು ಆರಂಭಿಸಿದರು. ಕೃಷಿ ಇಲಾಖೆ ಹಾಗೂ ವಿಜ್ಞಾನಿಗಳು ಹಲವು ಸಲಹೆಗಳನ್ನು ನೀಡಿದರೂ ರೋಗದ ಭೀತಿ ಸಂಪೂರ್ಣವಾಗಿ ದೂರವಾಗಲಿಲ್ಲ.

ಅಂಗಮಾರಿ ರೋಗದ ಸಮಸ್ಯೆಯನ್ನು ಮನಗಂಡು ನಂತರದ ವರ್ಷಗಳಲ್ಲಿ ಚಿಪ್ಸ್ ತಯಾರಿಕೆಗೆ ಸೂಕ್ತವಾದ ಹಾಗೂ ಅಂಗಮಾರಿ ರೋಗ ನಿರೋಧಕ ಶಕ್ತಿ ಹೊಂದಿರುವ ಕುಫ್ರಿ ಹಿಮಾಲಿನಿ ಸೇರಿದಂತೆ ಹಲವು ಹೊಸ ತಳಿಗಳನ್ನು ಜಿಲ್ಲೆಗೆ ಪರಿಚಯಿಸಲಾಯಿತು.

ಈ ತಳಿಗಳು ಸ್ವಲ್ಪ ಮಟ್ಟಿಗೆ ರೋಗ ನಿರೋಧಕ ಗುಣ ಹೊಂದಿದ್ದರೂ ಆ ಹೊತ್ತಿಗಾಗಲೇ ಪರ್ಯಾಯ ಬೆಳೆಗಳತ್ತ ಮುಖ ಮಾಡಿದ್ದ ರೈತರು ಮತ್ತೆ ಆಲೂಗಡ್ಡೆ ಕೃಷಿಯತ್ತ ಒಲವು ತೋರಲಿಲ್ಲ.

### ಪರ್ಯಾಯ ಬೆಳೆಗಳತ್ತ ಮುಖ

ರೋಗ ಬಾಧೆಯಿಂದ ಕಂಗೆಟ್ಟಿದ್ದ ರೈತರು, ಹೆಚ್ಚು ಆದಾಯದ ನಿರೀಕ್ಷೆಯಲ್ಲಿ ಪರ್ಯಾಯ ಬೆಳೆಗಳತ್ತ ಮುಖ ಮಾಡಲು ಆರಂಭಿಸಿದರು. ಇದೇ ಸಮಯದಲ್ಲಿ ಶುಂಠಿ ಹಾಗೂ ಅಡಿಕೆ ಬೆಳೆಗಳಿಗೆ ಉತ್ತಮ ಮಾರುಕಟ್ಟೆ ದೊರೆತಿದ್ದು ಈ ಬೆಳೆಗಳ ಮೇಲೆ ಭರವಸೆ ಇಡುವಂತೆ ಮಾಡಿತು.

ಉತ್ತಮ ಆದಾಯದ ನಿರೀಕ್ಷೆಯಲ್ಲಿ ಅನೇಕರು ಆಲೂಗಡ್ಡೆಯನ್ನು ಕೈಬಿಟ್ಟು ಶುಂಠಿ, ಅಡಿಕೆ ಸೇರಿದಂತೆ ಇತರ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಮುಂದಾದರು. ಮಳೆಯಾಶ್ರಿತ ಪ್ರದೇಶಗಳಲ್ಲಿ ಕೆಲ ರೈತರು ಜೋಳ ಹಾಗೂ ರಾಗಿ ಬೆಳೆಗಳತ್ತಲೂ ತಿರುಗಿದರು. ಇತರ ಬೆಳೆಗಳಲ್ಲಿ ಸ್ಥಿರ ಆದಾಯ ದೊರೆಯುವ ಸಾಧ್ಯತೆ ಹೆಚ್ಚಾಗಿದ್ದರಿಂದ ಜಿಲ್ಲೆಯಲ್ಲಿ ಬೆಳೆ ವೈವಿಧ್ಯ ವೇಗವಾಗಿ ಹೆಚ್ಚಾಯಿತು.

### ಪುನಶ್ಚೇತನಕ್ಕೆ ಸಮಗ್ರ ಕ್ರಮ ಅಗತ್ಯ

ಹಾಸನ ಜಿಲ್ಲೆಯ ಆಲೂಗಡ್ಡೆ ಕೃಷಿಯನ್ನು ಪುನರುಜ್ಜೀವನಗೊಳಿಸಲು ರೋಗ ನಿರೋಧಕ ತಳಿಗಳ ವಿಸ್ತೃತ ಪ್ರಸಾರ, ಗುಣಮಟ್ಟದ ಬೀಜಗಳ ಲಭ್ಯತೆ, ಅಂಗಮಾರಿ ರೋಗದ ಸಮಗ್ರ ನಿರ್ವಹಣೆ, ರೈತರಿಗೆ ತಾಂತ್ರಿಕ ಮಾರ್ಗದರ್ಶನ ಹಾಗೂ ಉತ್ಪಾದನಾ ವೆಚ್ಚ ತಗ್ಗಿಸುವ ಕ್ರಮಗಳು ಅಗತ್ಯವಾಗಿವೆ. ಜೊತೆಗೆ ಆಲೂಗಡ್ಡೆಗೆ ಸ್ಥಿರ ಮಾರುಕಟ್ಟೆ, ಸೂಕ್ತ ಬೆಲೆ ಹಾಗೂ ಸಂಸ್ಕರಣಾ ಘಟಕಗಳಿಗೆ ಉತ್ತೇಜನ ನೀಡುವ ಮೂಲಕ ರೈತರಲ್ಲಿ ಮತ್ತೆ ವಿಶ್ವಾಸ ಮೂಡಿಸಬೇಕಾಗಿದೆ.

ಒಮ್ಮೆ ಜಿಲ್ಲೆಯ ಕೃಷಿ ಆರ್ಥಿಕತೆಯ ಪ್ರಮುಖ ಆಧಾರವಾಗಿದ್ದ ಆಲೂಗಡ್ಡೆ ಬೆಳೆಯು ಇಂದು ಸವಾಲಿನ ಹಾದಿಯಲ್ಲಿದೆ. ಸೂಕ್ತ ತಂತ್ರಜ್ಞಾನ, ಸರ್ಕಾರದ ಬೆಂಬಲ ಹಾಗೂ ರೈತರ ವಿಶ್ವಾಸವನ್ನು ಮರುಸ್ಥಾಪಿಸುವ ಪ್ರಯತ್ನಗಳು ಯಶಸ್ವಿಯಾದರೆ ಮಾತ್ರ ಹಾಸನ ಜಿಲ್ಲೆಯಲ್ಲಿ ಆಲೂಗಡ್ಡೆ ಬೆಳೆಯ ಹಿಂದಿನ ವೈಭವವನ್ನು ಮರಳಿ ಕಾಣಬಹುದು.


ಅರಕಲಗೂಡು ತಾಲ್ಲೂಕಿನ ಮಳೆ ನೀರಿನಲ್ಲಿ ನಿಂತಿದ್ದ ಆಲೂಗಡ್ಡೆ

### ಈ ಮುಂಗಾರು ಹಂಗಾಮಿನ ಸ್ಥಿತಿ

2026-27ರ ಮುಂಗಾರು ಹಂಗಾಮಿನ ಬಿತ್ತನೆಗಾಗಿ ಜಿಲ್ಲೆಯ ವಿವಿಧ ಶೈತ್ಯಾಗಾರಗಳಲ್ಲಿ ಸುಮಾರು 3 ಲಕ್ಷ ಆಲೂಗಡ್ಡೆ ಚೀಲಗಳು, ಅಂದರೆ ಸುಮಾರು 1.50 ಲಕ್ಷ ಕ್ವಿಂಟಲ್ ಸಂಗ್ರಹಿಸಲಾಗಿದೆ. ಜೂನ್ 15ರವರೆಗೆ ಹಾಸನ ಎಪಿಎಂಸಿ ಮೂಲಕ ಒಟ್ಟು 1.01 ಲಕ್ಷ ಕ್ವಿಂಟಲ್ ಬಿತ್ತನೆ ಮಾಡುವ ಆಲೂಗಡ್ಡೆ ಮಾರಾಟವಾಗಿದೆ. ಇದನ್ನು ಪ್ರಮುಖವಾಗಿ ಜಿಲ್ಲೆಯ ರೈತರಲ್ಲದೆ, ಚಿಕ್ಕಮಗಳೂರು, ಚಾಮರಾಜನಗರ ಸೇರಿದಂತೆ ಇತರ ಜಿಲ್ಲೆಗಳ ರೈತರೂ ಖರೀದಿಸಿದ್ದಾರೆ.

ಬೀಜದ ಲಭ್ಯತೆ ಉತ್ತಮವಾಗಿದ್ದರೂ ಈವರೆಗೆ ಜಿಲ್ಲೆಯಲ್ಲಿ 3,545 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಆಲೂಗಡ್ಡೆ ಬಿತ್ತನೆಯಾಗಿದೆ.

### ಉತ್ಪಾದನಾ ವೆಚ್ಚ ಹೆಚ್ಚು

ಆಲೂಗಡ್ಡೆ ಕೃಷಿಯ ವೆಚ್ಚವೂ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಗುಣಮಟ್ಟದ ಬೀಜ, ರಸಗೊಬ್ಬರ, ಕೀಟನಾಶಕ ಹಾಗೂ ಶಿಲೀಂಧ್ರನಾಶಕಗಳು ದುಬಾರಿಯಾಗಿವೆ. ರೋಗಬಾಧೆ ನಿಯಂತ್ರಣಕ್ಕಾಗಿ ಹೆಚ್ಚುವರಿ ಔಷಧ ಸಿಂಪಡಣೆ ಮಾಡಬೇಕಾಗುವುದರಿಂದ ಉತ್ಪಾದನಾ ವೆಚ್ಚ ಮತ್ತಷ್ಟು ಏರಿಕೆಯಾಗುತ್ತಿದೆ. ಇಷ್ಟೆಲ್ಲ ಹೂಡಿಕೆ ಮಾಡಿದರೂ ಹವಾಮಾನ ವೈಪರೀತ್ಯ ಅಥವಾ ರೋಗಬಾಧೆಯಿಂದ ನಷ್ಟ ಸಂಭವಿಸುವ ಸಾಧ್ಯತೆ ಹೆಚ್ಚಿರುವುದರಿಂದ ರೈತರು ಕಡಿಮೆ ಅಪಾಯದ ಬೆಳೆಗಳತ್ತ ಮುಖ ಮಾಡುತ್ತಿದ್ದಾರೆ.

ಒಂದು ಎಕರೆಯಲ್ಲಿ ಆಲೂಗಡ್ಡೆ ಬೆಳೆಯಲು 5 ಕ್ವಿಂಟಲ್ ಬಿತ್ತನೆ ಬೀಜ ಬೇಕಾಗುತ್ತದೆ. ಉಳುಮೆ, ಬಿತ್ತನೆ, ರೋಗ ನಿರೋಧಕ ಔಷಧಿ, ಬೆಳೆಯನ್ನು ಹೊಲದಿಂದ ಕಿತ್ತು ಮಾರಾಟಕ್ಕೆ ಇಡುವವರೆಗೆ ಕನಿಷ್ಠ ₹75 ಸಾವಿರದಿಂದ ₹80 ಸಾವಿರ ಖರ್ಚಾಗುತ್ತದೆ. ರೋಗ ಬರದೇ ಇದ್ದರೆ, ಎಕರೆಗೆ 35 ಕ್ವಿಂಟಲ್ ಇಳುವರಿ ಬರುತ್ತದೆ. ಮಾರುಕಟ್ಟೆಯಲ್ಲಿ ವರ್ತಕರು ಕೆ.ಜಿ.ಗೆ ₹20ರ ದರದಲ್ಲಿ ಖರೀದಿ ಮಾಡುತ್ತಿದ್ದು, ರೈತರಿಗೆ ₹70 ಸಾವಿರ ದೊರಕುತ್ತದೆ. ಅದೇ ಆಲೂಗಡ್ಡೆ ವರ್ತಕರಿಂದ ಗ್ರಾಹಕರಿಗೆ ಕೆ.ಜಿ.ಗೆ ₹30ರಿಂದ ₹35 ರವರೆಗೆ ಮಾರಾಟ ಆಗುತ್ತದೆ ಎನ್ನುತ್ತಾರೆ ರೈತರು.


### ವ್ಯಾಪಿಸಿದ ಶುಂಠಿ, ಜೋಳ

ಒಂದು ಕಾಲದಲ್ಲಿ ಅಪರೂಪವಾಗಿದ್ದ ಮೆಕ್ಕೆಜೋಳ ಈಗ ಸುಮಾರು 1.50 ಲಕ್ಷ ಹೆಕ್ಟೇರ್‌ಗೆ ವ್ಯಾಪಿಸಿದೆ. ಹಾಸನದಲ್ಲಿರುವ ಪಶು ಆಹಾರ ಘಟಕಕ್ಕೆ ಮೆಕ್ಕೆಜೋಳದ ಬೇಡಿಕೆ ಹೆಚ್ಚುತ್ತಿದ್ದಂತೆಯೇ ಜಿಲ್ಲೆಯ ರೈತರು ಮೆಕ್ಕೆಜೋಳ ಬೆಳೆಯಲು ಆಸಕ್ತಿ ವಹಿಸಿದರು.

ಇನ್ನೊಂದೆಡೆ ಶುಂಠಿಗೆ ಹೆಚ್ಚಿನ ಬೆಲೆ ಬಂದಿದ್ದರಿಂದ ಹಲವಾರು ರೈತರು ಶುಂಠಿ ಬೆಳೆಯಲು ಉತ್ಸುಕತೆ ತೋರಿದರು. ಅದರ ಪರಿಣಾಮವಾಗಿ ಹೊರಜಿಲ್ಲೆಯವರು ಜಿಲ್ಲೆಯಲ್ಲಿನ ಜಮೀನುಗಳನ್ನು ಗುತ್ತಿಗೆಗೆ ಪಡೆದು, ಶುಂಠಿ ಬೆಳೆಯಲು ಆರಂಭಿಸಿದ್ದಾರೆ. ಆಲೂಗಡ್ಡೆ ಬೆಳೆದು ನಷ್ಟ ಅನುಭವಿಸುವುದಕ್ಕಿಂತ ಜಮೀನನ್ನು ಲೀಸ್‌ಗೆ ಕೊಡುವುದೇ ಒಳ್ಳೆಯದು. ಇದರಿಂದ ಯಾವುದೇ ನಷ್ಟ ಇಲ್ಲ ಎನ್ನುವುದು ರೈತರ ಅಭಿಪ್ರಾಯ. ಹಾಗಾಗಿ ಹೊರಗಿನವರೇ ಹೆಚ್ಚಾಗಿ ಇಲ್ಲಿಗೆ ಬಂದು ಶುಂಠಿ ಬೆಳೆಯಲು ಆರಂಭಿಸಿದ್ದಾರೆ.



### ದಶಕದಲ್ಲಿ ಆಲೂಗಡ್ಡೆ ಬಿತ್ತನೆ (ಹೆಕ್ಟೇರ್‌ಗಳಲ್ಲಿ)




### ಪ್ರಯತ್ನಕ್ಕೆ ನೀರೆರಚಿದ ವರುಣ

ಜಿಲ್ಲೆಯಲ್ಲಿ ಆಲೂಗಡ್ಡೆ ಬಿತ್ತನೆ ವಿಸ್ತೀರ್ಣ ಹೆಚ್ಚಿಸುವ ಉದ್ದೇಶದಿಂದ ತೋಟಗಾರಿಕೆ ಇಲಾಖೆ ವತಿಯಿಂದ ಈ ವರ್ಷ ಜನವರಿಯಲ್ಲಿ ಆಲೂಗಡ್ಡೆ ಮೇಳವನ್ನು ಆಯೋಜಿಸಲಾಗಿತ್ತು. ಮೇಳದ ಮೂಲಕ ಈ ಬಾರಿ 16 ಸಾವಿರ ಹೆಕ್ಟೇರ್‌ಗೆ ಆಲೂಗಡ್ಡೆ ವಿಸ್ತರಿಸಲು ಯೋಜನೆ ರೂಪಿಸಲಾಗಿತ್ತು. ಆಲೂಗಡ್ಡೆಯ ಹೊಸ ತಳಿಗಳ ಪರಿಚಯ, ಸುಧಾರಿತ ಸಸ್ಯ ಸಂರಕ್ಷಣಾ ಔಷಧಿಗಳ ಬಳಕೆ, ವಿನೂತನ ತಂತ್ರಜ್ಞಾನ ಹಾಗೂ ಯಾಂತ್ರೀಕರಣದ ಬಗ್ಗೆ ಮಾಹಿತಿ, ರೈತರಿಗೆ ಆಲೂಗಡ್ಡೆ ಬೀಜೋತ್ಪಾದಕರು, ಕೃಷಿ ಯಂತ್ರೋಪಕರಣ ತಯಾರಕರು ಹಾಗೂ ಸಂಸ್ಕರಣಾ ಕಂಪನಿಗಳೊಂದಿಗೆ ನೇರ ಸಂಪರ್ಕ ಕಲ್ಪಿಸಲಾಗಿತ್ತು. ಹಾಸನ, ಚಿಕ್ಕಮಗಳೂರು, ಚಾಮರಾಜನಗರ, ಕೋಲಾರ, ಚಿಕ್ಕಬಳ್ಳಾಪುರ, ಧಾರವಾಡ, ಬೆಳಗಾವಿ ಸೇರಿದಂತೆ ವಿವಿಧ ಜಿಲ್ಲೆಗಳ ರೈತರು, ರೈತ ಉತ್ಪಾದಕ ಸಂಸ್ಥೆಗಳು, ನರ್ಸರಿದಾರರು, ವಿಜ್ಞಾನಿಗಳು ಹಾಗೂ ಅಧಿಕಾರಿಗಳು ಮೇಳದಲ್ಲಿ ಭಾಗವಹಿಸಿದ್ದರು. ಪಂಜಾಬ್, ಹರಿಯಾಣ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಿಂದ ಆಲೂಗಡ್ಡೆ ಬೀಜೋತ್ಪಾದಕರು ಹಾಗೂ ಸಂಸ್ಥೆಗಳು, ಸಂಶೋಧನಾ ಕೇಂದ್ರಗಳು ಮತ್ತು ಖಾಸಗಿ ಕಂಪನಿಗಳು ಪಾಲ್ಗೊಂಡಿದ್ದವು. ಆದರೆ, ಕೈಕೊಟ್ಟ ವರುಣ ಈ ಎಲ್ಲ ಪ್ರಯತ್ನಗಳಿಗೆ ತಣ್ಣೀರು ಎರಚಿದ್ದಾನೆ. ಭೂಮಿಯಲ್ಲಿ ತೇವಾಂಶವಿಲ್ಲದೆ ರೈತಾಪಿ ಜನರು ಆಲೂಗಡ್ಡೆ ಬಿತ್ತನೆಗೆ ಹಿಂದೇಟು ಹಾಕಿದ್ದಾರೆ.

# ಸ್ಪೇನ್ ‘ಕೆಂಪು ಕೋಟೆ’ಗೆ ವಿಜಯ ಪತಾಕೆ

## ಫೆರಾನ್ ಟೊರೆಸ್ ನಿರ್ಣಾಯಕ ಗೋಲು • ತಾರೆಯರಿಲ್ಲದೆ ಮಿನುಗಿದ ರಾದ್ರಿ ಪಡೆ

ಈಸ್ಟ್ ರುದರ್‌ಫೋರ್ಡ್ (ಎಎಫ್‌ಪಿ): ಈ ಬಾರಿಯ ವಿಶ್ವಕಪ್ ಸೂಪರ್‌ಸ್ಟಾರ್ ಆಟಗಾರರಿಂದ ರಂಗೇರಿತ್ತು. ಆದರೆ ಅಂತಿಮವಾಗಿ ಮತ್ತು ಅರ್ಹವಾಗಿ ಟ್ರೋಫಿ ಎತ್ತಿಹಿಡಿದಿದ್ದು ‘ತಾರಾಬಲ’ವಿಲ್ಲದ ಪ್ರಬಲ ಸ್ಪೇನ್ ತಂಡ.

ಸ್ಟಾರ್ ಆಟಗಾರ ಲಮಿನ್ ಯಮಾಲ್ ತಮ್ಮ ಆಟದ ಉತ್ತುಂಗದಲ್ಲಿ ಇರದಿದ್ದರೂ ಅತ್ಯಂತ ಬಲಿಷ್ಠ ತಂಡ ಎನ್ನುವ ಹಿರಿಮೆಯೊಡನೆ ಸ್ಪೇನ್ ಎರಡನೇ ಬಾರಿ ಫುಟ್‌ಬಾಲ್ ಜಗತ್ತಿನ ಅತ್ಯುನ್ನತ ವೇದಿಕೆಯಲ್ಲಿ ವಿಜೃಂಭಿಸಿತು.

19 ವರ್ಷ ವಯಸ್ಸಿನ ಫಾರ್ವರ್ಡ್ ಆಟಗಾರನ ಮೇಲೆ ಕುತೂಹಲದ ಕಣ್ಣುಗಳಿದ್ದವು. ಫಿಟ್ನೆಸ್ ಸಮಸ್ಯೆಯಿಂದ ಅವರು ಆರಂಭದಲ್ಲಿ ಲಯ ಕಾಣಲು ಪರದಾಡಿದರು. ಅಂತಿಮವಾಗಿ ಗಳಿಸಿದ್ದು ಒಂದೇ ಗೋಲು. ಗುಂಪು ಹಂತದಲ್ಲಿ ಸೌದಿ ಅರೇಬಿಯಾ ವಿರುದ್ಧ.

ಮೊದಲ ಬಾರಿ 48 ತಂಡಗಳು ಆಡಿದ್ದ ಈ ವಿಶ್ವಕಪ್‌ನಲ್ಲಿ ಪ್ರತಿ ಪಂದ್ಯದಲ್ಲಿ ಸರಾಸರಿ 2.96 ಗೋಲುಗಳು ದಾಖಲಾದವು. 1970ರ ವಿಶ್ವಕಪ್ ನಂತರ ಇದು ಅತ್ಯಧಿಕ.

ಸ್ಪೇನ್ ಈ ಟೂರ್ನಿಯಲ್ಲಿ ಎಂಟು ಪಂದ್ಯಗಳಿಂದ 14 ಗೋಲುಗಳನ್ನು ಗಳಿಸಿತು. ಆದರೆ ತಂಡವು ಮೆಟ್‌ಲೈಫ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಲಯೊನೆಲ್ ಮೆಸ್ಸಿ ಅವರಿಗೆ ‘ಸರ್ಪಗಾವಲು’ ಹಾಕಿ, ಅರ್ಜೆಂಟೀನಾ ತಂಡವನ್ನು 1-0 ಗೋಲಿನಿಂದ ನಿರಾಶೆಗೊಳಿಸಿತು.

‘ಲಾ ರೋಜಾ’ ತಂಡ, 2022ರ ಚಾಂಪಿಯನ್ ತಂಡದ ವಿರುದ್ಧ ಬಿಗಿಹಿಡಿತ ಸಾಧಿಸಿತು. ಆದರೆ ಗೆಲುವಿಗಾಗಿ 106ನೇ ನಿಮಿಷ ಫೆರಾನ್ ಟೊರೆಸ್ ಗಳಿಸಿದ ಗೋಲಿನವರೆಗೆ ಕಾಯಬೇಕಾಯಿತು.

**ಅಭೇದ್ಯ ರಕ್ಷಣೆ:** ಸ್ಪೇನ್ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಅಸಾಧಾರಣ ರಕ್ಷಣೆಯ ಆಟ. ತಂಡವು ಇಡೀ ಟೂರ್ನಿಯಲ್ಲಿ ಎದುರಾಳಿಗೆ ಬಿಟ್ಟುಕೊಟ್ಟಿದ್ದು ಒಂದೇ ಒಂದು ಗೋಲನ್ನು. ಬೆಲ್ಜಿಯಂ ತಂಡ ಕ್ವಾರ್ಟರ್‌ಫೈನಲ್‌ನಲ್ಲಿ ಆ ಏಕೈಕ ಗೋಲನ್ನು ಗಳಿಸಿತ್ತು.

ಫೈನಲ್ ಪಂದ್ಯದ ಆರಂಭದಿಂದ ಕೊನೆಯವರೆಗೆ ಸ್ಪೇನ್ ತಂಡ ಬಿಗಿ ಹಿಡಿತ ಸಾಧಿಸಿತು. ಹೀಗಾಗಿ ಮೆಸ್ಸಿ ಪಡೆಗೆ ಚೆಂಡನ್ನು ಆಡುವ ಅವಕಾಶ ಸಿಕ್ಕಿದ್ದೇ ಕಡಿಮೆ.

82ನೇ ನಿಮಿಷ ರೆಫ್ರಿ ತೀರ್ಪಿಗೆ ಅಸಮಾಧಾನ ಪ್ರದರ್ಶಿಸಿದ ಮತ್ತು 93ನೇ ನಿಮಿಷ ಪಾಲೊ ಕುಬ್ರೆಸಿ ಅವರನ್ನು ಒರಟಾಗಿ ಫೌಲ್ ಮಾಡಿದ್ದಕ್ಕೆ ಅರ್ಜೆಂಟೀನಾದ ಎಂಜೊ ಫೆರ್ನಾಂಡಿಸ್ ಎರಡು ಬಾರಿ ಹಳದಿ ಕಾರ್ಡ್ ದರ್ಶನದಿಂದ ಹೊರ ನಡೆಯಬೇಕಾಯಿತು. ಇದು ತಂಡವನ್ನು 10 ಆಟಗಾರರಿಗೆ ಸೀಮಿತಗೊಳಿಸಿತು.

ಪಂದ್ಯದಲ್ಲಿ ಅರ್ಜೆಂಟೀನಾದ ಕೀಪರ್ ಎಮಿಲಿಯಾನೊ ಮಾರ್ಟಿನೆಝ್ ಅವರ ನಿರ್ವಹಣೆಯೇನೂ ಕಡಿಮೆಯಿರಲಿಲ್ಲ. ಒಮ್ಮೆ ಲಮಿನ್ ಯಮಾಲ್ ಅವರ ಫ್ರೀಕಿಕ್ ಅವಕಾಶದಲ್ಲಿ ಗೋಲಿನತ್ತ ವೇಗವಾಗಿ ಧಾವಿಸಿದ ಚೆಂಡನ್ನು ಅವರು ಉತ್ತಮವಾಗಿ ತಡೆದರು.

106ನೇ ನಿಮಿಷ ಸ್ಪೇನ್‌ಗೆ ನಿರ್ಣಾಯಕ ಗಳಿಗೆ ಬಂದೇ ಬಿಟ್ಟಿತು. ನಿಕೊ ವಿಲಿಯಮ್ಸ್ ಪರಿಪೂರ್ಣವಾಗಿ ಹೆಡ್ ಮಾಡಿ ಕೊಟ್ಟ ಪಾಸ್‌ನಲ್ಲಿ ಟೊರೆಸ್ ಎಡಗಾಲಿನಲ್ಲಿ ಮಿಂಚಿನಂತೆ ಒದ್ದ ಚೆಂಡು ಗೋಲಾಯಿತು. ತಂಡದ ಸಂಭ್ರಮ ಮೇರೆಮೀರಿತು. ಸೆಮಿಫೈನಲ್‌ನಲ್ಲೂ ಸ್ಪೇನ್ ಇದೇ ರೀತಿ ಫ್ರಾನ್ಸ್ ತಂಡದ ‘ಉಸಿರುಗಟ್ಟಿಸಿತ್ತು’.

ಸ್ಪೇನ್ ರಕ್ಷಣೆಯ ವಿಭಾಗದಲ್ಲಿ ಪ್ರಮುಖ ಪಾತ್ರ ವಹಿಸಿದವರು ನಾಯಕ ರಾದ್ರಿ. ಮೆಸ್ಸಿ, ಕೈಲಿಯನ್ ಎಂಬಾಪೆ, ರೊನಾಲ್ಡೊ ಮೊದಲಾದ ಘಟಾನುಘಟಿ ಆಕ್ರಮಣಕಾರಿ ಆಟಗಾರರಿದ್ದರೂ, ಟೂರ್ನಿಯ ಆಟಗಾರ ಪ್ರಶಸ್ತಿ ಅವರಿಗೆ ಒಲಿಯಿತು.

2010ರಲ್ಲಿ ಮೊದಲ ಸಲ ಟ್ರೋಫಿ ಎತ್ತಿಹಿಡಿದಿದ್ದಾಗಲೂ ಸ್ಪೇನ್ ತಂಡದ ರಕ್ಷಣಾ ಕೋಟೆ ಪ್ರಬಲವಾಗಿತ್ತು. ಆಗ ತಂಡ 1-0 ಗೋಲಿನಿಂದ ನೆದರ್ಲೆಂಡ್ಸ್ ವಿರುದ್ಧ ಜಯಗಳಿಸಿತ್ತು.

ಮೆಸ್ಸಿ ಮತ್ತು ಅರ್ಜೆಂಟೀನಾ ತಂಡಕ್ಕೆ ಇಡೀ ಫೈನಲ್ ಪಂದ್ಯದಲ್ಲಿ ಗುರಿಯತ್ತ ಒಂದೇ ಒಂದು ಉತ್ತಮ ಎನ್ನುವ ಅವಕಾಶ ದೊರೆಯಲಿಲ್ಲ. ಆ ಮೂಲಕ 1962ರ (ಬ್ರೆಜಿಲ್) ನಂತರ ಪ್ರಶಸ್ತಿ ಉಳಿಸಿಕೊಂಡ ಮೊದಲ ತಂಡ ಎನ್ನುವ ಅವಕಾಶ ಅರ್ಜೆಂಟೀನಾಕ್ಕೆ ತಪ್ಪಿಹೋಯಿತು.

‘ನಾನು ಧರಿಸಿದ ಗ್ಲೋವ್‌ಗಳ ಬಳಿ ನೀವು ಕೇಳಿದರೆ, ಅವಾವುದೂ ನಮಗೆ ಹೆಚ್ಚಿನ ಕೆಲಸವಿರಲಿಲ್ಲ ಎನ್ನುತ್ತವೆ’ ಎಂದು ಸ್ಪೇನ್ ಗೋಲ್‌ಕೀಪರ್ ಉನ್ನೈ ಸಿಮೋನ್ ಚಟಾಕಿ ಹಾರಿಸಿದರು.

ಈ ಬಾರಿಯ ಕೆಲವು ತಂಡಗಳಲ್ಲಿ ಚಿರಪರಿಚಿತ ಮುಖಗಳಿದ್ದರೂ, ಅವರನ್ನು ಒಳಗೊಂಡಿದ್ದ ತಂಡಗಳು ಸ್ಪೇನ್‌ಗೆ ಸಾಟಿಯಾಗಲಿಲ್ಲ. ಸ್ಪೇನ್ ತಂಡ ಎರಡನೇ ಬಾರಿ (2010ರ ನಂತರ) ಯುರೋಪಿಯನ್ ಮತ್ತು ವಿಶ್ವಕಪ್ ಎರಡೂ ಗೆದ್ದಂತಾಯಿತು.

**ಕೋಚ್ ಸಾಧನೆ:** ಸ್ಪೇನ್ ತಂಡ 2022ರ ವಿಶ್ವಕಪ್‌ನಲ್ಲಿ 16ರ ಘಟ್ಟದಲ್ಲಿ ಹೊರಬಿದ್ದಾಗ ತಂಡಕ್ಕೆ ಮಾರ್ಗದರ್ಶನ ನೀಡುವ ಹೊಣೆ ಕೋಚ್ ಲೂಯಿಸ್ ದೆಲಾ ಫ್ಯುಯೆಂಟ್ ಅವರ ಹೆಗಲಿಗೆ ಬಿದ್ದಿತ್ತು. ಆದರೆ 65 ವರ್ಷ ವಯಸ್ಸಿನ ಈ ತಾರೆ ತಂಡವನ್ನು ಯಶಸ್ಸಿನ ಪಥದಲ್ಲಿ ಮುನ್ನಡೆಸಿದರು.

ಅತಿಯಾದ ನಿರೀಕ್ಷೆಯೊಡನೆ ಈ ಟೂರ್ನಿಗೆ ಬಂದಿದ್ದ ಹೆಸರಾಂತ ಕೋಚ್‌ಗಳಾದ ಕಾರ್ಲೊ ಆನ್ಸೆಲೋಟಿ ಮತ್ತು ಥಾಮಸ್ ತುಚೆಲ್ ನಿರಾಶರಾದರು. ಅಮೆರಿಕದ ಕೋಚ್ ಮೌರಿಸಿಯೊ ಪೊಚೆಟಿನೊ ಅವರು ತಂಡವನ್ನು 16ರ ಘಟ್ಟ ತಲುಪಿಸಿದರಷ್ಟೇ.

### ಭಾವುಕರಾದ ಲಯೊನೆಲ್ ಮೆಸ್ಸಿ

ನ್ಯೂಜರ್ಸಿ (ಎಪಿ): ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಲಯೊನೆಲ್ ಮೆಸ್ಸಿ ಅವರ ಮೋಡಿ ನಡೆಯಲು ಸ್ಪೇನ್ ತಂಡ ಅವಕಾಶ ನೀಡಲಿಲ್ಲ. ಪಂದ್ಯ ಮುಗಿದ ತಕ್ಷಣ ಭಾವುಕರಾದ ಅವರು ಕಣ್ಣೀರನ್ನು ಕಷ್ಟದಿಂದ ತಡೆಹಿಡಿದರು. ಸಹ ಆಟಗಾರರೊಂದಿಗೆ ರನ್ನರ್ ಅಪ್ ಪದಕಗಳನ್ನು ಸ್ವೀಕರಿಸಲು ಜೊತೆಯಾದರು.

ಅರ್ಜೆಂಟೀನಾ ಅಭಿಮಾನಿಗಳ ಮೆಚ್ಚುಗೆಗೆ ತಲೆಬಾಗಿಸಿ ಸ್ಪಂದಿಸಿದರು. ಇದು ವಿಶ್ವ ಫುಟ್‌ಬಾಲ್‌ನ ದಿಗ್ಗಜ ಆಟಗಾರನಿಗೆ ಮೂರನೆ ಫೈನಲ್ ಆಗಿತ್ತು. ಅವರಿಗೆ ಇಡೀ ಪಂದ್ಯದಲ್ಲಿ (120 ನಿಮಿಷ) ಚೆಂಡು ಆಡಲು ಸಿಕ್ಕಿದ್ದು 54 ಸಲ ಮಾತ್ರ.


39 ವರ್ಷದ ಆಟಗಾರನಿಗೆ ಗೋಲಿನ ಅವಕಾಶ ದೊರಕಿದ್ದು ಒಮ್ಮೆ (117ನೇ ನಿಮಿಷ) ಮಾತ್ರ. ಸೆಮಿ-ಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಎರಡು ಗೋಲುಗಳಿಗೆ ನೆರವಾಗಿದ್ದ ಅವರು ನಿರ್ಣಾಯಕ ಪಂದ್ಯದಲ್ಲಿ ಅಂಥ ಅವಕಾಶವನ್ನೂ ಸೃಷ್ಟಿಸಲಾಗಲಿಲ್ಲ.

ಇದು ಅರ್ಜೆಂಟೀನಾ ಪೋಷಾಕಿನಲ್ಲಿ ಅವರ ಕೊನೆಯ ಪಂದ್ಯವೇ ಎಂಬುದನ್ನು ಕಾದುನೋಡಬೇಕಾಗಿದೆ. ಈ ಹಿಂದೆ ಅವರು 2022ರ ವಿಶ್ವಕಪ್ ತಮ್ಮ ಪಾಲಿಗೆ ಕೊನೆಯದು ಎಂದು ಹೇಳಿಕೊಂಡಿದ್ದರು. ಆದರೆ ನಂತರ ಆರು ವಿಶ್ವಕಪ್ ಆಡಿದ ಮೊದಲಿಗರೆನಿಸಿದ್ದರು.



ಫೆರಾನ್ ಟೊರೆಸ್

### ಸ್ಪೇನ್ ನಾಯಕನಿಗೆ ಚಿನ್ನದ ಚೆಂಡು



ಸ್ಪೇನ್ ತಂಡದ ನಾಯಕ ರಾದ್ರಿ (ರಾಡ್ರಿಗೊ ಹರ್ನಾಂಡೆಝ್ ಕ್ಯಾಸ್ಕಾಂಟ್) ಅವರು 2026ರ ವಿಶ್ವಕಪ್‌ನ ಶ್ರೇಷ್ಠ ಆಟಗಾರ ಗೌರವಕ್ಕೆ ಪಾತ್ರರಾಗಿ ಚಿನ್ನದ ಚೆಂಡನ್ನು ಗೆದ್ದುಕೊಂಡರು. ಮ್ಯಾಂಚೆಸ್ಟರ್ ಸಿಟಿ ತಂಡದ ಮಿಡ್‌ಫೀಲ್ಡರ್ ಆಗಿರುವ 30 ವರ್ಷ ವಯಸ್ಸಿನ ರಾಡ್ರಿ ಅವರು 2024ರಲ್ಲಿ ವಿಶ್ವದ ಶ್ರೇಷ್ಠ ಆಟಗಾರನಿಗೆ ನೀಡಲಾಗುವ ಬ್ಯಾಲನ್ ಡೋ‘ರ್ ಪ್ರಶಸ್ತಿ ಗೆದ್ದುಕೊಂಡಿದ್ದರು.

2024ರ ಸೆಪ್ಟೆಂಬರ್‌ನಲ್ಲಿ ಅವರು ಮೊಣಕಾಲಿನ ಚಿಪ್ಪಿನ ನೋವಿಗೆ ಒಳಗಾಗಿದ್ದರು. ಅವರು ಈ ವರ್ಷದ ಮೇ ತಿಂಗಳಲ್ಲಷ್ಟೇ ಸ್ಪರ್ಧಾತ್ಮಕ ಫುಟ್‌ಬಾಲ್‌ಗೆ ಮರಳಿದ್ದರು.

‘ನನಗೆ ಏನು ಹೇಳಬೇಕೆಂದೇ ತಿಳಿಯುತ್ತಿಲ್ಲ. ಹೊಸ ಪೀಳಿಗೆಯು ಅವಕಾಶಗಳಿಗೆ ನನ್ನ ನಿದರ್ಶನ ಇಟ್ಟುಕೊಳ್ಳಬೇಕು. ಒಮ್ಮೆ ಕೆಳಗೆ ಬಿದ್ದೆವೆಂದರೆ ಎದೆಗುಂದಬಾರದು. ಮತ್ತೆ ಎದ್ದು ನಿಂತು ಸಾಧಿಸಲು ಸಾಧ್ಯವಿದೆ ಎಂದು ಅವರು ಹೇಳಿದರು.

ರಾದ್ರಿಯವರು ಶೇ.94ರಷ್ಟು ಪಾಸ್ ಯಶಸ್ಸಿನೊಂದಿಗೆ ಸ್ಪೇನ್ ತಂಡದ ಪ್ರತಿ ಗೆಲುವಿನಲ್ಲೂ ಪ್ರಮುಖ ಪಾತ್ರ ವಹಿಸಿದ್ದರು. ಅವರು ಟೂರ್ನಿಯಲ್ಲಿ 650ಕ್ಕೂ ಅಧಿಕ ಪಾಸ್‌ಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರು. ಈ ಮೂಲಕ 2022ರ ಆವೃತ್ತಿಯಲ್ಲಿ ತಾವೇ ನಿರ್ಮಿಸಿದ್ದ 638 ಪಾಸ್‌ಗಳ ದಾಖಲೆಯನ್ನು ಉತ್ತಮ ಪಡಿಸಿಕೊಂಡರು.

### ಎಂಬಾಪೆಗೆ ‘ಗೋಲ್ಡನ್ ಬೂಟ್’



ಟೂರ್ನಿಯಲ್ಲಿ ಗರಿಷ್ಠ ಗೋಲು ದಾಖಲಿಸಿದ ಆಟಗಾರನಿಗೆ ನೀಡಲಾಗುವ ‘ಗೋಲ್ಡನ್ ಬೂಟ್’ ಪ್ರಶಸ್ತಿ ಫ್ರಾನ್ಸ್ ನಾಯಕ ಕೈಲಿಯನ್ ಎಂಬಾಪೆ ಪಾಲಾಗಿದೆ. ಈ ಸೂಪರ್ ಸ್ಟಾರ್ ಆಟಗಾರ ಟೂರ್ನಿಯಲ್ಲಿ ಒಟ್ಟು 10 ಗೋಲುಗಳನ್ನು ದಾಖಲಿಸಿದ್ದಾರೆ. ಇದರೊಂದಿಗೆ ಸತತ ಎರಡು ವಿಶ್ವಕಪ್‌ಗಳಲ್ಲಿ ‘ಗೋಲ್ಡನ್ ಬೂಟ್’ ಗೆದ್ದ ಮೊದಲ ಆಟಗಾರ ಎನಿಸಿಕೊಂಡರು. ಅಷ್ಟೇ ಅಲ್ಲದೆ, ಒಟ್ಟಾರೆ ವಿಶ್ವಕಪ್‌ನಲ್ಲಿ 22 ಗೋಲುಗಳನ್ನು ಗಳಿಸುವ ಮೂಲಕ ಲಯೊನೆಲ್ ಮೆಸ್ಸಿ (21 ಗೋಲು) ಅವರ ದಾಖಲೆ ಮುರಿದರು. ಹಾಲಿ ಟೂರ್ನಿಯಲ್ಲಿ ಮೆಸ್ಸಿ 8 ಗೋಲು ಗಳಿಸಿ ಎರಡನೇ ಸ್ಥಾನದಲ್ಲಿದ್ದಾರೆ.

### ಉನ್ನೈಗೆ ‘ಗೋಲ್ಡನ್ ಗ್ಲೋವ್’



ಟೂರ್ನಿಯಲ್ಲಿ ಅತ್ಯುತ್ತಮ ಗೋಲ್‌ಕೀಪರ್‌ಗೆ ನೀಡುವ ‘ಗೋಲ್ಡನ್ ಗ್ಲೋವ್’ ಪ್ರಶಸ್ತಿಯನ್ನು ಸ್ಪೇನ್ ತಂಡದ ಉನ್ನೈ ಸಿಮೋನ್ ಗೆದ್ದಿದ್ದಾರೆ. ಸ್ಪೇನ್ ಆಡಿದ 8 ಪಂದ್ಯಗಳ ಪೈಕಿ ಏಳರಲ್ಲಿ ಕ್ಲೀನ್ ಶೀಟ್‌ಗಳನ್ನು (ಒಂದೂ ಗೋಲು ಬಿಟ್ಟುಕೊಡದ ಪಂದ್ಯಗಳು) ಪಡೆಯುವ ಮೂಲಕ ಈ ಸಾಧನೆ ಮಾಡಿದರು. ಅಷ್ಟೇ ಅಲ್ಲದೆ, ಟೂರ್ನಿಯಲ್ಲಿ ಸತತವಾಗಿ 650 ನಿಮಿಷಗಳ ಕಾಲ ಎದುರಾಳಿಗಳಿಗೆ ಒಂದೂ ಗೋಲು ಗಳಿಸಲು ಬಿಡದೆ ಸಾರ್ವಕಾಲಿಕ ವಿಶ್ವಕಪ್ ದಾಖಲೆ ಬರೆದರು. ಈ ಮೂಲಕ 1990ರಲ್ಲಿ ವಾಲ್ಟರ್ ಝೆಂಗಾ ನಿರ್ಮಿಸಿದ್ದ 517 ನಿಮಿಷಗಳ ದಾಖಲೆ ಮುರಿದರು.

### ಕುಬಾರ್ಸಿಗೆ ಯುವ ಆಟಗಾರ ಪ್ರಶಸ್ತಿ



ಟೂರ್ನಿಯ ಅತ್ಯುತ್ತಮ ಯುವ ಆಟಗಾರ ಗೌರವಕ್ಕೆ ಸ್ಪೇನ್ ತಂಡದ 19 ವರ್ಷದ ಪ್ರತಿಭಾವಂತ ಡಿಫೆಂಡರ್ ಪೌ ಕುಬಾರ್ಸಿ ಭಾಜನರಾದರು. ಸ್ಪೇನ್ ತಂಡದ ಭದ್ರಕೋಟೆಯಂತಿದ್ದ ರಕ್ಷಣಾ ವಿಭಾಗವನ್ನು ಮುನ್ನಡೆಸುವಲ್ಲಿ ಕುಬಾರ್ಸಿ ಪ್ರಮುಖ ಪಾತ್ರ ವಹಿಸಿದ್ದರು.



ಸ್ಪೇನ್‌ನ ಮ್ಯಾಡ್ರಿಡ್‌ನಲ್ಲಿ ಅಭಿಮಾನಿಗಳ ಸಂಭ್ರಮ

### ಸ್ವಾಗತಕ್ಕೆ ಕಾದಿದೆ ಮ್ಯಾಡ್ರಿಡ್

ಮ್ಯಾಡ್ರಿಡ್ (ಎಎಫ್‌ಪಿ): ಫುಟ್‌ಬಾಲ್ ಕ್ರೀಡೆಯನ್ನು ಆರಾಧಿಸುವ ಸ್ಪೇನ್ ದೇಶವೇ ಈಗ ವಿಶ್ವಕಪ್ ವಿಜೇತವಾಗಿದೆ. ಹದಿನೈದು ವರ್ಷಗಳ ನಂತರ ಕಿರೀಟ ಧರಿಸಿರುವ ಸ್ಪಾನಿಷ್ ಪಡೆಗೆ ರಾಜಧಾನಿ ಮ್ಯಾಡ್ರಿಡ್‌ನಲ್ಲಿ ಭವ್ಯ ಸ್ವಾಗತ ನೀಡಲು ಲಕ್ಷಾಂತರ ಅಭಿಮಾನಿಗಳು ಕಾದಿದ್ದಾರೆ.

ನ್ಯೂಯಾರ್ಕ್‌ನಲ್ಲಿ ಭಾನುವಾರ ತಡರಾತ್ರಿ ನಡೆದ ಫೈನಲ್‌ನಲ್ಲಿ ಸ್ಪೇನ್ 1-0 ಗೋಲಿನಿಂದ ಅರ್ಜೆಂಟೀನಾ ವಿರುದ್ಧ ಜಯಿಸಿತ್ತು. ಫೆರಾನ್ ಟೊರೆಸ್ ಅವರು ಹೆಚ್ಚುವರಿ ಸಮಯದಲ್ಲಿ ಹೊಡೆದ ಗೋಲು ಗೆಲುವಿಗೆ ಕಾರಣವಾಯಿತು. 2010ರಲ್ಲಿ ಸ್ಪೇನ್ ಜಯಿಸಿತ್ತು. ಅದರ ನಂತರ ಈಗ ಮತ್ತೆ ಚಾಂಪಿಯನ್ ಆಗಿದೆ.

ಪಂದ್ಯದಲ್ಲಿ ಸ್ಪೇನ್ ಗೆಲುವು ಸಾಧಿಸಿದ್ದೇ ತಡ ಮ್ಯಾಡ್ರಿಡ್‌ನ ಬೀದಿ ಬೀದಿಗಳಲ್ಲಿ ಸಂಭ್ರಮಾಚರಣೆ ಮುಗಿಲುಮುಟ್ಟಿತು. ಇಲ್ಲಿಯ ಕ್ಯಾಸ್ಟೆಲಾನಾ, ಮೇನ್ ಅವೆನ್ಯೂಗಳಲ್ಲಿ ಮದಿರೆಯ ಗಮ್ಮತ್ತಿನಲ್ಲಿ ಅಭಿಮಾನಿಗಳು ತೇಲಾಡಿದರು. ರಸ್ತೆ, ಕಾಲುಹಾದಿಗಳಲ್ಲಿ ಬಿಯರ್ ಖಾಲಿ ಕ್ಯಾನ್‌ಗಳು, ಗಾಜಿನ ಲೋಟಗಳು ಬಿದ್ದಿದ್ದವು. ಸ್ವಚ್ಛತಾ ಕರ್ಮಚಾರಿಗಳು ಸೋಮವಾರ ಬೆಳಿಗ್ಗೆ ಗುಡಿಸಿ ಹಾಕಿದ ತ್ಯಾಜ್ಯದ ರಾಶಿ ಬೆಟ್ಟದಷ್ಟಿತ್ತು.

**₹480 ಕೋಟಿ** ಚಾಂಪಿಯನ್ ಸ್ಪೇನ್ ತಂಡವು ಪಡೆದ ಬಹುಮಾನ ಮೊತ್ತ

**₹317 ಕೋಟಿ** ರನ್ನರ್ಸ್ ಅಪ್ ಅರ್ಜೆಂಟೀನಾ ತಂಡವು ಗಳಿಸಿದ ಮೊತ್ತ

### ಅತಿ ಹೆಚ್ಚು ಗೋಲು ಗಳಿಸಿದವರು (ಅಗ್ರ 6)

| ಗೋಲು | ಆಟಗಾರ | ದೇಶ |
|---|---|---|
| 10 | ಕೈಲಿಯನ್ ಎಂಬಾಪೆ | ಫ್ರಾನ್ಸ್ |
| 8 | ಲಯೊನೆಲ್ ಮೆಸ್ಸಿ | ಅರ್ಜೆಂಟೀನಾ |
| 7 | ಜೂಡ್ ಬೆಲ್ಲಿಂಗ್‌ಹ್ಯಾಮ್ | ಇಂಗ್ಲೆಂಡ್ |
| 7 | ಎರ್ಲಿಂಗ್ ಹಾಲಾಂಡ್ | ನಾರ್ವೆ |
| 6 | ಒಸ್ಮಾನೆ ಡೆಂಬೆಲೆ | ಫ್ರಾನ್ಸ್ |
| 6 | ಹ್ಯಾರಿ ಕೇನ್ | ಇಂಗ್ಲೆಂಡ್ |

### ಫಿಫಾ ವಿಶ್ವಕಪ್ ಗೆದ್ದ ದೇಶಗಳು

| ದೇಶ | ಪ್ರಶಸ್ತಿ | ವರ್ಷ |
|---|---|---|
| ಬ್ರೆಜಿಲ್ | 5 | 1958, 1962, 1970, 1994, 2002 |
| ಜರ್ಮನಿ | 4 | 1954, 1974, 1990, 2014 |
| ಇಟಲಿ | 4 | 1934, 1938, 1982, 2006 |
| ಅರ್ಜೆಂಟೀನಾ | 3 | 1978, 1986, 2022 |
| ಫ್ರಾನ್ಸ್ | 2 | 1998, 2018 |
| ಉರುಗ್ವೆ | 2 | 1930, 1950 |
| ಸ್ಪೇನ್ | 2 | 2010, 2026 |
| ಇಂಗ್ಲೆಂಡ್ | 1 | 1966 |



### ಸ್ಪೇನ್ ಪ್ರಶಸ್ತಿಯ ಹಾದಿ

**ಫೈನಲ್**: ಅರ್ಜೆಂಟೀನಾ ವಿರುದ್ಧ 1-0 ಗೆಲುವು

**ಸೆಮಿಫೈನಲ್**: ಫ್ರಾನ್ಸ್ ಎದುರು 2-0 ಜಯ

| | |
|---|---|
| **ಕ್ವಾರ್ಟರ್‌ಫೈನಲ್** | ಬೆಲ್ಜಿಯಂ ವಿರುದ್ಧ 2-1 ಗೆಲುವು |
| **16ರ ಘಟ್ಟ** | ಪೋರ್ಚುಗಲ್ ಎದುರು 1-0 ಗೆಲುವು |
| **32ರ ಘಟ್ಟ** | ಆಸ್ಟ್ರಿಯಾ ವಿರುದ್ಧ 3-0 ಜಯ |

**ಗುಂಪು ಹಂತ**

ಉರುಗ್ವೆ ಎದುರು 1-0 ಗೆಲುವು

ಸೌದಿ ಅರೇಬಿಯಾ ವಿರುದ್ಧ 4-0 ಜಯ

ಕೇಪ್ ವರ್ಡ್ ಜೊತೆಗೆ ಗೋಲು ರಹಿತ ಡ್ರಾ

### ಒಂದೇ ಗೋಲು: ಸ್ಪೇನ್ ದಾಖಲೆ

ಚಾಂಪಿಯನ್ ಸ್ಪೇನ್ ತಂಡವು ಇಡೀ ಟೂರ್ನಿಯಲ್ಲಿ ಆಡಿರುವ ಒಟ್ಟು 8 ಪಂದ್ಯಗಳಲ್ಲಿ ಕೇವಲ ಒಂದು ಗೋಲು ಬಿಟ್ಟುಕೊಟ್ಟು ಹೊಸ ದಾಖಲೆ ಬರೆದಿದೆ. ಇದು ಚಾಂಪಿಯನ್ ತಂಡವೊಂದು ಫಿಫಾ ವಿಶ್ವಕಪ್‌ನಲ್ಲಿ ಬಿಟ್ಟುಕೊಟ್ಟ ಅತಿ ಕಡಿಮೆ ಗೋಲಾಗಿದೆ. ಈ ಹಿಂದಿನ ವಿಶ್ವಕಪ್‌ಗಳಲ್ಲಿ ಫ್ರಾನ್ಸ್ (1998), ಇಟಲಿ (2006) ಮತ್ತು ಸ್ಪೇನ್(2010) ತಂಡಗಳು ಜಂಟಿಯಾಗಿ ಹೊಂದಿದ್ದ (2 ಗೋಲು) ದಾಖಲೆ ಪತನವಾಯಿತು.

### ದಾಖಲೆಯ ಗೋಲುಗಳು

2026ರ ವಿಶ್ವಕಪ್ ಟೂರ್ನಿಯಲ್ಲಿ 48 ತಂಡಗಳು ಭಾಗವಹಿಸಿದ್ದರಿಂದ ಒಟ್ಟು ಗೋಲುಗಳ ಸಂಖ್ಯೆ ಕೂಡ ಹೆಚ್ಚಾಗಿದೆ. ಟೂರ್ನಿಯಲ್ಲಿ 104 ಪಂದ್ಯಗಳಲ್ಲಿ ಒಟ್ಟು 308 ಗೋಲುಗಳು ದಾಖಲಾಗಿವೆ. ಈ ಹಿಂದೆ, 2022ರ ಫಿಫಾ ವಿಶ್ವಕಪ್ ಟೂರ್ನಿಯಲ್ಲಿ 172 ಗೋಲುಗಳು ದಾಖಲಾಗಿದ್ದು, ಈ ಹಿಂದಿನ ಗರಿಷ್ಠ ಗೋಲುಗಳಾಗಿತ್ತು.

### ಮಾರ್ಟಿನೆಜ್ ತಡೆಗೋಡೆ



ಅರ್ಜೆಂಟೀನಾ ತಂಡದ ಅನುಭವಿ ಗೋಲ್‌ಕೀಪರ್ ಎಮಿಲಿಯಾನೊ ಮಾರ್ಟಿನೇಜ್ ಅವರು ವಿಶ್ವಕಪ್‌ನ ಫೈನಲ್‌ನಲ್ಲಿ ಒಟ್ಟು 11 ಗೋಲುಗಳನ್ನು ತಡೆದರು. ಇದು ಪುರುಷರ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಗೋಲ್‌ಕೀಪರ್ ಒಬ್ಬರು ಮಾಡಿದ ಅತಿ ಹೆಚ್ಚು ತಡೆಗಳಾಗಿವೆ.

### ದಾಖಲೆ ಸಂಖ್ಯೆ ವೀಕ್ಷಕರು

ಅಮೆರಿಕ, ಮೆಕ್ಸಿಕೊ ಮತ್ತು ಕೆನಡಾ ದೇಶಗಳು ಜಂಟಿಯಾಗಿ ಆಯೋಜಿಸಿದ್ದ ಟೂರ್ನಿಯ 104 ಪಂದ್ಯಗಳನ್ನು 68 ಲಕ್ಷಕ್ಕೂ ಹೆಚ್ಚು ಜನರು ಕ್ರೀಡಾಂಗಣದಲ್ಲಿ ವೀಕ್ಷಿಸಿದ್ದಾರೆ. ಇದು ಫುಟ್‌ಬಾಲ್ ಇತಿಹಾಸದಲ್ಲೇ ಅತ್ಯಂತ ಹೆಚ್ಚು ಪ್ರೇಕ್ಷಕರು ವೀಕ್ಷಿಸಿದ ವಿಶ್ವಕಪ್ ಟೂರ್ನಿಯಾಗಿದೆ.

### ಪ್ರಾಯೋಗಿಕ ಶಿಕ್ಷಣ ಮತ್ತು ಉದ್ಯೋಗಾವಕಾಶದ ಉದ್ದೇಶ

# ಕೌಶಲಾಭಿವೃದ್ಧಿ: ವಿಟಿಯು–ಗೂಗಲ್ ಒಪ್ಪಂದ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಂಜಿನಿಯರಿಂಗ್ ವಿದ್ಯಾರ್ಥಿಗಳಲ್ಲಿ ಕೌಶಲಾಭಿವೃದ್ಧಿ, ಪ್ರಾಯೋಗಿಕ ಶಿಕ್ಷಣ ಮತ್ತು ಉದ್ಯೋಗಾವಕಾಶ ಸವಲತ್ತಿಗಾಗಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು (ವಿಟಿಯು) ಗೂಗಲ್ ಜತೆಗೆ ಒಪ್ಪಂದ ಮಾಡಿಕೊಂಡಿದೆ.

ನಗರದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ವಿಟಿಯು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್, ಕುಲಸಚಿವ (ಆಡಳಿತ) ಪ್ರೊ.ಪ್ರಸಾದ ಬಿ.ರಾಂಪುರೆ ಮತ್ತು ಗೂಗಲ್ ಫಾರ್ ಎಜುಕೇಷನ್ ಇಂಡಿಯಾ ಕಂಪನಿಯ ಮುಖ್ಯಸ್ಥ ಸಂಜಯ್ ಜೈನ್ ಅವರು ಒಪ್ಪಂದ ಪತ್ರಕ್ಕೆ ಸಹಿ ಹಾಕಿದರು.

ಕೃತಕ ಬುದ್ಧಿಮತ್ತೆ ಕೌಶಲ, ಬೋಧನಾ ಕೌಶಲ, ಕ್ಲೌಡ್ ಕಂಪ್ಯೂಟಿಂಗ್, ಡೇಟಾ ವಿಜ್ಞಾನ, ಸೈಬರ್ ಭದ್ರತೆ, ಕೈಗಾರಿಕಾ ಅಗತ್ಯಗಳಿಗೆ ತಕ್ಕುದಾಗಿ ಔದ್ಯೋಗಿಕ ಕೌಶಲ ಒದಗಿಸುವ ಉದ್ದೇಶದಿಂದ ಈ ಒಪ್ಪಂದ ಮಾಡಿಕೊಳ್ಳಲಾಗಿದೆ. ಕ್ವಾಲ್ಕಮ್, ಭಾರತ್ ಸ್ಕಿಲ್ ಇನ್‌ಸ್ಟಿಟ್ಯೂಟ್ ಫೌಂಡೇಷನ್, ಸೀಲ್ ಕಂಪನಿಗಳ ಜತೆಗೂ ಇದೇ ತೆರನಾದ ಒಪ್ಪಂದಕ್ಕೆ ಮಂಗಳವಾರ ಸಹಿ ಹಾಕಲಾಗಿದೆ.

ಪ್ರೊ.ಎಸ್.ವಿದ್ಯಾಶಂಕರ್, 'ವಿಟಿಯು ಅಡಿಯಲ್ಲಿ 220 ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಸುಮಾರು 3 ಲಕ್ಷ ವಿದ್ಯಾರ್ಥಿಗಳು ಅಧ್ಯಯನ ನಡೆಸುತ್ತಿದ್ದಾರೆ. ವಿದ್ಯಾರ್ಥಿಗಳು ಎಂಜಿನಿಯರಿಂಗ್ ಕೋರ್ಸ್ ಮುಗಿಸಿದ ತಕ್ಷಣ ಉದ್ಯೋಗವಕಾಶ ಸಿಗಬೇಕಾದಲ್ಲಿ, ಕೈಗಾರಿಕೆಗಳು ಮತ್ತು ಉದ್ಯಮಗಳಿಗೆ ಅಗತ್ಯವಾದಂಥ ಕೌಶಲಗಳು ಅವರಲ್ಲಿ ಇರಬೇಕು. ಅಂತಹ ಕೌಶಲ ರೂಪುಗೊಳ್ಳಲು ವಿಶೇಷ ತರಬೇತಿಯ ಅಗತ್ಯವಿದ್ದು, ಗೂಗಲ್ ಜತೆಗಿನ ಒಪ್ಪಂದ ಇಲ್ಲಿ ನೆರವಿಗೆ ಬರಲಿದೆ' ಎಂದರು.

ಗೂಗಲ್‌ನ ಸಂಜಯ್ ಜೈನ್, 'ಏಷ್ಯಾದಲ್ಲಿಯೇ ಅತ್ಯಂತ ದೊಡ್ಡ ಎಂಜಿನಿಯರಿಂಗ್ ವಿಶ್ವವಿದ್ಯಾಲಯವಾದ ವಿಟಿಯು ಜತೆಗೆ ಈ ಒಪ್ಪಂದ ಮಾಡಿಕೊಂಡಿರುವುದರಿಂದ ಉದ್ಯಮ ಕ್ಷೇತ್ರಕ್ಕೆ ಅನುಕೂಲವಾಗಲಿದೆ. ಈಗ ಸಣ್ಣ ಮಕ್ಕಳೂ ಕೃತಕ ಬುದ್ಧಿಮತ್ತೆ ಬಳಸುತ್ತಿದ್ದಾರೆ. ಆದರೆ, ಅವುಗಳ ಸರಿಯಾದ ಮತ್ತು ಪರಿಣಾಮಕಾರಿ ಬಳಕೆಯ ಬಗ್ಗೆ ಅರಿವಿನ ಕೊರತೆ ಇದೆ. ಹೀಗಾಗಿ ನಾವು ವಿದ್ಯಾರ್ಥಿಗಳು ಮಾತ್ರವಲ್ಲದೆ, ಬೋಧಕರಿಗೂ ಕೌಶಲ ತರಬೇತಿ ನೀಡುತ್ತೇವೆ. ಕೈಗಾರಿಕೆಗಳು ಬಯಸುವ ರೀತಿಯಲ್ಲಿ ವಿದ್ಯಾರ್ಥಿಗಳನ್ನು ಸಿದ್ಧಪಡಿಸಲಿದ್ದೇವೆ' ಎಂದು ಹೇಳಿದರು.

### ಡಿಜಿಟಲ್ ಕಲಿಕೆಗೆ 'ಸೀಲ್'

ಮೈಸೂರಿನ ಇ-ಲರ್ನಿಂಗ್ ಕೇಂದ್ರದ ಮೂಲಕ ಅತ್ಯಾಧುನಿಕ ಡಿಜಿಟಲ್ ಕಲಿಕಾ ವೇದಿಕೆಯನ್ನು 'ಅನುಕರಣೆ ಆಧಾರಿತ ಅನುಭವಜನ್ಯ ಕಲಿಕೆ (Simulation Enabled Experiential Learning-SEEL)' ಆರಂಭಿಸಲಾಗುತ್ತಿದೆ. ಇದು ಕ್ಲೌಡ್‌ನಿಂದ ಕಾರ್ಯನಿರ್ವಹಿಸುವ ವ್ಯವಸ್ಥೆಯಾಗಿದ್ದು, ವಿದ್ಯಾರ್ಥಿಗಳು ಯಾವುದೇ ಸಮಯದಲ್ಲಿ ಲಾಗಿನ್ ಆಗಬಹುದಾಗಿದೆ ಎಂದು ಪ್ರೊ.ಎಸ್.ವಿದ್ಯಾಶಂಕರ್ ಹೇಳಿದರು.

ಗೇಟ್ ಪರೀಕ್ಷೆ ಎದುರಿಸಲು ಪೂರ್ವತಯಾರಿಗೆ ಬೇಕಾದ ಕಲಿಕಾ ಸಾಮಗ್ರಿಗಳೂ ಸಹ ಇದರಲ್ಲೇ ಇವೆ. ಹಳೆಯ ಪ್ರಶ್ನೆ ಪತ್ರಿಕೆಗಳು, ಅಣುಕು ಪರೀಕ್ಷೆಗೆ ಅವಕಾಶ ಕಲ್ಪಿಸಲಾಗಿದೆ. ಕೈಗಾರಿಕಾ ಆಧಾರಿತ ಕೋರ್ಸ್‌ಗಳು, ಎಐ ಆಧಾರಿತ ಅಣುಕು ಸಂದರ್ಶನ, 1,900ಕ್ಕೂ ಹೆಚ್ಚು ಕೈಗಾರಿಕಾ ಯೋಜನೆಗಳು ಮತ್ತು ಇಂಟರ್ನ್‌ಶಿಪ್‌ಗಳಿಗೆ ಪ್ರವೇಶ, ತಾಂತ್ರಿಕ ವೆಬಿನಾರ್‌ಗಳು, ಕಾರ್ಯಾಗಾರಗಳು ಮತ್ತು ತಜ್ಞರ ಜತೆಗೆ ಸಂವಾದ ನಡೆಸಬಹುದಾಗಿದೆ ಎಂದು ಮಾಹಿತಿ ನೀಡಿದರು.

## ❖ ಅರ್ಜಿ ಸಲ್ಲಿಸಿದ 21 ದಿನಗಳೊಳಗೆ ನೀಡುವುದು ಕಡ್ಡಾಯ: ಜಾತಿ ಪ್ರಮಾಣಪತ್ರಕ್ಕೆ ಗಡುವು

- ಯಾವುದೇ ವಿದ್ಯಾರ್ಥಿ ಅರ್ಜಿ ಸಲ್ಲಿಸಿದ 21 ದಿನಗಳ ಒಳಗೆ ಜಾತಿ ಪ್ರಮಾಣಪತ್ರ ನೀಡುವುದನ್ನು ಕಂದಾಯ ಇಲಾಖೆ ಕಡ್ಡಾಯಗೊಳಿಸಿದೆ.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿವಿಧ ಸಂಘಟನೆಗಳ ಮುಖಂಡರ ಜತೆ ಸಭೆ ನಡೆಸಿ, ಸಮಸ್ಯೆಗಳನ್ನು ಆಲಿಸಿದ ನಂತರ ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಉಪಮುಖ್ಯಮಂತ್ರಿ ಜಿ.ಪರಮೇಶ್ವರ, 'ಒಳ ಮೀಸಲಾತಿ ಕಾರಣಕ್ಕಾಗಿ ವಿಳಂಬವಾಗಿದ್ದ ನೇಮಕಾತಿಗಳಿಗೆ ಚಾಲನೆ ನೀಡಲಾಗಿದೆ. 72 ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. ಇಂತಹ ಸಮಯದಲ್ಲಿ ಜಾತಿ ಪ್ರಮಾಣಪತ್ರ ನೀಡುವುದನ್ನು ವಿಳಂಬ ಮಾಡಬಾರದು. ಅದಕ್ಕಾಗಿ ಸಮಯ ನಿಗದಿಗೊಳಿಸಲಾಗಿದೆ' ಎಂದರು.
- ವಿಶ್ವವಿದ್ಯಾಲಯಗಳೂ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಈ ಕುರಿತು ಮುಖ್ಯಮಂತ್ರಿ ಜತೆ ಚರ್ಚೆ ನಡೆಸಿ, ಅಧಿಸೂಚನೆ ಹೊರಡಿಸಲಾಗುವುದು ಎಂದು ಹೇಳಿದರು.
- 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ (ಪಿಟಿಸಿಎಲ್) ಹಲವು ವರ್ಷಗಳ ನಂತರ ತಿದ್ದುಪಡಿ ತಂದಿದ್ದರೂ ಅನುಷ್ಠಾನ ವಿಳಂಬವಾಗುತ್ತಿದೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಪರಿಶಿಷ್ಟ ಮಹಿಳೆಯರಿಗೆ ಅನ್ಯಾಯವಾಗಿದೆ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸಮಯಕ್ಕೆ ಸರಿಯಾಗಿ ಸಿಗುತ್ತಿಲ್ಲ. ವಿದ್ಯಾರ್ಥಿ ವೇತನವನ್ನು ₹3.000ಕ್ಕೆ ಹೆಚ್ಚಳ ಮಾಡಬೇಕು. ಅರಣ್ಯ ಅಧಿಕಾರಿಗಳು ಅಲೆಮಾರಿ ಮತ್ತು ಆದಿವಾಸಿಗಳಿಗೆ ತೊಂದರೆ ನೀಡುತ್ತಿದ್ದಾರೆ.

ಕೆಐಎಡಿಬಿ ಭೂಮಿ ಹಂಚಿಕೆಯಲ್ಲಿ ಮೀಸಲಾತಿ ಕಲ್ಪಿಸಿದ್ದರೂ ಸರಿಯಾಗಿ ಭೂಮಿ ಹಂಚಿಕೆಯಾಗುತ್ತಿಲ್ಲ ಎಂದು ಸಂಘಟನೆಯ ಮುಖಂಡರು ಗಮನಕ್ಕೆ ತಂದಿದ್ದಾರೆ. ಎಲ್ಲ ಜಿಲ್ಲೆಗಳಿಂದ ಮಾಹಿತಿ ಪಡೆದು ಪರಿಶೀಲನ ನಡೆಸಲಾಗುವುದು' ಎಂದು ಭರವಸೆ ನೀಡಲಾಗಿದೆ ಎಂದರು.

- ವಿವಿಧ ಸಂಘಟನೆಗಳ ಮುಖಂಡರಾದ ಮಾವಳ್ಳಿ ಶಂಕರ್. ಇಂದಿರಾ ಕೃಷ್ಣಪ್ಪ, ಎಂ. ವೆಂಕಟಸ್ವಾಮಿ, ಶ್ರೀಧರ್ ಕಲಿವೀರ, ಸುಬ್ಬು ಹೊಲೆಯಾರ್, ಕಂದಾಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಆಯುಕ್ತ ಮೀನಾ ನಾಗರಾಜ್, ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮೋಹನ್ ರಾಜ್ ಉಪಸ್ಥಿತರಿದ್ದರು.



# ಉಪವಾಸ ಸತ್ಯಾಗ್ರಹ 'ಖಾಲಿ ಹೊಟ್ಟೆ'ಯ ಕಿಚ್ಚು

ಸೋನಮ್ ವಾಂಗ್ಚುಕ್ ಅವರ ಉಪವಾಸ ಸತ್ಯಾಗ್ರಹವು ದೇಶದ ಹಲವೆಡೆ ಹಲವು ರೀತಿಯ ಪ್ರತಿಭಟನೆ, ಆಂದೋಲನಗಳಿಗೆ ಕಾರಣವಾಗಿದೆ. ಉಪವಾಸ ಸತ್ಯಾಗ್ರಹಕ್ಕೆ ಭಾರತದಲ್ಲಿ ದೀರ್ಘ ಇತಿಹಾಸವೇ ಇದೆ. ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮ ಗಾಂಧಿ ಅವರು ಉಪವಾಸವನ್ನು ಪ್ರಬಲ ಅಸ್ತ್ರವಾಗಿ ಬಳಸಿ, ಜನಪ್ರಿಯಗೊಳಿಸಿದರು. ನಂತರ ಹಕ್ಕಿಗಾಗಿ, ಸವಲತ್ತಿಗಾಗಿ, ಘನತೆಯ ಬದುಕಿಗಾಗಿ ಪ್ರತಿಭಟಿಸಲು ಉಪವಾಸ ಸತ್ಯಾಗ್ರಹವು ಒಂದು ಅಸ್ತ್ರವಾಗಿ ವ್ಯಾಪಕವಾಗಿ ಬಳಕೆಯಾಗತೊಡಗಿತು. ಭಾಷೆಗಳ ಆಧಾರದಲ್ಲಿ ರಾಜ್ಯಗಳ ರಚನೆಗೆ ಕಾರಣವಾಗಿದ್ದೂ ಒಂದು ಉಪವಾಸ ಸತ್ಯಾಗ್ರಹ. ಹಾಗೆ ರಚನೆಯಾದ ಮೊದಲ ರಾಜ್ಯದ ವಿಭಜನೆಗೆ ಕಾರಣವಾಗಿದ್ದೂ ಇಂಥದ್ದೇ ಸತ್ಯಾಗ್ರಹ. ಉಪವಾಸದಿಂದ ಪ್ರಾಣ ಕಳೆದುಕೊಂಡವರು ಇರುವಂತೆಯೇ, ಅಧಿಕಾರ ಕಳೆದುಕೊಂಡವರೂ ಇದ್ದಾರೆ, ಅಧಿಕಾರ ಪಡೆದುಕೊಂಡವರೂ ಇದ್ದಾರೆ

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ದೇಶದ ಅತ್ಯಂತ ಪ್ರಮುಖ ಪ್ರವೇಶ ಪರೀಕ್ಷೆಯಲ್ಲಿ (ನೀಟ್) ನಡೆದ ಅಕ್ರಮದ ಜವಾಬ್ದಾರಿ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ರಾಜೀನಾಮೆ ಕೊಡಬೇಕು ಎಂದು ಸಾಮಾಜಿಕ ಕಾರ್ಯಕರ್ತ ಸೋನಮ್ ವಾಂಗ್ಚುಕ್ ಅವರು ಉಪವಾಸ ಸತ್ಯಾಗ್ರಹ ಆರಂಭಿಸಿದ್ದು ಜೂನ್ 28ರಂದು. ನೀರು ಮಾತ್ರವೇ ಕುಡಿದು 19 ದಿನ ಕಳೆಯುವ ಹೊತ್ತಿಗೆ ಅವರ ದೇಹತೂಕ 9 ಕೆ.ಜಿ. ಕಡಿಮೆಯಾಗಿತ್ತು. ಅವರ ಆರೋಗ್ಯ ಕ್ಷೀಣಿಸತೊಡಗಿತು. ಈ ಸಂಬಂಧದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ದೆಹಲಿ ನ್ಯಾಯಾಲಯವು ಅವರ ಆರೋಗ್ಯ ರಕ್ಷಣೆಯತ್ತ ಗಮನ ಕೊಡುವಂತೆ ಆದೇಶ ನೀಡಿತು. ಅವರೀಗ ಆಸ್ಪತ್ರೆಯಲ್ಲಿಯೇ ಸತ್ಯಾಗ್ರಹ ಮುಂದುವರಿಸುತ್ತಿದ್ದಾರೆ.

ಉಪವಾಸವು ಶತಮಾನಗಳಿಂದಲೂ ಭಾರತೀಯರ ಬದುಕಿನ ಭಾಗವಾಗಿದೆ. ಧಾರ್ಮಿಕ ಆಚರಣೆಯಾಗಿದ್ದ ಅದು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ರಾಜಕೀಯ ಪ್ರತಿಭಟನೆಯ ಅಸ್ತ್ರವಾಗಿ ಮಾರ್ಪಟ್ಟಿತು. ಮುಷ್ಕರ, ಜಾಥಾಗಳಂತೆ ಉಪವಾಸವನ್ನೂ ಪ್ರತಿಭಟನೆಯ ಹತಾರವನ್ನಾಗಿ ಮಾಡಿದ್ದು ಭಾರತದ ಹೋರಾಟಗಾರರ ವಿಶೇಷ. ಸ್ವಾತಂತ್ರ್ಯ ಹೋರಾಟದ ವೇಳೆ ಬಂಧಿಯಾಗಿದ್ದ ಭಗತ್‌ಸಿಂಗ್ ಅವರು, ಭಾರತೀಯ ಬಂದಿಗಳ ಕುರಿತು ಬ್ರಿಟಿಷರ ತಾರತಮ್ಯವನ್ನು ವಿರೋಧಿಸಿ ಲಾಹೋರ್ ಜೈಲಿನಲ್ಲಿ 116 ದಿನ ಉಪವಾಸ (1929) ಮಾಡಿದ್ದರು. 63 ದಿನ ಉಪವಾಸದ ನಂತರ ಅವರ ಸಹಹೋರಾಟಗಾರರಾಗಿದ್ದ ಜತಿನ್ ದಾಸ್ ಜೈಲಿನಲ್ಲಿಯೇ ಸಾವಿಗೀಡಾಗಿದ್ದರು; ಅದರಿಂದ ಹೋರಾಟದ ಕಿಚ್ಚು ಹೆಚ್ಚಾಗಿತ್ತು.

**ಗಾಂಧಿ ಮಾದರಿ:** ಉಪವಾಸವನ್ನು ರಾಜಕೀಯ ಹಾಗೂ ನೈತಿಕ ಪ್ರತಿಭಟನೆಯ ಮಾದರಿಯಂತೆಯೇ ಸಮಾಜ ಬದಲಾವಣೆಯ ಹತಾರವನ್ನಾಗಿಯೂ ಬಳಸಿ ಜನಪ್ರಿಯಗೊಳಿಸಿದ್ದು ಮಹಾತ್ಮ ಗಾಂಧಿ ಅವರು. 1918ರಿಂದ ಆರಂಭಿಸಿ ಸಾಯುವವರೆಗೆ (1948) ಅವರು ರಾಜಕೀಯ ಗುಲಾಮಗಿರಿ, ಧಾರ್ಮಿಕ ಹಿಂಸೆ, ಜಾತಿ ತಾರತಮ್ಯದ ವಿರುದ್ಧವಾಗಿ ಕನಿಷ್ಠ 15 ಪ್ರಮುಖ ಉಪವಾಸ ಸತ್ಯಾಗ್ರಹಗಳನ್ನು ಮಾಡಿದ್ದಾರೆ. ಈ ಪೈಕಿ 1933ರಲ್ಲಿ ಅವರು ದಲಿತರ ಪರವಾಗಿ 21 ದಿನ ಉಪವಾಸ ಮಾಡಿದ್ದು ಅತಿ ದೀರ್ಘ ಸತ್ಯಾಗ್ರಹವಾಗಿತ್ತು. ದೆಹಲಿಯಲ್ಲಿ ಕೋಮು ಸೌಹಾರ್ದಕ್ಕಾಗಿ 1948ರಲ್ಲಿ ಅವರು ಕೈಗೊಂಡ ಐದು ದಿನಗಳ ಸತ್ಯಾಗ್ರಹ ಕೊನೆಯ ಉಪವಾಸ. ಕಾಲಾಂತರದಲ್ಲಿ ಅದು ಗಾಂಧಿ ಅವರ ಅಹಿಂಸಾ ಮಾದರಿ ಎಂದು ಜಗತ್ತಿನಾದ್ಯಂತ ಪ್ರಸಿದ್ಧಿ ಪಡೆಯಿತು. ಸ್ವಾತಂತ್ರ್ಯದ ಬಳಿಕ 'ಗಾಂಧಿ ಮಾದರಿ'ಯನ್ನು ವ್ಯಾಪಕವಾಗಿ ಅನುಸರಿಸಲಾಗುತ್ತಿದೆ. ರಾಜಕೀಯ ಕಾರಣಗಳಿಗಾಗಿ ಉಪವಾಸ ಕೂರುವುದು ಹೆಚ್ಚಾಗುತ್ತಿದೆ.

**ಆಂಧ್ರ ರಚನೆ, ವಿಭಜನೆ:** ಭಾರತವು ಗಣರಾಜ್ಯವಾಗಿ ರೂಪುಗೊಳ್ಳುವಲ್ಲಿ ಉಪವಾಸ ಸತ್ಯಾಗ್ರಹದ ಪಾತ್ರವಿದೆ. ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಪೊಟ್ಟಿ ಶ್ರೀರಾಮುಲು ಅವರು ತೆಲುಗು ಭಾಷಿಕರಿಗಾಗಿ ಪ್ರತ್ಯೇಕ ರಾಜ್ಯ ರಚನೆ ಮಾಡಬೇಕು ಎಂದು ಆಗ್ರಹಿಸಿ 1952ರ ಅಕ್ಟೋಬರ್‌ನಲ್ಲಿ ಮದ್ರಾಸಿನಲ್ಲಿ ಉಪವಾಸ ಕೈಗೊಂಡರು. ದಿನ ಕಳೆದಂತೆ ಅವರ ಆರೋಗ್ಯ ಸ್ಥಿತಿ ಕ್ಷೀಣಿಸಿತು; 58ನೇ ದಿನ ಅವರು ನಿಧನರಾದರು. ತೆಲುಗರು ತೀವ್ರ ಪ್ರತಿಭಟನೆಗಿಳಿದರು. ಅನಿವಾರ್ಯವಾಗಿ ಕೇಂದ್ರ ಸರ್ಕಾರವು ಭಾಷೆಗಳ ಆಧಾರದಲ್ಲಿ ರಾಜ್ಯಗಳನ್ನು ವಿಂಗಡಿಸಲು ಮುಂದಾಯಿತು.

ವಿಶೇಷ ಏನೆಂದರೆ, ಶ್ರೀರಾಮುಲು ಅವರ ಉಪವಾಸವು ಆಂಧ್ರ ಪ್ರದೇಶ ರಾಜ್ಯ ರಚನೆಗೆ ಕಾರಣವಾದರೆ, 2009ರಲ್ಲಿ ಕೆ.ಚಂದ್ರಶೇಖರ್ ರಾವ್ ಅವರ ಉಪವಾಸವು ಆಂಧ್ರದ ವಿಭಜನೆಗೆ ಕಾರಣವಾಯಿತು. ತೆಲಂಗಾಣ ರಾಜ್ಯಕ್ಕಾಗಿ ಅವರು ಆಮರಣಾಂತ ಉಪವಾಸ ಆರಂಭಿಸಿದರು.

Publication Date 22/07/2026

ಮಹಾತ್ಮ ಗಾಂಧಿ ಅವರು ದೆಹಲಿಯಲ್ಲಿ 21 ದಿನಗಳ ಉಪವಾಸ ಸತ್ಯಾಗ್ರಹ ಮಾಡಿದ್ದಾಗಿನ ಚಿತ್ರ. ಜೊತೆಗಿದ್ದವರು ಬಾಲಕಿ ಇಂದಿರಾ ಗಾಂಧಿ ಚಿತ್ರ: ಪ್ರಜಾವಾಣಿ ಆರ್ಕೈವ್ಸ್

ಸೋನಮ್ ವಾಂಗ್ಚುಕ್ | ಮೇಧಾ ಪಾಟ್ಕರ್ | ಇರೋಮ್ ಶರ್ಮಿಳಾ

ಪೊಟ್ಟಿ ಶ್ರೀರಾಮುಲು

ಕೇಂದ್ರವು, ಪ್ರತ್ಯೇಕ ರಾಜ್ಯದ ಭರವಸೆ ನೀಡಿದ ನಂತರ ಅವರು 11 ದಿನದ ಸತ್ಯಾಗ್ರಹ ಅಂತ್ಯಗೊಳಿಸಿದ್ದರು.

ಉಪವಾಸ ಸತ್ಯಾಗ್ರಹವನ್ನೇ ಅಸ್ತ್ರವನ್ನಾಗಿ ಮಾಡಿಕೊಂಡು ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟ್ ಭದ್ರಕೋಟೆಯನ್ನು ಛಿದ್ರ ಮಾಡಿ ಅಧಿಕಾರದ ಗದ್ದುಗೆ ಹಿಡಿದಿದ್ದವರು ಮಮತಾ ಬ್ಯಾನರ್ಜಿ. ಸಿಂಗೂರ್‌ನಲ್ಲಿ ಟಾಟಾ ನ್ಯಾನೊ ಕಾರು ತಯಾರಿಕಾ ಘಟಕಕ್ಕಾಗಿ ಕೃಷಿ ಜಮೀನು ಸ್ವಾಧೀನಪಡಿಸಿಕೊಳ್ಳುವುದರ ವಿರುದ್ಧ ಮಮತಾ 25 ದಿನ ಉಪವಾಸ ಮಾಡಿ ಪ್ರತಿಭಟಿಸಿದ್ದರು. ಅದು ರಾಜ್ಯದ ರಾಜಕಾರಣದಲ್ಲಿ ಮಹತ್ತರ ಘಟ್ಟವಾಯಿತು. 34 ವರ್ಷಗಳ ಕಮ್ಯುನಿಸ್ಟ್ ಆಡಳಿತ ಅಂತ್ಯವಾಗುವಲ್ಲಿ ಅದರ ಪಾಲು ದೊಡ್ಡದು.

**ದೆಹಲಿಯಲ್ಲಿ ಅರಳಿದ ಎಎಪಿ:** ಆಮ್ ಆದ್ಮಿ ಪಕ್ಷವು (ಎಎಪಿ) ಹುಟ್ಟು ಪಡೆಯಲು ಮತ್ತು ದೆಹಲಿ ಗದ್ದುಗೆ ಹಿಡಿಯುವುದರ ಹಿಂದೆಯೂ ಸಾಮಾಜಿಕ ಕಾರ್ಯಕರ್ತ ಅಣ್ಣಾ ಹಜಾರೆ ಅವರ ಉಪವಾಸ ಸತ್ಯಾಗ್ರಹವಿದೆ. ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರದ ವಿರುದ್ಧ ಲೋಕಪಾಲ ಕಾಯ್ದೆ ತರಬೇಕು ಎಂದು 2011ರಲ್ಲಿ ಅವರು ದೆಹಲಿಯ ರಾಮಲೀಲಾ ಮೈದಾನದಲ್ಲಿ ಅನಿರ್ದಿಷ್ಟಾವಧಿ ಉಪವಾಸ ಆರಂಭಿಸಿದ್ದರು. ಭಾರಿ ಸಂಖ್ಯೆಯ ಜನರು ಅವರನ್ನು ಬೆಂಬಲಿಸಿದರು. ಆ ವೇಳೆಗಾಗಲೇ ಐಆರ್‌ಎಸ್ ಹುದ್ದೆ ತೊರೆದುಬಂದಿದ್ದ ಅರವಿಂದ ಕೇಜ್ರಿವಾಲ್ ಅವರ ಜತೆಗಿದ್ದರು. ಮುಂದೆ ಕೇಜ್ರಿವಾಲ್ ಆಮ್ ಆದ್ಮಿ ಪಕ್ಷ ಸ್ಥಾಪಿಸಿದರು. 2013ರ ವಿಧಾನಸಭಾ ಚುನಾವಣೆಯಲ್ಲಿ ಅವರು ಜಯ ಸಾಧಿಸಿದ್ದರು.

ರಾಜಕೀಯದ ಹೊರತಾಗಿ ಉಪವಾಸ ಸತ್ಯಾಗ್ರಹವನ್ನು ಮಾನವ ಹಕ್ಕುಗಳ ಹೋರಾಟದ ಸಾಧನವನ್ನಾಗಿ ಬಳಸಿ ಸರ್ಕಾರದ ದಮನದ ವಿರುದ್ಧ ದೀರ್ಘಕಾಲ ಹೋರಾಡಿದವರು ಮಣಿಪುರದ ಇರೋಮ್ ಶರ್ಮಿಳಾ ಚಾನು. ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆಯನ್ನು ರದ್ದುಪಡಿಸಬೇಕು ಎಂದು ಅವರು 2000 ಇಸವಿಯಲ್ಲಿ ಉಪವಾಸ ಆರಂಭಿಸಿದರು. ಅವರನ್ನು ಹಲವು ಬಾರಿ ಬಂಧಿಸಲಾಯಿತು, ಒತ್ತಾಯಪೂರ್ವಕವಾಗಿ ದ್ರವ ಆಹಾರ ನೀಡಲಾಯಿತು. ಪಟ್ಟು ಬಿಡದ ಇರೋಮ್ ಶರ್ಮಿಳಾ, 16 ವರ್ಷಗಳ ದೀರ್ಘ ಕಾಲ ಸತ್ಯಾಗ್ರಹ ನಡೆಸಿದರು.

ಆಹಾರವನ್ನು ತ್ಯಜಿಸಿ, ತನ್ನ ದೇಹಕ್ಕೆ ಗಾಸಿಯುಂಟುಮಾಡಿ ಸತ್ಯಾಗ್ರಹ ಮಾಡುವುದರ ಬಗ್ಗೆ ಹಲವರಿಗೆ ಭಿನ್ನ ಅಭಿಪ್ರಾಯಗಳೂ ಇವೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಕೂಡ ಉಪವಾಸದ ಮಾದರಿಯ ಪರವಾಗಿರಲಿಲ್ಲ. ಆದರೆ, ಇಂದಿಗೂ ದೇಶದಲ್ಲಿ ನೊಂದವರು, ಹೋರಾಟಗಾರರು, ಅಸಹಾಯಕರ ಪಾಲಿಗೆ ಇದು ಸರ್ಕಾರಗಳ ನಿಷ್ಕ್ರಿಯತೆ, ಆಡಳಿತ ಯಂತ್ರದ ವಿಳಂಬ, ದುರಾಡಳಿತದ ವಿರುದ್ಧ ಪ್ರತಿಭಟಿಸುವ ಅಸ್ತ್ರವಾಗಿ ಬಳಕೆಯಾಗುತ್ತಲೇ ಇದೆ. ಖಾಲಿ ಹೊಟ್ಟೆಯಲ್ಲಿ ಪ್ರತಿಭಟಿಸುವುದು ನೈತಿಕ ಹೋರಾಟದ ಒಂದು ಮಾದರಿಯಾಗಿದ್ದು, ಅದಕ್ಕೆ ಸಿಗುವ ಪ್ರತಿಫಲವು ಆಯಾ ಕಾಲಘಟ್ಟದ ನೈತಿಕ ಮೌಲ್ಯಗಳು, ಸರ್ಕಾರ-ಆಡಳಿತ ಯಂತ್ರದ ಸ್ಪಂದನೆ, ಸೂಕ್ಷ್ಮತೆ, ಸತ್ಯಾಗ್ರಹದ ತೀವ್ರತೆ ಮತ್ತು ಇತರ ಅಂಶಗಳನ್ನು ಅವಲಂಬಿಸಿರುತ್ತದೆ.

## ಗಂಗಾ ನದಿಗಾಗಿ ಆಹಾರ ಬಿಟ್ಟು ದೇಹ ತ್ಯಾಗ

ಗಂಗಾ ನದಿಯ ಸ್ವಚ್ಛತೆ ಮತ್ತು ಅದರ ಸಂರಕ್ಷಣೆಗಾಗಿ ತಿಂಗಳುಗಳಷ್ಟು ಉಪವಾಸ ಸತ್ಯಾಗ್ರಹ ಮಾಡಿ ಉಸಿರು ತ್ಯಾಗ ಮಾಡಿದ ಎರಡು ನಿದರ್ಶನಗಳು ನಮ್ಮಲ್ಲಿವೆ.

- ಗಂಗಾ ನದಿಯ ಜಲಾನಯನ ಪ್ರದೇಶದಲ್ಲಿ ಅಕ್ರಮ ಕ್ವಾರಿಗಳು, ಕ್ರಷರ್‌ಗಳನ್ನು ಸ್ಥಗಿತಗೊಳಿಸಬೇಕು ಎಂದು ಆಗ್ರಹಿಸಿ 2011ರಲ್ಲಿ ಸ್ವಾಮಿ ನಿಗಮಾನಂದ ಅವರು ಬದರೀನಾಥದ ಬಳಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದರು. ಅನ್ನ ಆಹಾರ ಬಿಟ್ಟು 115 ದಿನಗಳವರೆಗೆ ಏಕಾಂಗಿ ಹೋರಾಟ ಮಾಡಿದ ನಂತರ ಅವರು ಉಸಿರು ಚೆಲ್ಲಿದರು. ರಾಷ್ಟ್ರೀಯ ಮಟ್ಟದಲ್ಲಿ ಇದು ದೊಡ್ಡ ಸುದ್ದಿಯಾಗಿ ರಾಜಕೀಯ ಗದ್ದಲಕ್ಕೂ ಕಾರಣವಾಗಿತ್ತು
- ಗಂಗಾ ನದಿಯ ಶುದ್ಧೀಕರಣಕ್ಕಾಗಿ ಆಗ್ರಹಿಸಿ ಸ್ವಾಮಿ ಜ್ಞಾನಸ್ವರೂಪಾ ಸನಂದ್ ಎಂದೇ ಕರೆಸಿಕೊಳ್ಳುತ್ತಿದ್ದ ಐಐಟಿಯ ನಿವೃತ್ತ ಪ್ರೊಫೆಸರ್ ಗುರು ದಾಸ್ ಅಗರ್ವಾಲ್ ಅವರು 2018ರಲ್ಲಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದರು. 111 ದಿನಗಳ ಹೋರಾಟದ ನಂತರ ಅವರು ನಿಧನರಾದರು. ಅದಕ್ಕೂ ಮೊದಲು ಅವರು ಗಂಗಾ ನದಿ ಸ್ವಚ್ಛಗೊಳಿಸಬೇಕು, ಗೋಮುಖದಿಂದ ಉತ್ತರಕಾಶಿವರೆಗಿನ ಭಾಗೀರಥಿ ನದಿಯ ವ್ಯಾಪ್ತಿಯನ್ನು ಪರಿಸರ ಸೂಕ್ಷ್ಮ ವಲಯ ಎಂದು ಘೋಷಿಸಬೇಕು. ರಾಷ್ಟ್ರೀಯ ಗಂಗಾ ನದಿ ಅಚ್ಚುಕಟ್ಟು ಪ್ರಾಧಿಕಾರ ರಚಿಸಬೇಕು ಎಂದು ಸರ್ಕಾರಗಳಿಗೆ ಮನವಿ ಮಾಡುತ್ತಲೇ ಬಂದಿದ್ದರು. ಕೊನೆ ಹಂತದ ಪ್ರಯತ್ನವಾಗಿ ಉಪವಾಸ ಸತ್ಯಾಗ್ರಹ ಕುಳಿತಿದ್ದರು
- ಗುಜರಾತ್‌ನ ಸರ್ದಾರ್ ಸರೋವರ ಅಣೆಕಟ್ಟೆಯ ಎತ್ತರವನ್ನು ಹೆಚ್ಚಿಸುವ ಯೋಜನೆಯನ್ನು ವಿರೋಧಿಸಿ 2006ರಲ್ಲಿ ಪರಿಸರ ಹೋರಾಟಗಾರ್ತಿ ಮೇಧಾ ಪಾಟ್ಕರ್ ಅವರು ಉಪವಾಸ ಸತ್ಯಾಗ್ರಹ ನಡೆಸಿದ್ದರು. ಈ ಅಣೆಕಟ್ಟೆ ಯೋಜನೆಯಿಂದಾಗಿ ಸ್ಥಳಾಂತರಗೊಂಡವರಿಗೆ ಸಮರ್ಪಕ ಪುನರ್ವಸತಿ ಕಲ್ಪಿಸಲಾಗಿಲ್ಲ ಎಂದು ಅವರು ಆರೋಪಿಸಿದ್ದರು. 20 ದಿನಗಳ ನಂತರ ಸುಪ್ರೀಂ ಕೋರ್ಟ್ ಮಧ್ಯಪ್ರವೇಶ ಮಾಡಿತ್ತು. ಸರ್ಕಾರ ಕೂಡ ಪುನರ್ವಸತಿ ಕಲ್ಪಿಸಲು ಕ್ರಮ ಕೈಗೊಳ್ಳುವ ಭರವಸೆ ನೀಡಿತ್ತು. ಆ ಬಳಿಕ ಮೇಧಾ ಪಾಟ್ಕರ್ ಅವರು ಸತ್ಯಾಗ್ರಹ ವಾಪಸ್ ಪಡೆದಿದ್ದರು

## ಕಾನೂನಿನಲ್ಲಿ ಮಾನ್ಯವೇ?

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತದ ವಿರುದ್ಧ ಪ್ರತಿಭಟನೆ ನಡೆಸಲು ಅವಕಾಶ ಇದೆಯಾದರೂ, ಉಪವಾಸ ಸತ್ಯಾಗ್ರಹದಂತಹ, ಜೀವಕ್ಕೆ ಸ್ವತಃ ಹಾನಿಮಾಡಿಕೊಳ್ಳುವ ಪ್ರತಿಭಟನೆಗೆ ಅವಕಾಶವಿದೆಯೇ, ಸ್ವಯಂ ಇಚ್ಛೆಯಿಂದ ಉಪವಾಸ ಕೂತವರಿಗೆ ಸರ್ಕಾರ ಬಲವಂತವಾಗಿ ಆಹಾರವನ್ನು ನೀಡಬಹುದೇ ಎಂಬ ಬಗ್ಗೆ ಈಗ ಚರ್ಚೆ ನಡೆಯುತ್ತಿದೆ.

ಉಪವಾಸ ಸತ್ಯಾಗ್ರಹದಲ್ಲಿ ತೊಡಗಿದ್ದ ಸೋನಮ್ ವಾಂಗ್ಚುಕ್ ಅವರ ಆರೋಗ್ಯದ ಮೇಲೆ ನಿಗಾ ಇಡುವಂತೆ ದೆಹಲಿ ಹೈಕೋರ್ಟ್ ಸೂಚನೆ ನೀಡಿದ ಬಳಿಕ ದೆಹಲಿ ಸರ್ಕಾರ ಅವರನ್ನು ಬಲವಂತವಾಗಿ ಜಂತರ್ ಮಂತರ್‌ನಿಂದ ಆಸ್ಪತ್ರೆಗೆ ಕರೆದೊಯ್ದಿದೆ. ಸೋನಮ್ ಅವರ ಪತ್ನಿ ಗೀತಾಂಜಲಿ ಜೆಅಂಗ್ಮೊ ಅವರು ಕುಟುಂಬದವರ ಅನುಮತಿ ಇಲ್ಲದೆ ಬಲವಂತವಾಗಿ ಚಿಕಿತ್ಸೆ, ಆಹಾರ ನೀಡಬಾರದು ಎಂದು ಸರ್ಕಾರಕ್ಕೆ ಮನವಿಯನ್ನೂ ಮಾಡಿದ್ದಾರೆ.

ಉಪವಾಸ ಸತ್ಯಾಗ್ರಹವನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ವ್ಯಕ್ತಪಡಿಸುವ ಒಂದು ಕ್ರಮ ಎಂದು ನ್ಯಾಯಾಲಯಗಳು ಪರಿಗಣಿಸಿವೆ. ಅದೇ ಹೊತ್ತಿನಲ್ಲಿ ಜನರ ಜೀವವನ್ನು ರಕ್ಷಿಸುವ ಅಧಿಕಾರ ಸರ್ಕಾರಕ್ಕೆ ಇದೆ ಎಂದೂ ಅಭಿಪ್ರಾಯ ಪಟ್ಟಿವೆ.

## ವಿದೇಶಗಳಲ್ಲಿ ಉಪವಾಸ ಸತ್ಯಾಗ್ರಹ


ಭಾರತದಲ್ಲಷ್ಟೇ ಅಲ್ಲ, ಜಗತ್ತಿನ ವಿವಿಧ ದೇಶಗಳಲ್ಲೂ ಜನರು ಹಿಂದಿನಿಂದಲೂ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಉಪವಾಸ ಸತ್ಯಾಗ್ರಹವನ್ನು ಆಡಳಿತದ ವಿರುದ್ಧದ ಅಸ್ತ್ರವನ್ನಾಗಿ ಮಾಡಿಕೊಂಡಿದ್ದರು. ಇತಿಹಾಸದಲ್ಲಿ ರಷ್ಯಾ, ಬ್ರಿಟನ್, ಐರ್ಲೆಂಡ್, ದಕ್ಷಿಣ ಆಫ್ರಿಕಾ, ಅಮೆರಿಕ, ಇತ್ತೀಚೆಗೆ ಇಸ್ರೇಲ್‌ನಲ್ಲೂ ಸರ್ಕಾರದ ಕ್ರಮಗಳನ್ನು ಖಂಡಿಸಿ ಜನರು ಉಪವಾಸ ಸತ್ಯಾಗ್ರಹ ಮಾಡಿದ ಉದಾಹರಣೆಗಳಿವೆ. ಈ ರೀತಿಯ ಹೋರಾಟ ಕೈಗೊಂಡವರಲ್ಲಿ ಕೈದಿಗಳು, ಅದರಲ್ಲೂ ರಾಜಕೀಯ ಕೈದಿಗಳ ಸಂಖ್ಯೆ ಹೆಚ್ಚಿದೆ.

- 1878ರಲ್ಲಿ ರಷ್ಯಾದ ಝಾರ್ ಸರ್ವಾಧಿಕಾರ ಆಡಳಿತದ ವಿರುದ್ಧ ಧ್ವನಿ ಎತ್ತಿ ಬಂಧನಕ್ಕೆ ಒಳಗಾದ ಪುರುಷ ರಾಜಕೀಯ ಕೈದಿಗಳು ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಉಪವಾಸ ಇದ್ದು ಪ್ರತಿಭಟನೆ ನಡೆಸಿದ್ದರು. ಇದು ಆಧುನಿಕ ಇತಿಹಾಸದಲ್ಲಿ ವರದಿಯಾದ ಮೊದಲ ಉಪವಾಸ ಸತ್ಯಾಗ್ರಹ ಎಂದು ನಂಬಲಾಗಿದೆ. ನಂತರ ಮಹಿಳಾ ಕೈದಿಗಳೂ ಇದೇ ರೀತಿಯ ಹೋರಾಟ ನಡೆಸಿದ್ದರು ಎನ್ನಲಾಗಿದೆ
- 1900 ಮತ್ತು 1910ರ ದಶಕಗಳಲ್ಲಿ ಬ್ರಿಟನ್ ಮತ್ತು ಅಮೆರಿಕದಲ್ಲಿ ಮತದಾನದ ಹಕ್ಕು ನೀಡುವಂತೆ ಆಗ್ರಹಿಸಿ ಮಹಿಳೆಯರು ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು. ಮತದ ಹಕ್ಕಿಗಾಗಿ ಹೋರಾಟ ನಡೆಸುತ್ತಿದ್ದಾಗ ಸರ್ಕಾರಗಳು ಪ್ರತಿಭಟನಕಾರರನ್ನು ಬಂಧಿಸಿ ಜೈಲಿಗಟ್ಟಿದ್ದವು. ಮಹಿಳೆಯರು ಜೈಲಿನಲ್ಲಿ ಇದ್ದುಕೊಂಡೇ ಉಪವಾಸ ಕುಳಿತು ತಮ್ಮ ಹಕ್ಕಿಗಾಗಿ ಆಗ್ರಹಿಸಿದ್ದರು. ಜೈಲಿನ ಆಡಳಿತ ಅವರಿಗೆ ಬಲವಂತವಾಗಿ ಆಹಾರ ನೀಡಿತ್ತು. ಮಹಿಳೆಯರ ಹೋರಾಟಕ್ಕೆ ಜಾಗತಿಕ ಮಟ್ಟದಲ್ಲಿ ಬೆಂಬಲ ವ್ಯಕ್ತವಾಗಿತ್ತು
- 1981ರಲ್ಲಿ ಉತ್ತರ ಐರ್ಲೆಂಡ್‌ನಲ್ಲಿ ನಡೆದ ಉಪವಾಸ ಸತ್ಯಾಗ್ರಹ ಘಟನೆ ಈಗಲೂ ಹಸಿರಾಗಿದೆ. ಐರ್ಲೆಂಡಿನ ರಿಪಬ್ಲಿಕನ್ ಕೈದಿಗಳಾಗಿದ್ದ ಬಾಬ್ಬಿ ಸ್ಯಾಂಡ್ಸ್ ಮತ್ತು ಇತರ ಒಂಬತ್ತು ಮಂದಿ ರಾಜಕೀಯ ಕೈದಿಗಳ ಸ್ಥಾನಮಾನಕ್ಕೆ ಆಗ್ರಹಿಸಿ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು. 66 ದಿನಗಳ ಹೋರಾಟದ ಬಳಿಕ ಎಲ್ಲ 10 ಜನರೂ ಮೃತಪಟ್ಟಿದ್ದರು. ಈ ಘಟನೆ ಜಾಗತಿಕ ಮಟ್ಟದಲ್ಲಿ ದೊಡ್ಡ ಚರ್ಚೆಯನ್ನೇ ಹುಟ್ಟುಹಾಕಿತ್ತು
- 2000ದಲ್ಲಿ ಟರ್ಕಿಯ ಜೈಲುಗಳಲ್ಲಿ ಬಿಗಿ ಭದ್ರತೆಯ ಕೊಠಡಿಗಳನ್ನು ನಿರ್ಮಿಸುವುದರ ವಿರುದ್ಧ ದೇಶದಾದ್ಯಂತ ವಿವಿಧ ಜೈಲುಗಳಲ್ಲಿ ನೂರಾರು ಕೈದಿಗಳು ಆಮರಣಾಂತ ಉಪವಾಸ ಕೈಗೊಂಡಿದ್ದರು. ಹಲವರು ಮೃತಪಟ್ಟಿದ್ದರು
- ಗ್ವಾಂಟಾನಮೊ ಕೊಲ್ಲಿಯಲ್ಲಿ ಅಮೆರಿಕದ ಬಂಧನ ಕೇಂದ್ರಗಳಲ್ಲಿದ್ದ ಕೈದಿಗಳು ಸೂಕ್ತ ಆರೋಪಗಳಿಲ್ಲದೇ ಅನಿರ್ದಿಷ್ಟಾವಧಿವರೆಗೆ ವಶದಲ್ಲಿ ಇರಿಸಿಕೊಂಡಿದ್ದನ್ನು ಮತ್ತು ಕೇಂದ್ರದಲ್ಲಿನ ಅವ್ಯವಸ್ಥೆಯನ್ನು ಪ್ರತಿಭಟಿಸಿ 2002, 2005ರಲ್ಲಿ ಉಪವಾಸ ಕುಳಿತಿದ್ದರು
- 2025ರಲ್ಲಿ ಇಸ್ರೇಲ್ ಬಂಧಿಸಿದ್ದ ಪ್ಯಾಲೆಸ್ಟೀನಿಯನ್ನರ ಪರ ಹೋರಾಟಗಾರರು, ಇಸ್ರೇಲ್ ಕ್ರಮವನ್ನು ಖಂಡಿಸಿ ಜೈಲಿನಲ್ಲಿದ್ದುಕೊಂಡೇ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು. ಬ್ರಿಟನ್‌ನಲ್ಲಿ ಬಂಧನಕ್ಕೊಳಗಾಗಿದ್ದ 'ಪ್ಯಾಲೆಸ್ಟೀನ್ ಆ್ಯಕ್ಷನ್' ಸಂಘಟನೆಯ ಸದಸ್ಯರು ಜೈಲಿನಲ್ಲಿ ನಡೆಸಿದ್ದ ಉಪವಾಸ ಸತ್ಯಾಗ್ರಹ ಜಾಗತಿಕ ಮಟ್ಟದಲ್ಲಿ ಸುದ್ದಿಯಾಗಿತ್ತು

ಆಧಾರ: ಪಿಟಿಐ, ಬಿಬಿಸಿ, ಮಾಧ್ಯಮ ವರದಿಗಳು

Presented by





# ಮುಂದಿದೆ ಸೋಡಿಯಂ ಬ್ಯಾಟರಿಗಳ ಕಾಲ!

**ದುರ್ಲಭವಾದ ಲಿಥಿಯಂ ಬದಲಿಗೆ ಉಪ್ಪಿನಲ್ಲಿಯೂ ಸಿಗುವ ಸೋಡಿಯಂ ಅನ್ನು ಬಳಸುವ ಬ್ಯಾಟರಿಗಳು ಶೀಘ್ರವೇ ದೊರೆಯಲಿವೆ**

• ಕೊಳ್ಳೇಗಾಲ ಶರ್ಮ

**ವಿದ್ಯುತ್ ಕಾರನ್ನು** ಕೊಳ್ಳಬೇಕೆಂದಿದ್ದೀರಾ? ಅಥವಾ ಲೋಡ್ ಶೆಡ್ಡಿಂಗ್‌ಗೆ ಬೇಸತ್ತು ಮನೆಯಲ್ಲಿಯೇ ಸ್ವಂತವಾಗಿ ವಿದ್ಯುತ್ ಉತ್ಪಾದಿಸಲು ಸೌರವಿದ್ಯುತ್ ಫಲಕಗಳನ್ನು ಬಳಸುವ ಯೋಚನೆಯೇ? ಹಾಗಿದ್ದರೆ ಈ ಸುದ್ದಿ ನಿಮಗೆ. ಈ ಸಾಧನಗಳಲ್ಲಿ ಅತ್ಯಗತ್ಯವಾದ ಬ್ಯಾಟರಿ ಬದಲಾಗಲಿದೆ. ಲಿಥಿಯಂ ಬ್ಯಾಟರಿಯ ಬದಲಿಗೆ ಸೋಡಿಯಂ ಲೋಹದ ಬ್ಯಾಟರಿಗಳು ಬರಲಿವೆ. ಇನ್ನೊಂದು ವರ್ಷದೊಳಗೆ ಇಂತಹ ಸೋಡಿಯಂ ಬ್ಯಾಟರಿಯ ತಯಾರಿಕೆ ಭಾರತದಲ್ಲಿಯೇ ನಡೆಯಲಿದೆ.

ಮೊನ್ನೆ ಪೆಟ್ರೋಲ್‌ನ ಆತಂಕ ಎದುರಾದ ಮೇಲಂತೂ ನನ್ನ ಕಾರನ್ನು ಎಲ್ಲೆಂದರಲ್ಲಿ ನಿಲ್ಲಿಸಿ ಜನರು ಪ್ರಶ್ನೆ ಕೇಳುತ್ತಿದ್ದರು. ಅವರ ಕುತೂಹಲಕ್ಕೆ ಕಾರಿನ ಬ್ಯಾಟರಿಯೇ ಕಾರಣ. ಪೂರ್ತಿ ಚಾರ್ಜ್ ಮಾಡಲು ಎಷ್ಟು ಗಂಟೆ ಬೇಕು? ಬ್ಯಾಟರಿಯ ತೂಕ ಎಷ್ಟು? ಒಮ್ಮೆ ಚಾರ್ಜ್ ಮಾಡಿದರೆ ಎಷ್ಟು ಕಾಲ ಬಳಸಬಹುದು? ಎಷ್ಟು ದೂರ ಓಡಿಸಬಹುದು? ಎಷ್ಟು ಕಿಲೋವಾಟ್ ಶಕ್ತಿಯನ್ನು ಸಂಗ್ರಹಿಸಿ ಇಡಬಹುದು? ಈ ಎಲ್ಲ ಆತಂಕಗಳಿಗೂ ಹೊಸ ಉತ್ತರವನ್ನು ಸೋಡಿಯಂ ಬ್ಯಾಟರಿಗಳು ನೀಡಲಿವೆ.

ಬ್ಯಾಟರಿಗಳು ಎಂದರೆ ಇನ್ನೇನಲ್ಲ, ವಿದ್ಯುತ್ತಿನ ಭಂಡಾರ. ಉಷ್ಣ ಸ್ಥಾವರದಲ್ಲಿಯೋ, ಜಲವಿದ್ಯುತ್ ಸ್ಥಾವರದಲ್ಲಿಯೋ, ಪರಮಾಣು ರಿಯಾಕ್ಟರುಗಳಿಂದಲೋ ಉತ್ಪಾದಿಸಿದ ವಿದ್ಯುತ್ತನ್ನು ಆಗಿಂದಾಗ್ಗೆಯೇ ಬಳಸಿಬಿಡಬೇಕು; ಅದನ್ನು ಕೂಡಿಡುವ ಪ್ರಶ್ನೆಯೇ ಇಲ್ಲ. ಬಳಕೆಗಿಂತ ಹೆಚ್ಚು ಉತ್ಪಾದನೆ ಆದರೂ ಲೋಡ್ ಶೆಡ್ಡಿಂಗ್, ಕಡಿಮೆ ಆದರೂ ಲೋಡ್ ಶೆಡ್ಡಿಂಗ್ ಅನಿವಾರ್ಯ. ಅಧಿಕವಾಗಿ ಉತ್ಪಾದಿಸಿ ಶೇಖರಿಸಿ ಇಡುವ ತಂತ್ರವೇ ಬ್ಯಾಟರಿ. ವಿದ್ಯುತ್ ಜನಕ ಬ್ಯಾಟರಿಗಳೂ ಇವೆ. ಹಿಂದೆ ಬಳಸುತ್ತಿದ್ದ ಸೀಸದ ಬ್ಯಾಟರಿಗಳಲ್ಲಿ ರಾಸಾಯನಿಕ ಕ್ರಿಯೆಯಿಂದಾಗಿ ವಿದ್ಯುತ್ ಹುಟ್ಟುತ್ತಿತ್ತು. ಆದರೆ ಈಗ ಇರುವ ರೀಚಾರ್ಜಬಲ್ ಬ್ಯಾಟರಿಗಳು ವಿದ್ಯುತ್ತನ್ನು ರಾಸಾಯನಿಕರೂಪದಲ್ಲಿ ಸಂಗ್ರಹಿಸಿ ಇಡುತ್ತವೆ. ಹೀಗಾಗಿ ಅವು 'ರೀಚಾರ್ಜಬಲ್'; ಮರುಬಳಕೆಗೆ ಒದಗುವ ವಿದ್ಯುತ್ ಸಂಗ್ರಹ.

ರೀಚಾರ್ಜಬಲ್ ಬ್ಯಾಟರಿಗಳಲ್ಲಿ ಬಳಸುವ ರಾಸಾಯನಿಕಗಳಿಗೆ 'ಲಿಥಿಯಂ' ಎನ್ನುವ ಲೋಹ ಬಲು ಮುಖ್ಯ. ಇದು ಜಗತ್ತಿನಲ್ಲಿಯೇ ಅತಿ ಹಗುರವಾದ ಲೋಹ. ಇದರ ಪರಮಾಣುವಿನ ಹೊರಹೊದಿಕೆಯಲ್ಲಿ ಇರುವ ಎಲೆಕ್ಟ್ರಾನ್‌ಗಳಲ್ಲಿ ಒಂದು ಬಹಳ ಸಡಿಲವಾಗಿ ಇರುವುದರಿಂದ ತಟಕ್ಕನೆ ಅದನ್ನು ಬಿಟ್ಟುಕೊಡಬಲ್ಲುದು. ಹೀಗೆ ಎಲೆಕ್ಟ್ರಾನ್‌ಗಳನ್ನು ಬಿಡಿಸಿ, ಪ್ರವಾಹದಂತೆ ಒಂದೆಡೆಗೆ ಸಾಗಿಸಿದರೆ ವಿದ್ಯುತ್ ಉತ್ಪಾದಿಸಿದೆವು ಎಂದರ್ಥ. ಬ್ಯಾಟರಿಗಳಲ್ಲಿ ಇರುವ ಪಾಸಿಟಿವ್ ಹಾಗೂ ನೆಗಟಿವ್-ಧ್ರುವಗಳನ್ನು ಜೋಡಿಸಿದಾಗ ಎಲೆಕ್ಟ್ರಾನುಗಳು ಹರಿಯುತ್ತವೆ, ಕರೆಂಟು ಹುಟ್ಟುತ್ತದೆ.

ಲಿಥಿಯಂ ಬ್ಯಾಟರಿಗಳ ನೆಗಟಿವ್ (ಋಣ) ತುದಿಯಲ್ಲಿ ಲಿಥಿಯಂ ಲೋಹದ ಲವಣಗಳಿರುತ್ತವೆ. ಇನ್ನೊಂದು ತುದಿಯಲ್ಲಿ, ಅಂದರೆ ಪಾಸಿಟಿವ್ (ಧನ) ತುದಿಯಲ್ಲಿ ಹರಿದು ಬಂದ ಎಲೆಕ್ಟ್ರಾನುಗಳನ್ನು ಕೂಡಿಟ್ಟುಕೊಳ್ಳಬಲ್ಲ ಲವಣಗಳಿರುತ್ತವೆ. ಇವೆರಡರ ನಡುವೆ ಎಲೆಕ್ಟ್ರಾನ್‌ಗಳ ಹರಿವನ್ನು ತಡೆಯುವ ಕಾಗದದ ಪೊರೆಯೊಂದು ಇರುತ್ತದೆ. ಈ ಮೂರೂ ಅಂಗಗಳ ರಚನೆಗಳೇ ಬ್ಯಾಟರಿಯಲ್ಲಿ ಸಂಗ್ರಹವಾಗಬಲ್ಲ ವಿದ್ಯುತ್ತಿನ ಪ್ರಮಾಣ, ಬ್ಯಾಟರಿ ಖಾಲಿಯಾಗುವುದಕ್ಕೆ ಬೇಕಾದ ಸಮಯ ಹಾಗೂ ಬ್ಯಾಟರಿಯನ್ನು ರೀಚಾರ್ಜ್ ಮಾಡುವುದಕ್ಕೆ ಬೇಕಾದ ಸಮಯವನ್ನು ನಿರ್ಧರಿಸುತ್ತವೆ.

ಬ್ಯಾಟರಿಯ ಧನಧ್ರುವದಲ್ಲಿ ಇರುವ ಲಿಥಿಯಂಲೋಹವನ್ನು ಅದರ ಆಕ್ಸೈಡಿನ ರೂಪದಲ್ಲಿ, ಪದರಗಳಲ್ಲಿ ಪೇರಿಸಿಟ್ಟಿರುತ್ತಾರೆ. ಎಲೆಕ್ಟ್ರಾನ್‌ಗಳನ್ನು ಬಿಟ್ಟುಕೊಟ್ಟ ಪದರಗಳು ನೀರಾಗದಂತೆ ಕಾಯ್ದುಕೊಳ್ಳುವುದು ಮುಖ್ಯ. ಇದಕ್ಕಾಗಿ ಹಿಂದೆ ಕಾರ್ಬನ್ ಹಾಗೂ ತಾಮ್ರದ ಲವಣಗಳ ಹರಳಿನೊಳಗೆ ಲಿಥಿಯಂ ಹರಳುಗಳನ್ನು ಇಟ್ಟಿರುತ್ತಿದ್ದರು. ಈಗ ಇದಕ್ಕಾಗಿ ನಿಕ್ಕಲ್, ಮ್ಯಾಂಗನೀಸ್ ಮತ್ತು ಕೋಬಾಲ್ಟಿನಂತಹ ಲೋಹಗಳ ಲವಣಗಳನ್ನು ಬಳಸುತ್ತಿದ್ದಾರೆ. ಇದರಿಂದಾಗಿ ಲಿಥಿಯಂ ಹರಳುಗಳನ್ನು ಬಹಳ ಒತ್ತೊತ್ತಾಗಿ ಕೂಡಿಸಬಹುದಾಗಿದೆ. ಸೋಡಿಯಂ ಬ್ಯಾಟರಿಗಳ ಋಣಧ್ರುವದಲ್ಲಿ ಲಿಥಿಯಂನ ಲವಣಗಳ ಬದಲಿಗೆ ಸೋಡಿಯಂನ ಲವಣಗಳನ್ನು ಹುದುಗಿಸಿರುತ್ತಾರೆ.

ಸೋಡಿಯಂ ಪರಮಾಣುಗಳು ಲಿಥಿಯಮಿಗಿಂತ ಭಾರಿ ಆದ್ದರಿಂದ, ತೂಕಕ್ಕೆ ತೂಕದಲ್ಲಿ ಕೂಡಿಡಬಹುದಾದ ಶಕ್ತಿಯ ಪ್ರಮಾಣ ಲಿಥಿಯಂ ಬ್ಯಾಟರಿಗಳಿಗಿಂತಲೂ ಕಡಿಮೆಯೇ. ಲಿಥಿಯಮಿನ ಒಂದು ಕಿಲೋ ಬ್ಯಾಟರಿಯಲ್ಲಿ ಗರಿಷ್ಠ ಮುನ್ನೂರು ವ್ಯಾಟ್‌ಗಳಷ್ಟು ವಿದ್ಯುತ್ತನ್ನು ಕೂಡಿಡಬಹುದು. ಸೋಡಿಯಂ ಬ್ಯಾಟರಿಗಳಲ್ಲಿ ಇದು ಕೇವಲ ನೂರೆಪ್ಪತ್ತೈದು ವ್ಯಾಟ್‌ಗಳಷ್ಟು ಅಷ್ಟೆ. ಎಂದರೆ, ಐವತ್ತರಿಂದ ನೂರು ಕಿಲೋಮೀಟರು ರೇಂಜ್ ಇರುವ ಸ್ಕೂಟರುಗಳ ಒಟ್ಟಾರೆ ತೂಕದಲ್ಲಿ ಹತ್ತು ಕಿಲೋ ಕೇವಲ ಈ ಬ್ಯಾಟರಿಯದ್ದೇ ಆಗಿರುತ್ತದೆ. ಇನ್ನು ನೂರಾರು ಕಿಲೋಮೀಟರ್‌ಗಳ ರೇಂಜ್ ಬೇಕಾದ ಕಾರುಗಳು ಇನ್ನೂ ಸ್ಥೂಲ ಬ್ಯಾಟರಿಕಾಯಗಳಾಗಬೇಕು.

ಹಾಗಿದ್ದೂ ಸೋಡಿಯಂ ಬ್ಯಾಟರಿಗಳಿಂದ ಹಲವು ಲಾಭಗಳಿವೆ. ಉದಾಹರಣೆಗೆ, ಸೋಡಿಯಂ ಬಹಳ ಸುಲಭವಾಗಿ ದೊರೆಯುವ ಲೋಹ. ಭಾರತದಲ್ಲಿಯೂ ಇದರ ನಿಕ್ಷೇಪಗಳು ಬಹಳ ಇವೆ. ಅಡುಗೆಉಪ್ಪಿನ ಅರ್ಧ ಭಾಗ ಸೋಡಿಯಂ. ಜೊತೆಗೆ ಲಿಥಿಯಂ ಬ್ಯಾಟರಿಯ ಪಾಸಿಟಿವ್-ಧ್ರುವದಲ್ಲಿ ಬಳಸುವ ನಿಕಲ್, ಕ್ಯಾಡ್ಮಿಯಂ ಹಾಗೂ ಲಿಥಿಯಂ ಎಲ್ಲೆಡೆ ದೊರೆಯುವುದಿಲ್ಲ; ಜೊತೆಗೆ ಅವು ವಿಷಕಾರಿ ಕೂಡ. ಆದ್ದರಿಂದ ಹಳೆಯ ಬ್ಯಾಟರಿಗಳ ವಿಲೇವಾರಿ ಕೂಡ ಕಷ್ಟ. ಸೋಡಿಯಂ ಬ್ಯಾಟರಿಗಳಲ್ಲಿ ಈ ಲೋಹಗಳ ಬದಲಿಗೆ ಸೋಡಿಯಂ, ನೈಟ್ರೋಜನ್, ಕಬ್ಬಿಣ ಮತ್ತು ಕಾರ್ಬನ್‌ನಂತಹ ಸುಲಭವಾಗಿ ದೊರೆಯುವ ವಸ್ತುಗಳನ್ನೇ ಬಳಸಬಹುದು. ಹೀಗಾಗಿ ಈ ಬ್ಯಾಟರಿಗಳು ಅಗ್ಗವೂ, ಸುಲಭವಾಗಿ ಬಿಸಾಡಬಹುದಾದದ್ದೂ ಆಗಬಹುದು.

ಸೋಡಿಯಂ ಬ್ಯಾಟರಿಗಳ ಕಲ್ಪನೆ ಐವತ್ತು ವರ್ಷಗಳಷ್ಟು ಹಳೆಯದಾಗಿದ್ದರೂ, ಲಿಥಿಯಂ ಬ್ಯಾಟರಿಗಳು ಬಂದಾಗ ಆ ಬಗ್ಗೆ ಗಮನ ಕಡಿಮೆಯಾಗಿತ್ತು. ಜೊತೆಗೆ ದಟ್ಟವಾಗಿ ಸೋಡಿಯಂ-ಲವಣಗಳನ್ನು ಕೂಡಿಡುವ ಉಪಾಯ ಹೊಳೆದಿರಲಿಲ್ಲ. ಇದೀಗ ಈ ತಂತ್ರಗಳು ಕೈಗೆಟುಕುತ್ತಿವೆ. ಪ್ರಪಂಚದ ಅತಿ ದೊಡ್ಡ ಬ್ಯಾಟರಿ ತಯಾರಕ ಹಾಗೂ ಸರಬರಾಜುದಾರ ಕಂಪೆನಿ ಕಂಟೆಂಪೊರರಿ ಆಂಪೆರೆಕ್ಸ್ ಟೆಕ್ನಾಲಜಿ ಲಿಮಿಟೆಡ್ (ಸಿಎಟಿಎಲ್) ಈ ವರ್ಷದಿಂದ ಸೋಡಿಯಂ ಬ್ಯಾಟರಿಗಳನ್ನು ತಯಾರಿಸಿ ಮಾರಾಟ ಮಾಡುತ್ತಿದೆ. ಈ ಬ್ಯಾಟರಿಗಳಲ್ಲಿ ಸೋಡಿಯಂನ ಜೊತೆಗೆ ನೀಲಿಬಣ್ಣದ ವಸ್ತುವೊಂದನ್ನೇ ಹೋಲುವ ನೈಟ್ರೋಜನ್, ಕಾರ್ಬನ್ ಹಾಗೂ ಕಬ್ಬಿಣ ಇರುವ 'ಪ್ರಶಿಯನ್ ವೈಟ್' ಎನ್ನುವ ಪುಡಿಯನ್ನು ಪಾಸಿಟಿವ್-ಧ್ರುವದಲ್ಲಿ ಬಳಸಿದೆ. ನೆಗಟಿವ್-ಧ್ರುವದಲ್ಲಿ ತಾಮ್ರದ ಬದಲಿಗೆ ಅಲ್ಯುಮಿನಿಯಂ ಬಳಸಿ, ಸೋಡಿಯಂಹರಳುಗಳ ಪದರವನ್ನು ಪೇರಿಸಿದ ಬ್ಯಾಟರಿಗಳನ್ನು ವಾಹನಗಳು ಹಾಗೂ ಇತರೆ ಬಳಕೆಗಾಗಿ ಸದ್ಯದಲ್ಲೇ ಬೃಹತ್ ಪ್ರಮಾಣದಲ್ಲಿ ಬಿಡುಗಡೆ ಮಾಡಲಿದೆ. ಭಾರತವೂ ಈ ನಿಟ್ಟಿನಲ್ಲಿ ಹಿಂದೆ ಬಿದ್ದಿಲ್ಲ. ಬಿಹಾರ, ತಮಿಳುನಾಡು ಹಾಗೂ ಪುಣೆಯಲ್ಲಿ ಈ ಬಗ್ಗೆ ತಯಾರಿ ನಡೆದಿದೆ. ಪುಣೆಯ ಔಷಧ ಹಾಗೂ ಬಣ್ಣಗಳನ್ನು ತಯಾರಿಸುವ ಮಾಕ್ಸೆನ್ ಕಂಪೆನಿ ಪ್ರಶಿಯನ್ ವೈಟ್ ತಯಾರಿಸಿದೆ. ಹಾಗೆಯೇ ಕೊಯಮತ್ತೂರಿನಲ್ಲಿರುವ ನಾಕ್ಸಿಯನ್ ಭಾರತೀಯ ತಂತ್ರಜ್ಞಾನವನ್ನೇ ಬಳಸಿಕೊಂಡು ಬ್ಯಾಟರಿಯನ್ನು ತಯಾರಿಸಲು ಹೊರಟಿದೆ. ಈ ವರ್ಷದ ಕೊನೆಗೆ ಉತ್ಪನ್ನಗಳನ್ನು ಮಾರಾಟಕ್ಕೆ ಇಳಿಸುವ ಯೋಜನೆ ಇವುಗಳಿಗೆ ಇದೆ. ಅತ್ತ ಮುಂಬೈ, ಚೆನ್ನೈನಲ್ಲಿರುವ ಐಐಟಿಗಳು ಹಾಗೂ ಬೆಂಗಳೂರಿನ ಜೆಎನ್‌ಸಿಎಸ್‌ಆರ್ ಸಂಸ್ಥೆಯ ವಿಜ್ಞಾನಿಗಳು, ಪರ್ಯಾಯ ವಸ್ತುಗಳನ್ನು ಬಳಸಿಕೊಂಡು ಸೋಡಿಯಂ ಬ್ಯಾಟರಿಗಳನ್ನು ತಯಾರಿಸುವ ನಿಟ್ಟಿನಲ್ಲಿ ಸಂಶೋಧನೆ ಮುಂದುವರಿಸಿದ್ದಾರೆ. ಜೆಎನ್‌ಸಿಎಸ್‌ಆರ್‌ನ ವಿಜ್ಞಾನಿಗಳು ಇತ್ತೀಚೆಗೆ ಕೇವಲ ಆರೇ ನಿಮಿಷದಲ್ಲಿ ಶೇ 80ರಷ್ಟು ರೀಚಾರ್ಜ್ ಆಗಬಲ್ಲ ಸೋಡಿಯಂ ಬ್ಯಾಟರಿಯ ಮಾದರಿಯನ್ನು ಬಿಡುಗಡೆ ಮಾಡಿದ್ದರು. ಈ ಬ್ಯಾಟರಿಯಲ್ಲಿ ರಂಜಕದ ಲವಣಗಳನ್ನು ಕಾರ್ಬನ್, ವೆನೆಡಿಯಂ, ಸೋಡಿಯಂ ಜೊತೆಗೆ ಬಳಸಲಾಗಿದೆ.

ಸೋಡಿಯಂ ಬ್ಯಾಟರಿಗಳು ಬಳಸುವ ವಸ್ತುಗಳು ಸುಲಭವಾಗಿ ದೊರೆಯುವುದರಿಂದ ಆಮದು ಮಾಡಲೇಬೇಕಾದ ಲಿಥಿಯಂನ ಅವಲಂಬನೆ ಕಡಿಮೆಯಾಗಬಹುದು. ಆದರೆ ಈ ವಸ್ತುಗಳು ಅಗ್ಗವೂ ಆದ್ದರಿಂದ ಬ್ಯಾಟರಿಗಳನ್ನು ಬಿಸಾಡಿದ ಮೇಲೆ ಅವನ್ನು ಮರುಬಳಸುವ ಸಾಧ್ಯತೆಗಳು ಕಡಿಮೆ ಎನ್ನುವ ಆತಂಕ ಇದೆ. ಹೀಗಾಗಿ, ಬಳಸಿ ಬಿಸಾಡುವ ಬ್ಯಾಟರಿಗಳ ಬದಲಿಗೆ, ಸೌರವಿದ್ಯುತ್ ಸ್ಥಾವರಗಳು, ಡೇಟಾ ಸೆಂಟರುಗಳಿಗೆ ಬೇಕಾದ ದೊಡ್ಡ, ದೊಡ್ಡ ಬ್ಯಾಟರಿಗಳಲ್ಲಿ ಈ ತಂತ್ರಜ್ಞಾನ ಉಪಯುಕ್ತ; ಉಳಿದಂತೆ ಎಲ್ಲವೂ ಬಳಕೆದಾರರ ಇಚ್ಛೆ!

Publication Date
22/07/2026

Presented by



# ಕೇಂದ್ರದ ಒಟ್ಟು ಸಾಲ ₹201 ಲಕ್ಷ ಕೋಟಿ

## ಸಾಲ ಮತ್ತು ಜಿಡಿಪಿ ನಡುವಿನ ಅನುಪಾತದಲ್ಲಿ ತುಸು ಇಳಿಕೆ

ನವದೆಹಲಿ (ಪಿಟಿಐ): ದೇಶದ ನಿವ್ವಳ ಸಾಲ ಮತ್ತು ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಅನುಪಾತವು 2025-26ನೇ ಹಣಕಾಸು ವರ್ಷದಲ್ಲಿ ಶೇ 58.2ಕ್ಕೆ ಇಳಿಕೆ ಆಗಿದೆ ಎಂದು ಕೇಂದ್ರ ಸರ್ಕಾರವು ಸಂಸತ್ತಿಗೆ ಮಂಗಳವಾರ ತಿಳಿಸಿದೆ.

ಹಿಂದಿನ ಹಣಕಾಸು ವರ್ಷದಲ್ಲಿ ಇದು ಶೇ 58.5ರಷ್ಟು ಇತ್ತು. 2025-26ಕ್ಕೆ ಸಂಬಂಧಿಸಿ ಈಗ ಕೇಂದ್ರವು ಸಂಸತ್ತಿಗೆ ನೀಡಿರುವುದು ತಾತ್ಕಾಲಿಕ ಅಂಕಿ-ಅಂಶವಾಗಿದೆ.

ಮಾರ್ಚ್ 31ರವರೆಗಿನ ಅಂಕಿ-ಅಂಶದ ಪ್ರಕಾರ ಕೇಂದ್ರ ಸರ್ಕಾರದ ಒಟ್ಟು ಸಾಲದ ಮೊತ್ತವು ₹201.17 ಲಕ್ಷ ಕೋಟಿ (ತಾತ್ಕಾಲಿಕ ಮಾಹಿತಿ) ಆಗಿದೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ರಾಜ್ಯಸಭೆಗೆ ಒದಗಿಸಿರುವ ಲಿಖಿತ ಉತ್ತರದಲ್ಲಿ ಹೇಳಿದ್ದಾರೆ.

ಕೋವಿಡ್ ಸಂದರ್ಭದಲ್ಲಿ, ಅಂದರೆ 2020-21ರಲ್ಲಿ ಸಾಲ ಮರುಪಾವತಿ ಮತ್ತು ರಾಜಸ್ವ ಸ್ವೀಕೃತಿ ನಡುವಿನ ಅನುಪಾತವು ಶೇ 41.6ರಷ್ಟು ಇತ್ತು. ಇದು 2025-26ರ ಹೊತ್ತಿಗೆ ಶೇ 37.6ಕ್ಕೆ ಇಳಿದಿದೆ ಎಂದು ಅವರು ಉತ್ತರದಲ್ಲಿ ತಿಳಿಸಿದ್ದಾರೆ.

2026-27ನೆಯ ಸಾಲಿನ ಬಜೆಟ್‌ನಲ್ಲಿ ₹17.15 ಲಕ್ಷ ಕೋಟಿ ಮೊತ್ತವನ್ನು ಬಂಡವಾಳ ವೆಚ್ಚಗಳಿಗೆ ಇರಿಸಲಾಗಿದೆ. ಈ ಬಜೆಟ್‌ನಲ್ಲಿ ಸಾಲದ ಮೊತ್ತವನ್ನು ₹16.96 ಲಕ್ಷ ಕೋಟಿ ಎಂದು ಉಲ್ಲೇಖಿಸಲಾಗಿದೆ. ಹೊಸದಾಗಿ ಸಾಲದ ರೂಪದಲ್ಲಿ ಪಡೆಯುವ ಅಷ್ಟೂ ಮೊತ್ತವನ್ನು ಆಸ್ತಿ ಸೃಷ್ಟಿಸಲು ವಿನಿಯೋಗಿಸಲಾಗುತ್ತಿದೆ ಎಂದು ಸಚಿವರು ವಿವರಿಸಿದ್ದಾರೆ.

ಕೇಂದ್ರ ಸರ್ಕಾರದ ಸಾಲದ ಹೊರೆಯು 2026-27ನೇ ಹಣಕಾಸು ವರ್ಷದಲ್ಲಿ ₹228.27 ಲಕ್ಷ ಕೋಟಿಗೆ ಹೆಚ್ಚಳ ಕಾಣುವ ಅಂದಾಜು ಇದೆ ಎಂದು ಪಕ್ಷೇತರ ಸದಸ್ಯ ದಿಲೀಪ್ ಕುಮಾರ್ ರೇ ಅವರ ಪ್ರಶ್ನೆಗೆ ಉತ್ತರವಾಗಿ ಸಚಿವ ಚೌಧರಿ ಹೇಳಿದ್ದಾರೆ.

**ಹೆಚ್ಚಿದ ಬಂಡವಾಳ ವೆಚ್ಚ:** ಇನ್ನೊಂದು ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ ಚೌಧರಿ ಅವರು, 2020-21ನೇ ಹಣಕಾಸು ವರ್ಷದಿಂದ 2025-26ನೇ ಹಣಕಾಸು ವರ್ಷದವರೆಗೆ ಕೇಂದ್ರವು ಒಟ್ಟು ₹44.03 ಲಕ್ಷ ಕೋಟಿ ಮೊತ್ತವನ್ನು ಬಂಡವಾಳ ವೆಚ್ಚದ ರೂಪದಲ್ಲಿ ವಿನಿಯೋಗಿಸಿದೆ ಎಂದು ತಿಳಿಸಿದ್ದಾರೆ.

ಬಂಡವಾಳ ವೆಚ್ಚ ಹೆಚ್ಚಳದ ಪರಿಣಾಮವಾಗಿ ರಸ್ತೆ, ರೈಲು ಮಾರ್ಗ, ಇಂಧನ ಸೇರಿದಂತೆ ವಿವಿಧ ಮೂಲಸೌಕರ್ಯ ಅಭಿವೃದ್ಧಿ ಚಟುವಟಿಕೆಗಳು ಜಾಸ್ತಿ ಆಗಿವೆ ಎಂದು ಹೇಳಿದ್ದಾರೆ.

### ದಶಕದಲ್ಲಿ ಮೂರು ಪಟ್ಟು ಹೆಚ್ಚಳ

2014-15ನೇ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರದ ಸಾಲದ ಮೊತ್ತವು ₹64.11 ಲಕ್ಷ ಕೋಟಿ ಆಗಿತ್ತು. ಈಗ ಅದು ₹201.17 ಲಕ್ಷ ಕೋಟಿ ಆಗಿದೆ ಅಂದರೆ 11 ವರ್ಷಗಳ ಅವಧಿಯಲ್ಲಿ ಸಾಲದ ಮೊತ್ತವು ₹137.06 ಲಕ್ಷ ಕೋಟಿಯಷ್ಟು ಜಾಸ್ತಿ ಆಗಿದೆ. ವಾರ್ಷಿಕ ಸಂಯುಕ್ತ ಬೆಳವಣಿಗೆ ದರದ (ಸಿಎಜಿಆರ್) ಲೆಕ್ಕದಲ್ಲಿ ಹೇಳುವುದಾದರೆ ಇದು ಶೇ 10.95ರಷ್ಟು ಆಗುತ್ತದೆ ಎಂದು ಸಚಿವ ಪಂಕಜ್ ಚೌಧರಿ ಅವರು ಸಂಸತ್ತಿಗೆ ನೀಡಿರುವ ಇನ್ನೊಂದು ಉತ್ತರದಲ್ಲಿ ಮಾಹಿತಿ ಒದಗಿಸಿದ್ದಾರೆ.

ಕಳೆದ ಹತ್ತು ಹಣಕಾಸು ವರ್ಷದಲ್ಲಿ ಸರ್ಕಾರ ಪಡೆದಿರುವ ಸಾಲದ ನಿವ್ವಳ ಮೊತ್ತವು ₹125.99 ಲಕ್ಷ ಕೋಟಿ ಆಗಿದೆ. ಈ ಮೊತ್ತದಲ್ಲಿ ₹60.21 ಲಕ್ಷ ಕೋಟಿಯನ್ನು (ಅಂದರೆ ಒಟ್ಟು ಸಾಲದಲ್ಲಿನ ಶೇ 48ರಷ್ಟನ್ನು) ಬಂಡವಾಳ ವೆಚ್ಚವಾಗಿ ವಿನಿಯೋಗ ಮಾಡಲಾಗಿದೆ ಎಂದು ಹೇಳಿದ್ದಾರೆ.

Publication Date
22/07/2026

Presented by

### ❖ ಅಮೆರಿಕದಿಂದ ಪ್ರತಿದಾಳಿ; ದ್ವೀಪರಾಷ್ಟ್ರ ಬಹರೇನ್‌ನಲ್ಲಿ ಮೊಳಗಿದ ಸೈರನ್: ತೈಲ ಹಡಗಿನ ಮೇಲೆ ಇರಾನ್ ದಾಳಿ

- ಅಮೆರಿಕ ಮತ್ತು ಇರಾನ್ ನಡುವಿನ ಸಂಘರ್ಷ ತೀವ್ರಗೊಂಡಿದ್ದು, ಹೊರ್ಮುಜ್ ಜಲಸಂಧಿಯಲ್ಲಿ ಮಂಗಳವಾರ ಬೆಳಿಗ್ಗೆ ತೈಲ ಸಾಗಣೆ ಹಡಗಿನ ಮೇಲೆ ಇರಾನ್ ದಾಳಿ ನಡೆಸಿದೆ. ಇದಕ್ಕೆ ಪ್ರತಿಯಾಗಿ ಅಮೆರಿಕ ಮತ್ತೊಂದು ಸುತ್ತಿನ ವೈಮಾನಿಕ ದಾಳಿ ನಡೆಸಿದೆ.
- ಇರಾನ್‌ನ ಸೇನಾ ನೆಲೆಗಳು, ಕ್ಷಿಪಣಿ ಮತ್ತು ಡ್ರೋನ್ ಉಡಾವಣಾ ಕೇಂದ್ರಗಳು, ವಾಯು ರಕ್ಷಣಾ ವ್ಯವಸ್ಥೆಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ ಎಂದು ಅಮೆರಿಕ ಸೇನೆ ಮಂಗಳವಾರ ತಿಳಿಸಿದೆ.
- ಇರಾನ್‌ನ ಫಾರ್ಸ್, ಹೊರ್ಮೊಜ್ಗಾನ್, ಇಲಾಮ್, ಕರ್ಮನ್ ಮತ್ತು ಸಿಸ್ತಾನ್, ಬಲೂಚಿಸ್ತಾನ್ ಪ್ರಾಂತ್ಯಗಳಲ್ಲಿ ಸ್ಫೋಟಗಳ ಶಬ್ದ ಕೇಳಿಬಂದಿರುವುದಾಗಿ ಇರಾನ್‌ನ ಸರ್ಕಾರಿ ಸುದ್ದಿಸಂಸ್ಥೆ ವರದಿ ಮಾಡಿದೆ.
- ಅಮೆರಿಕದ ಮಿತ್ರ ರಾಷ್ಟ್ರಗಳ ಮೇಲೆ ಇರಾನ್ ದಾಳಿ ನಡೆಸಿದೆ. ಜೋರ್ಡಾನ್ ಮೇಲೆ ಐದು ಡ್ರೋನ್‌ಗಳು ಮತ್ತು ಮೂರು ಕ್ಷಿಪಣಿಗಳನ್ನು ಹಾರಿಸಿದ್ದು, ಅವುಗಳನ್ನು ಅಲ್ಲಿನ ಸೇನೆಯು ಹೊಡೆದುರುಳಿಸಿದೆ.
- ದ್ವೀಪ ರಾಷ್ಟ್ರ ಬಹರೇನ್‌ನಲ್ಲಿ ಮಂಗಳವಾರ ಮಧ್ಯಾಹ್ನ ಕ್ಷಿಪಣಿ ದಾಳಿಯ ಎಚ್ಚರಿಕೆ ನೀಡುವ ಸೈರನ್‌ಗಳು ಮೊಳಗಿವೆ. ಅಲ್ಲೇ ಅಮೆರಿಕದ 5ನೇ ನೌಕಾಪಡೆಯ ನೆಲೆ ಇದ್ದು, ಅದನ್ನು ಗುರಿಯಾಗಿಸಿ ಇರಾನ್ ದಾಳಿ ನಡೆಸಿದೆ.
- ಸತತ 10 ದಿನಗಳಿಂದ ಅಮೆರಿಕ ವೈಮಾನಿಕ ದಾಳಿ ನಡೆಸುತ್ತಿದ್ದರೂ ಹೊರ್ಮುಜ್ ಜಲಸಂಧಿಯ ಮೇಲಿನ ತನ್ನ ಹಿಡಿತವನ್ನು ಸಡಿಲಗೊಳಿಸುವಂತೆ ಇರಾನ್ ಮೇಲೆ ಒತ್ತಡ ಹೇರಲು ಸಾಧ್ಯವಾಗಿಲ್ಲ.
- **<u>ಜಲಮಾರ್ಗ ನಿರ್ಬಂಧ:</u>** ಇರಾನ್ ಬೆಂಬಲಿತ ಯೆಮನ್‌ನ ಹುಥಿ ಬಂಡುಕೋರರು ಸೌದಿ ಅರೇಬಿಯಾ ವಿರುದ್ಧ ಸಮುದ್ರ ದಿಗ್ಬಂಧನ ವಿಧಿಸಿದ್ದಾರೆ.
- 'ಕಳೆದ ವಾರ ಸನಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ನಡೆದ ದಾಳಿಗೆ ಸೌದಿ ಅರೇಬಿಯಾ ಕಾರಣ' ಎಂದು ಆರೋಪಿಸಿರುವ ಹುಥಿಗಳು, ಕೆಂಪು ಸಮುದ್ರ ಮತ್ತು ಏಡನ್ ಕೊಲ್ಲಿ ನಡುವಿನ ಜಲಮಾರ್ಗವನ್ನು ನಿರ್ಬಂಧಿಸಿರುವುದಾಗಿ ತಿಳಿಸಿದ್ದಾರೆ. ಹೊರ್ಮುಜ್ ಜಲಸಂಧಿಯಂತೆಯೇ ಪ್ರಮುಖ ಸಮುದ್ರ ಮಾರ್ಗವಾಗಿರುವ 'ಬಾಬ್ ಎಲ್-ಮಂಡೇಬ್' ಅನ್ನು ಗುರಿಯಾಗಿಸಿ ದಾಳಿ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

- 'ಈ ಜಲಮಾರ್ಗವನ್ನು ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ. ಹುಥಿ ಬಂಡುಕೋರರ ಬೆದರಿಕೆಗಳನ್ನು ಧೈರ್ಯವಾಗಿ ಎದುರಿಸಲಾಗುವುದು' ಎಂದು ಸೌದಿ ಅರೇಬಿಯಾ ಸೇನಾ ವಕ್ತಾರರು ತಿಳಿಸಿದ್ದಾರೆ.
- ಜುಲೈ 7ರಂದು ಇರಾನ್ ಮೇಲಿನ ದಾಳಿಯನ್ನು ಪುನರಾರಂಭಿಸಿದಾಗಿನಿಂದ ಅಮೆರಿಕದ 100 ಯೋಧರು ಗಾಯಗೊಂಡಿದ್ದಾರೆ. ಅವರಲ್ಲಿ ಶೇ 96ರಷ್ಟು ಮಂದಿ ಕರ್ತವ್ಯಕ್ಕೆ ಮರಳಿದ್ದಾರೆ ಎಂದು ಅಮೆರಿಕದ ರಕ್ಷಣಾ ಇಲಾಖೆ ವಕ್ತಾರರು ತಿಳಿಸಿದ್ದಾರೆ.
- 'ಅಮೆರಿಕ ನಡೆಸಿದ ಇತ್ತೀಚಿನ ದಾಳಿಗಳಲ್ಲಿ 50 ಮಂದಿ ಮೃತಪಟ್ಟಿದ್ದು, 517 ಜನರು ಗಾಯಗೊಂಡಿದ್ದಾರೆ' ಎಂದು ಇರಾನ್ ಅಧಿಕಾರಿಗಳು ತಿಳಿಸಿದ್ದಾರೆ.

# ಕಾಮನ್‌ವೆಲ್ತ್ ಗೇಮ್ಸ್ ನಾಳೆಯಿಂದ

## ಹತ್ತು ವಿಭಾಗಗಳಲ್ಲಿ ಸ್ಪರ್ಧೆಗಳು

**• ಭಾರತದಿಂದ 135 ಅಥ್ಲೀಟ್‌ಗಳು ಭಾಗಿ**

ನವದೆಹಲಿ (ಪಿಟಿಐ): 'ಗ್ಲಾಸ್ಗೊ ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಭಾರತವು ಪದಕಗಳನ್ನು ಜಯಿಸುವ ಜೊತೆಗೆ ಅಹಮದಾಬಾದ್‌ನಲ್ಲಿ ನಡೆಯಲಿರುವ 2030ರ ಶತಾಬ್ದಿ ಆವೃತ್ತಿಯ ಆತಿಥ್ಯಕ್ಕೆ ಅನುಭವ ಪಡೆಯುವ ಉದ್ದೇಶ ಹೊಂದಿದೆ' ಎಂದು ಭಾರತದ 'ಷೆಫ್ ಡಿ ಮಿಷನ್' ರೋಹಿತ್ ರಾಜ್‌ಪಾಲ್ ಹೇಳಿದ್ದಾರೆ.

ಪ್ರತಿ ನಾಲ್ಕು ವರ್ಷಕ್ಕೊಮ್ಮೆ ನಡೆಯುವ ಈ ಕ್ರೀಡಾಕೂಟದ 23ನೇ ಆವೃತ್ತಿಯು ಇದೇ 23ರಿಂದ ಆಗಸ್ಟ್ 2ರವರೆಗೆ ನಡೆಯಲಿದೆ. ಈ ಬಾರಿಯ ಕ್ರೀಡಾಕೂಟದಲ್ಲಿ ಕೇವಲ 10 ವಿವಿಧ ಕ್ರೀಡೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಎಂಟು ಕ್ರೀಡಾ ವಿಭಾಗಗಳಲ್ಲಿ ಭಾರತ ಸ್ಪರ್ಧಿಸಲಿದೆ. 3x3 ಬ್ಯಾಸ್ಕೆಟ್‌ಬಾಲ್ ಮತ್ತು ನೆಟ್‌ಬಾಲ್ ಸ್ಪರ್ಧೆಯಿಂದ ಹೊರಗುಳಿದಿದೆ. ಭಾರತ ಒಟ್ಟು 135 ಅಥ್ಲೀಟ್‌ಗಳನ್ನು ಕಣಕ್ಕಿಳಿಸಲಿದೆ.

ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದಿದ್ದ 2022ರ ಆವೃತ್ತಿಯಲ್ಲಿ ಭಾರತ ತಂಡವು 61 ಪದಕಗಳೊಂದಿಗೆ (22 ಚಿನ್ನ, 16 ಬೆಳ್ಳಿ ಮತ್ತು 23 ಕಂಸ) ನಾಲ್ಕನೇ ಸ್ಥಾನ ಪಡೆದಿತ್ತು. ಅಲ್ಲಿ ಭಾರತ ಪದಕ ಗೆದ್ದಿದ್ದ ಒಂಬತ್ತು ಕ್ರೀಡೆಗಳನ್ನು ಈ ಬಾರಿ ಕೈಬಿಡಲಾಗಿದೆ.

ಉದ್ಘಾಟನಾ ಸಮಾರಂಭಕ್ಕೂ ಮುನ್ನ ಸಿದ್ಧತೆಗಳನ್ನು ಪರಿಶೀಲಿಸಿದ ನಂತರ ಗ್ಲ್ಯಾಸ್ಗೋದಿಂದ ಮಾತನಾಡಿದ ರಾಜ್‌ಪಾಲ್, 'ಮುಂದಿನ ಬಾರಿಯ ಕಾಮನ್‌ವೆಲ್ತ್ ಕ್ರೀಡಾಕೂಟವನ್ನು ಭಾರತದಲ್ಲಿ ಆಯೋಜಿಸುವಾಗ ನಾವು ಈಗಿನ ವ್ಯವಸ್ಥೆಗೆ ಸರಿಹೊಂದುವಂತೆ ಅಥವಾ ಇದಕ್ಕಿಂತಲೂ ಉತ್ತಮವಾಗಿ ನಿರ್ವಹಿಸಲು ಅನುಕೂಲವಾಗುವಂತೆ ಜ್ಞಾನ ವಿನಿಮಯ ಕಾರ್ಯಕ್ರಮಗಳು ನಡೆಯಲಿವೆ' ಎಂದು ಹೇಳಿದರು.

16 ವರ್ಷಗಳ ಹಿಂದೆ ನವದೆಹಲಿಯಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟವನ್ನು ಆಯೋಜಿಸಲಾಗಿತ್ತು. ಆ ಕೂಟದಲ್ಲಿ ಭಾರತ 101 ಪದಕಗಳನ್ನು (38 ಚಿನ್ನ, 27 ಬೆಳ್ಳಿ, 36 ಕಂಸ) ಗೆಲ್ಲುವ ಮೂಲಕ ತನ್ನ ಎರಡನೇ ಅತ್ಯುತ್ತಮ ಸಾಧನೆ ದಾಖಲಿಸಿತ್ತು.




ಕಾಮನ್‌ವೆಲ್ತ್ ಕ್ರೀಡಾಕೂಟ ನಡೆಯಲಿರುವ ಗ್ಲಾಸ್ಗೊದ ದಿ ಹೈಡ್ರೊ ಕ್ರೀಡಾಂಗಣದ ಬಾಹ್ಯ ನೋಟ ಪಿಟಿಐ ಚಿತ್ರ

commonwealth games GLASGOW 2026

### ಶಂಕರ್ ಮಹದೇವನ್, ರಶ್ಮಿಕಾ ಕಾರ್ಯಕ್ರಮ

ಗ್ಲಾಸ್ಗೊ (ಪಿಟಿಐ): ಗಾಯಕ ಶಂಕರ ಮಹದೇವನ್ ಮತ್ತು ಬಾಲಿವುಡ್ ತಾರೆ ರಶ್ಮಿಕಾ ಮಂದಣ್ಣ ಅವರು ಆಗಸ್ಟ್ 2ರಂದು ನಡೆಯುವ ಕಾಮನ್‌ವೆಲ್ತ್ ಕ್ರೀಡೆಗಳ ಸಮಾರೋಪ ಸಮಾರಂಭದಲ್ಲಿ ಭಾರತದ ಪರವಾಗಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಅದೇ ದಿನ 2030ರ ಕ್ರೀಡೆಗಳ ಆತಿಥ್ಯ ವಹಿಸಲಿರುವ ಭಾರತಕ್ಕೆ ಅಧಿಕೃತವಾಗಿ ಕಾಮನ್‌ವೆಲ್ತ್ ಕ್ರೀಡೆಗಳ ಧ್ವಜವನ್ನು ಹಸ್ತಾಂತರಿಸಲಾಗುವುದು. ಭಾರತವು ಅಹಮದಾಬಾದಿನಲ್ಲಿ ಆ ಬಾರಿಯ ಕ್ರೀಡೆಗಳನ್ನು ನಡೆಸಲಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಈ ಕಾರ್ಯಕ್ರಮದಲ್ಲಿ ಭಾಗಿಯಾಗುವ ನಿರೀಕ್ಷೆಯಿದೆ.

ಸಾಂಸ್ಕೃತಿಕ ಕಾರ್ಯಕ್ರಮ 20 ನಿಮಿಷ ನಡೆಯಲಿದ್ದು, ಸಂಗೀತ, ನೃತ್ಯ ಕಾರ್ಯಕ್ರಮದ ಮೂಲಕ ದೇಶದ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಬಿಂಬಿಸಲಿದೆ. ಇದು 2030ರ ಕ್ರೀಡೆಗಳಿಗೆ ಮುನ್ನುಡಿಯೂ ಆಗಲಿದೆ. 2010ರಲ್ಲಿ ಭಾರತ ಮೊದಲ ಬಾರಿ (ನವದೆಹಲಿಯಲ್ಲಿ) ಕಾಮನ್‌ವೆಲ್ತ್ ಕ್ರೀಡೆಗಳ ಆತಿಥ್ಯ ವಹಿಸಿತ್ತು.

### ತಲುಪದ ಬಾಕ್ಸರ್‌ಗಳ ಲಗೇಜ್

ಗ್ಲಾಸ್ಗೊ (ಪಿಟಿಐ): ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಭಾಗವಹಿಸಲು ಮಂಗಳವಾರ ಇಲ್ಲಿಗೆ ತಲುಪಿದ ಭಾರತ ತಂಡದ ಬಾಕ್ಸರ್‌ಗಳಿಗೆ ಸಮಸ್ಯೆ ಎದುರಾಗಿದೆ. ತಂಡದ ಅರ್ಧದಷ್ಟು ಬಾಕ್ಸಿಂಗ್ ಪಟುಗಳ ಲಗೇಜ್ ಬೆಲ್‌ಫಾಸ್ಟ್‌ನಲ್ಲೇ ಉಳಿದಿದ್ದವು.

22 ಸದಸ್ಯರ ತಂಡವು ಐರ್ಲೆಂಡ್‌ನ ಬೆಲ್‌ಫಾಸ್ಟ್‌ನಲ್ಲಿ ತರಬೇತಿ ಶಿಬಿರದಲ್ಲಿ ಭಾಗವಹಿಸಿದ ನಂತರ ವಿಮಾನದಲ್ಲಿ ಇಲ್ಲಿಗೆ ಬಂದಿಳಿದಿತ್ತು. ತಂಡ ಪಯಣಿಸಿದ ವಿಮಾನ ಸಣ್ಣಗಾತ್ರದ್ದಾಗಿತ್ತು. ಇದರಿಂದಾಗಿ ಸಾಕ್ಷಿ ಚೌಧರಿ, ವಿಶ್ವ ಚಾಂಪಿಯನ್ ಜಾಸ್ಮಿನ್ ಲಂಬೂರಿಯಾ, ಪರ್ವೀನ್ ಹೂಡಾ, ಜಾದುಮಣಿ ಸಿಂಗ್ ಕಪಿಲ್ ಪೊಖಾರಿಯಾ ಮತ್ತು ಪುರುಷರ ತಂಡದ ಹೆಡ್ ಕೋಚ್ ಸಿ.ಕುಟ್ಟಪ್ಪ ಅವರ ಲಗೇಜ್ ಬೆಲ್‌ಫಾಸ್ಟ್‌ನಲ್ಲೇ ಬಾಕಿಯಾದವು. ಇದರಲ್ಲಿ ಅವರು ಗುರುವಾರ ನಡೆಯಲಿರುವ ಉದ್ಘಾಟನಾ ಸಮಾರಂಭದಲ್ಲಿ ಧರಿಸಬೇಕಾದ ಸಾಂಪ್ರದಾಯಿಕ ದಿರಿಸು, ತರಬೇತಿ ಸಲಕರಣೆಗಳು ಸೇರಿವೆ.

ಲಗೇಜ್ ಬುಧವಾರ ಕೈಸೇರಬಹುದೆಂಬ ವಿಶ್ವಾಸದಲ್ಲಿ ಬಾಕ್ಸರ್‌ಗಳಿದ್ದಾರೆ.

Publication Date
22/07/2026

Presented by

## ❖ ಹ್ಯಾಂಗ್‌ಝುನಲ್ಲಿ ಇಂದಿನಿಂದ ವಿಶ್ವಕಪ್ ಶೂಟಿಂಗ್: ವಿಶ್ವಕಪ್: ಭಾರತದ ಶೂಟರ್‌ಗಳಿಗೆ ಅಗ್ನಿಪರೀಕ್ಷೆ

- ಚೀನಾದಲ್ಲಿ ಬುಧವಾರ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್ ಆರಂಭವಾಗಲಿದೆ. ಏಷ್ಯನ್ ಕ್ರೀಡಾಕೂಟಕ್ಕೆ ಸಜ್ಜಾಗುತ್ತಿರುವ ಭಾರತದ ಶೂಟರ್‌ಗಳಿಗೆ ತಮ್ಮ ಸಾಮರ್ಥ್ಯವನ್ನು ಒರೆಗೆ ಹಚ್ಚಲು ಇದು ಕೊನೆಯ ಅವಕಾಶವಾಗಲಿದೆ.
- ಶೂಟಿಂಗ್ ಕ್ಷೇತ್ರದಲ್ಲಿ ಪ್ರಾಬಲ್ಯ ಹೊಂದಿರುವ ಆತಿಥೇಯ ಚೀನಾ ವಿರುದ್ಧ ತನ್ನ ಶೂಟರ್‌ಗಳ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಿಕೊಳ್ಳಲು ಇದು ಭಾರತ ತಂಡಕ್ಕೆ ಉತ್ತಮ ವೇದಿಕೆಯಾಗಿದೆ. ಏಷ್ಯನ್ ಗೇಮ್ಸ್ ಸೆ.19ರಿಂದ ಅ.14ರವರೆಗೆ ಜಪಾನ್‌ನಲ್ಲಿ ನಡೆಯಲಿದೆ.
- ಸ್ಪೇನ್ ಗ್ರೆನೆಡಾದಲ್ಲಿ ನಡೆದ ಋತು ವಿನ ಆರಂಭಿಕ ಶೂಟಿಂಗ್ ವಿಶ್ವಕಪ್‌ನಲ್ಲಿ ಚೀನಾ ತಂಡವು ಎಂಟು ಚಿನ್ನದ ಪದಕಗಳನ್ನು ಗೆಲ್ಲುವ ಮೂಲಕ ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿತ್ತು.
- ಆ ವಿಶ್ವಕಪ್‌ನಲ್ಲಿ ಭಾರತವು ಪ್ರಬಲ ತಂಡವನ್ನು ಕಣಕ್ಕಿಳಿಸಿದ್ದರೂ ಕೇವಲ ಒಂದು ಚಿನ್ನದ ಪದಕದೊಂದಿಗೆ ಮರಳಿತ್ತು. ಅದಾಗ್ಯೂ, ಮ್ಯೂನಿಚ್‌ನಲ್ಲಿ ನಡೆದ ಋತು ನ ಎರಡನೇ ವಿಶ್ವಕಪ್ ನಲ್ಲಿ ಭಾರತ ಎರಡು ಚಿನ್ನ ಮತ್ತು ಎರಡು ಬೆಳ್ಳಿ ಪದಕ ಗೆದ್ದು ಆಶಾಭಾವನೆ ಮೂಡಿಸಿತ್ತು.

- ಏಷ್ಯನ್ ಗೇಮ್ಸ್ ಅಭಿಯಾನ ಆರಂಭಿಸುವ ಮೊದಲು ಸುರುಚಿ ಮತ್ತು ಇಶಾ ಅವರು ಚಿನ್ನದ ಪದಕವನ್ನು ಗೆಲ್ಲುವ ಗುರಿ ಹೊಂದಿದ್ದಾರೆ. ಒಲಿಂಪಿಕ್ ಅವಳಿ ಪದಕ ವಿಜೇತೆ ಮನು ಭಾಕರ್ ಅವರು 10 ಮೀ. ಏರ್ ಪಿಸ್ತೂಲ್ ಮತ್ತು 25 ಮೀ. ಏರ್ ಪಿಸ್ತೂಲ್ ಸ್ಪರ್ಧೆಗಳೆರಡರಲ್ಲೂ ಕಣಕ್ಕಿಳಿಯಲಿದ್ದಾರೆ.

# ಉದ್ದೇಶಪೂರ್ವಕ ನೋಬಾಲ್‌ಗೆ ಶಿಕ್ಷೆ

ಬೆಂಗಳೂರು (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು 2026–27ನೇ ಸಾಲಿಗೆ ದೇಶಿ ಕ್ರಿಕೆಟ್‌ನ ಆಟದ ನಿಯಮಗಳಲ್ಲಿ ಮಹತ್ವದ ಬದಲಾವಣೆಗಳನ್ನು ತರಲಿದೆ. ಕಾಲನ್ನು ಕ್ರೀಸ್‌ನ ಮುಂದಿಟ್ಟು ಉದ್ದೇಶಪೂರ್ವಕವಾಗಿ ನೋಬಾಲ್ ಮಾಡಿದಲ್ಲಿ ಅಥವಾ ಲ್ಯಾಂಡ್ ಆಗದೇ ನೇರವಾಗಿ ಬ್ಯಾಟರ್ ಕಡೆ ಚೆಂಡನ್ನು ಎಸೆದಲ್ಲಿ ಅಂತಹ ಬೌಲರ್ ಪಂದ್ಯದ ಉಳಿದ ಅವಧಿಗೆ ಅಮಾನತು ಆಗಲಿರುವುದು ಇದರಲ್ಲಿ ಪ್ರಮುಖವಾಗಿದೆ.

ಈಗಿನ ನಿಯಮಗಳ ಪ್ರಕಾರ, ಬೌಲರ್ ಇಂಥ ತಪ್ಪು ಮಾಡಿದ್ದಲ್ಲಿ, ಆ ನಿರ್ದಿಷ್ಟ ಇನಿಂಗ್ಸ್‌ನಲ್ಲಿ ಮಾತ್ರ ಬೌಲಿಂಗ್ ಮಾಡುವಂತಿರಲಿಲ್ಲ.

ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಇತ್ತೀಚೆಗೆ ಅನುಮೋದಿಸಿದ ನಿಯಮಗಳ ಬದಲಾವಣೆಗಳ ಸುತ್ತೋಲೆಯನ್ನು ಬಿಸಿಸಿಐ ಎಲ್ಲ ರಾಜ್ಯ ಸಂಸ್ಥೆಗಳಿಗೆ ಕಳುಹಿಸಿದೆ.

'ಉದ್ದೇಶಪೂರ್ವಕಾಗಿ ಕಾಲನ್ನು ಕ್ರೀಸ್ ಮುಂದಿಟ್ಟು ನೋ ಬಾಲ್ ಎಸೆದಲ್ಲಿ ಅಂಥ ಬೌಲರ್ ಇಡೀ ಪಂದ್ಯಕ್ಕೆ ಅಮಾನತು ಆಗುತ್ತಾರೆ. ಆದರೆ ಬದಲಾಗಿರುವ ಈ (41.8) ನಿಯಮದ ಬಗ್ಗೆ ಆನ್‌ಫೀಲ್ಡ್ ಅಂಪೈರ್‌ಗಳು ನಿರ್ಧಾರ ಕೈಗೊಳ್ಳುತ್ತಾರೆ' ಎಂದು ಪಿಟಿಐಗೆ ಲಭ್ಯವಾಗಿರುವ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಇನ್ನೊಂದು ಪ್ರಮುಖ ಬದಲಾವಣೆಯು ದಿನದಾಟದ ಅಂತ್ಯಕ್ಕೆ ಸಂಬಂಧಿಸಿದೆ. ಇದರ ಪ್ರಕಾರ ಕೊನೆಯ ಓವರಿನಲ್ಲಿ ವಿಕೆಟ್ ಬಿದ್ದರೂ ದಿನದಾಟವನ್ನು ಅಲ್ಲಿಗೇ ಮುಕ್ತಾಯ ಗೊಳಿಸುವಂತಿಲ್ಲ. ಬೌಲರ್ ಆ ಓವರ್ ಪೂರ್ಣಗೊಳಿ ಸಬೇಕಾಗುತ್ತದೆ. ಹಾಲಿ ಇರುವ ನಿಯಮದ ಪ್ರಕಾರ ಕೊನೆಯ ಓವರಿನ ಮಧ್ಯದಲ್ಲಿ ವಿಕೆಟ್ ಬಿದ್ದರೆ, ಆ ಕ್ಷಣಕ್ಕೆ ದಿನದಾಟ ಮುಕ್ತಾಯಗೊಳಿಸಲಾಗುತಿತ್ತು.

'ಈಗಿನ ನಿಯಮದಿಂದ ಹೊಸ ಬ್ಯಾಟರ್‌ನನ್ನು ಕೊನೆಯ ಓವರಿನ ಉಳಿದ ಕೆಲವು ಎಸೆತಗಳಲ್ಲಿ ಔಟ್ ಮಾಡುವ ಅವಕಾಶ ತಪ್ಪುವ' ಕಾರಣ 12.5.2 ನಿಯಮದಲ್ಲಿ ಮಾರ್ಪಾಡು ಮಾಡುವ ಅಗತ್ಯವನ್ನು ಎಂಸಿಸಿ ಮತ್ತು ಆ ಮೂಲಕ ಬಿಸಿಸಿಐ ಮನಗಂಡಿದೆ.

ಇದೇ ರೀತಿ ತಂಡಗಳಿಗೆ ಪಂದ್ಯದ ಕೊನೆಯ ಇನಿಂಗ್ಸ್ ಡಿಕ್ಲೇರ್ ಮಾಡುವ ಅವಕಾಶಕ್ಕೆ ಅನುಮತಿಯಿರುವುದಿಲ್ಲ. ಈಗಿನ ವ್ಯವಸ್ಥೆಯು 'ಅಸಹಜ ಫಲಿತಾಂಶಕ್ಕೆ' ದಾರಿಯಾಗಬಹುದು ಮತ್ತು ಆಟದ ಹಿತದೃಷ್ಟಿಯಿಂದ ಸೂಕ್ತವಾಗದು ಎಂದು ಎಂಸಿಸಿ ಅನಿಸಿಕೆ ವ್ಯಕ್ತಪಡಿಸಿದೆ.

## ಕ್ರೀಡಾಂಗಣ ಪ್ರವೇಶಕ್ಕೆ ಕೋಚ್‌ಗೆ ಅವಕಾಶ

ದೇಶಿ ಏಕದಿನ ಪಂದ್ಯದಲ್ಲಿ ಪಾನೀಯ (ಡ್ರಿಂಕ್ಸ್ ಬ್ರೇಕ್) ವಿರಾಮದ ವೇಳೆ ತಂಡದ ಹೆಡ್ ಕೋಚ್‌ಗೆ ಕ್ರೀಡಾಂಗಣ ಪ್ರವೇಶಿಸಲು ಅವಕಾಶ ನೀಡಲಾಗುವುದು. ಐಸಿಸಿಯ ಅಂತರರಾಷ್ಟ್ರೀಯ ಏಕದಿನ ಪಂದ್ಯದಲ್ಲಿ ಈಗಾಗಲೇ ಇಂಥ ನಿಯಮ ಬದಲಾವಣೆಗೆ ಉದ್ದೇಶಿಸಿದೆ.

ಇನ್ನೊಂದು ಬದಲಾವಣೆಯ ಪ್ರಕಾರ, ಬೌಲರ್ ಚೆಂಡೆಸೆಯುವಾಗ ಮಾತ್ರ ವಿಕೆಟ್ ಕೀಪರ್ ಗ್ಲೌಸ್‌ಗಳು ಸ್ಟಂಪ್‌ಗಳ ಹಿಂದೆ ಇರಬೇಕಾಗುತ್ತದೆ. ಈ ಮೊದಲು ಬೌಲರ್ ರನ್‌ಅಪ್ ಆರಂಭಿಸುವಾಗಲೇ ಅವರ ಗ್ಲೌಸ್‌ಗಳು ಸ್ಟಂಪ್ಸ್ ಹಿಂದೆ ಇರಬೇಕಿತ್ತು.

ಈ ನಿಯಮ ಬದಲಾವಣೆಯ ಬಗ್ಗೆ ಅಂಪೈರ್‌ಗಳಿಗೆ ಅರಿವು ಮೂಡಿಸಲಾಗುವುದು. ದೇಶಿ ಕ್ರಿಕೆಟ್ ಆರಂಭಕ್ಕೆ ಇನ್ನೂ ಒಂದು ತಿಂಗಳು ಇರುವುದರಿಂದ ನಿಯಮ ಜಾರಿಗೆ ಸಮಸ್ಯೆಯಾಗದು ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದರು.

Publication Date
22/07/2026

Presented by ಪ್ರಜಾವಾಣಿ




ಕಾರವಾರದ ಕದಂಬ ನೌಕಾನೆಲೆಯಲ್ಲಿ ಭಾರತೀಯ ನೌಕಾಪಡೆಗೆ 'ಐಎನ್‌ಎಸ್ ಮಾಲ್ವಣ್' ಸೇರ್ಪಡೆಗೊಳಿಸಿದ ಅಂಗವಾಗಿ ನೌಕೆ ಮೇಲೆ ರಾಷ್ಟ್ರಧ್ವಜಾರೋಹಣ ಮಾಡಲಾಯಿತು

# ನೌಕಾಪಡೆಗೆ 'ಮಾಲ್ವಣ್' ಸೇರ್ಪಡೆ

ಪ್ರಜಾವಾಣಿ ವಾರ್ತೆ

**ಕಾರವಾರ:** ಜಲಾಂತರ್ಗಾಮಿಗಳನ್ನು ಗುರುತಿಸಿ, ಹೊಡೆದುರುಳಿಸಬಲ್ಲ ಸಾಮರ್ಥ್ಯದ ಮಾಹೆ ಶ್ರೇಣಿಯ ಎರಡನೇ ಯುದ್ಧನೌಕೆ 'ಐಎನ್‌ಎಸ್ ಮಾಲ್ವಣ್' ಬುಧವಾರ ಇಲ್ಲಿನ ಕದಂಬ ನೌಕಾನೆಲೆಯಲ್ಲಿ ಭಾರತೀಯ ನೌಕಾಸೇನೆಗೆ ಸೇರ್ಪಡೆಗೊಂಡಿತು. ನೌಕಾನೆಲೆಯ ಹಡಗುಕಟ್ಟೆಯಲ್ಲಿ ನಡೆದ ಸಮಾರಂಭದಲ್ಲಿ ಯುದ್ಧನೌಕೆಯ ಮೇಲೆ ಧ್ವಜಾರೋಹಣ ನೆರವೇರಿಸಿ, ಈ ಪ್ರಕ್ರಿಯೆ ಪೂರ್ಣಗೊಳಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಭಾರತೀಯ ವಾಯುಪಡೆಯ ಮುಖ್ಯಸ್ಥ ಎ.ಪಿ.ಸಿಂಗ್ ಮಾತನಾಡಿ, 'ಐಎನ್‌ಎಸ್ ಮಾಲ್ವಣ್ ಸೇರ್ಪಡೆಯು ದೇಶದ ಕರಾವಳಿ ರಕ್ಷಣೆಯನ್ನು ಇನ್ನಷ್ಟು ಬಲಪಡಿಸಲಿದೆ. ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ಸಶಸ್ತ್ರ ಪಡೆಗಳ ನಡುವಿನ ಸಮನ್ವಯವನ್ನು ಇನ್ನಷ್ಟು ಬಲಗೊಳಿಸಲಿದೆ' ಎಂದರು.


'ನೌಕಾಪಡೆಯು ಸಮುದ್ರ ಮಾರ್ಗ ರಕ್ಷಣೆಯನ್ನು ಪರಿಣಾಮಕಾರಿಯಾಗಿ ಮಾಡುತ್ತಿರುವುದರಿಂದ ವಿದೇಶಗಳೊಂದಿಗೆ ವಾಣಿಜ್ಯ ವಹಿವಾಟು ವೃದ್ಧಿಸಿದೆ. ಭವಿಷ್ಯದಲ್ಲಿ ಯುದ್ಧ ನಡೆದರೆ ಒಂದು ಪಡೆಯ ನಿರ್ದಿಷ್ಟ ಹೋರಾಟ ಆಗದು. ಎಲ್ಲ ಪಡೆಗಳು ಒಟ್ಟಾಗಿ ಹೋರಾಡಬೇಕು. ಬಲಿಷ್ಠ ದೇಶ ನಿರ್ಮಾಣಕ್ಕೆ ಪರಸ್ಪರ ಸಮನ್ವಯ ಮುಖ್ಯ' ಎಂದು ತಿಳಿಸಿದರು.

ಪಶ್ಚಿಮ ನೌಕಾ ಪಡೆಯ ಮುಖ್ಯಸ್ಥ ಸಂಜಯ್ ವಾತ್ಸಾಯನ್ ಮಾತನಾಡಿ, 'ಆತ್ಮನಿರ್ಭರ ಭಾರತ ಯೋಜನೆಯಡಿ ನಿರ್ಮಾಣಗೊಂಡ ನೌಕೆಯು ಇದೇ ವರ್ಷ ಭಾರತೀಯ ನೌಕಾಪಡೆ ಸಿದ್ಧಪಡಿಸಿ, ಲೋಕಾರ್ಪಣೆ ಆದ 7ನೇ ನೌಕೆ ಆಗಿದೆ. ಇನ್ನೂ 12 ಯುದ್ಧನೌಕೆಗಳು ನೌಕಾಪಡೆಗೆ ಸೇರ್ಪಡೆ ಆಗುವ ಹಂತದಲ್ಲಿವೆ' ಎಂದು ಹೇಳಿದರು.

Publication Date
23/07/2026

Presented by ಪ್ರಜಾವಾಣಿ

## ❖ 'ಸುಪ್ರೀಂ'ನಲ್ಲಿ ಇತ್ಯರ್ಥವಾಗದೆ ಯೋಜನೆಗೆ ಅನುಮತಿ ಇಲ್ಲ: ಕೇಂದ್ರ ಸರ್ಕಾರ: ಮಹದಾಯಿ: ರಾಜ್ಯಕ್ಕೆ ಭಾರಿ ಹಿನ್ನಡೆ



# ಕಾವೇರಿ: ರಾಜ್ಯ ಮತ್ತೆ ನಿರಾಳ

ಕಾವೇರಿ ಜಲಾನಯನ ಪ್ರದೇಶದಲ್ಲಿ ಬರದ ಆತಂಕ ವ್ಯಕ್ತಪಡಿಸಿದ ಕಾವೇರಿ ನಿರ್ವಹಣಾ ಪ್ರಾಧಿಕಾರ, ತಮಿಳುನಾಡಿಗೆ ಕಾವೇರಿ ನೀರು ಹರಿಸುವಂತೆ ಕರ್ನಾಟಕ ರಾಜ್ಯಕ್ಕೆ ನಿರ್ದೇಶನ ನೀಡಿಲ್ಲ.

ಪ್ರಾಧಿಕಾರದ ಅಧ್ಯಕ್ಷ ಎಸ್.ಕೆ.ಹಲ್ದಾರ್ ಅಧ್ಯಕ್ಷತೆಯಲ್ಲಿ ಬುಧವಾರ ಇಲ್ಲಿ ನಡೆದ ಪ್ರಾಧಿಕಾರದ 53ನೇ ಸಭೆಯಲ್ಲಿ ಕಾವೇರಿ ಜಲಾನಯನ ಪ್ರದೇಶದ ಪರಿಸ್ಥಿತಿ ಬಗ್ಗೆ ಅವಲೋಕಿಸಲಾಯಿತು. ಈ ವಾರದ ಅಂತ್ಯದಲ್ಲಿ ಉತ್ತಮ ಮಳೆಯಾಗುವ ನಿರೀಕ್ಷೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಪ್ರಾಧಿಕಾರವು ಒಂದು ವಾರ ಕಾದು ನೋಡಿ ತೀರ್ಮಾನ ತೆಗೆದುಕೊಳ್ಳುವುದಾಗಿ ತಿಳಿಸಿತು. ಜಲಾಶಯಗಳಲ್ಲಿ ಲಭ್ಯ ಇರುವ ನೀರನ್ನು ಕುಡಿಯುವ ಉದ್ದೇಶಕ್ಕೆ ಮಾತ್ರ ಬಳಸಬೇಕೆಂದು ಕರ್ನಾಟಕ ಹಾಗೂ ತಮಿಳುನಾಡಿಗೆ ನಿರ್ದೇಶನ ನೀಡಿತು. ಇದೇ 28ರಂದು ಕಾವೇರಿ ನೀರು ನಿಯಂತ್ರಣ ಸಮಿತಿಯ ಸಭೆ ನಡೆಯಲಿದೆ.

ತಮಿಳುನಾಡು ಜಲಸಂಪನ್ಮೂಲ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಜೂನ್ ಹಾಗೂ ಜುಲೈ ತಿಂಗಳಲ್ಲಿ ತಮಿಳುನಾಡಿಗೆ ಕರ್ನಾಟಕವು 28 ಟಿಎಂಸಿ ನೀರು ಹರಿಸಬೇಕಿತ್ತು. ಆದರೆ, ಈವರೆಗೆ ಕೇವಲ 3.4 ಟಿಎಂಸಿ ಅಡಿ ನೀರು ಹರಿಸಿದೆ. ಕರ್ನಾಟಕದ ನಾಲ್ಕು ಜಲಾಶಯಗಳಲ್ಲಿ 48 ಟಿಎಂಸಿ ನೀರಿದೆ. ಜೂನ್‌ನಿಂದ ಇಲ್ಲಿಯ ವರೆಗೆ ಈ ಜಲಾಶಯಗಳಿಗೆ 31 ಟಿಎಂಸಿ ನೀರು ಹರಿದು ಬಂದಿದೆ. ಇನ್ನೊಂದೆಡೆ, ಮೆಟ್ಟೂರು ಜಲಾಶಯದಲ್ಲಿ ಕೇವಲ 36 ಟಿಎಂಸಿ ಅಡಿ ನೀರಿದೆ. ಒಳಹರಿವು 1003 ಕ್ಯುಸೆಕ್ ಮಾತ್ರ. ಹೀಗಾಗಿ, ಸುಪ್ರೀಂ ಕೋರ್ಟ್ ನಿರ್ದೇಶನದ ಪ್ರಕಾರ ನೀರು ಹರಿಸಲು ಕರ್ನಾಟಕಕ್ಕೆ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ಸರ್ಕಾರದ ಪ್ರತಿನಿಧಿ, 'ಮಳೆ ಕೊರತೆಯಿಂದಾಗಿ ಜಲಾಶಯಗಳಿಗೆ ಕನಿಷ್ಠ ಪ್ರಮಾಣದ ನೀರು ಹರಿದುಬಂದಿದೆ. ಬೆಂಗಳೂರು ಸೇರಿದಂತೆ ನಗರ ಹಾಗೂ ಪಟ್ಟಣಗಳಿಗೆ ಕುಡಿಯುವ ನೀರು ಒದಗಿಸುವುದೇ ಕಷ್ಟಕರವಾಗಿದೆ' ಎಂದು ಹೇಳಿದರು.

- ಮಹದಾಯಿ ಯೋಜನೆಗೆ ಅನುಮತಿ ಸಿಗುವ ನಿರೀಕ್ಷೆಯಲ್ಲಿ ಕಾತರದಿಂದ ಕಾಯುತ್ತಿದ್ದ ಕರ್ನಾಟಕ ಸರ್ಕಾರಕ್ಕೆ ಭಾರಿ ಹಿನ್ನಡೆಯಾಗಿದೆ. ಸುಪ್ರೀಂ ಕೋರ್ಟ್‌ನಲ್ಲಿರುವ ಪ್ರಕರಣ ಇತ್ಯರ್ಥವಾದ ಬಳಿಕವಷ್ಟೇ ಯೋಜನೆಗೆ ಅನುಮತಿ ನೀಡುವುದಾಗಿ ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.
- ಜುಲೈ 13ರಂದು ಕರ್ನಾಟಕ ನೀರಾವರಿ ನಿಗಮಕ್ಕೆ ಉತ್ತರ ನೀಡಿರುವ ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯ, 'ಯೋಜನೆಯನ್ನು ಆಕ್ಷೇಪಿಸಿ ಕೇರಳದ ವನ್ಯಜೀವಿ ವಾರ್ಡನ್ ಅವರು ಕರ್ನಾಟಕ ಸರ್ಕಾರಕ್ಕೆ 2023ರ ಮಾರ್ಚ್‌ನಲ್ಲಿ ನೋಟಿಸ್ ನೀಡಿದ್ದರು. ಈ ನೋಟಿಸ್ ಅನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರವು ಅದೇ ವರ್ಷ ಅಕ್ಟೋಬರ್‌ನಲ್ಲಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಈ ಪ್ರಕರಣ ವಿಚಾರಣಾ ಹಂತದಲ್ಲಿದೆ. ಎರಡು ರಾಜ್ಯಗಳ ನಡುವಿನ ವಿವಾದ ಇತ್ಯರ್ಥಗೊಳ್ಳಬೇಕಿದೆ. ಇಂತಹ ಸನ್ನಿವೇಶದಲ್ಲಿ ಯೋಜನೆ ಬಗ್ಗೆ ಸಚಿವಾಲಯ ತೀರ್ಮಾನ ತೆಗೆದುಕೊಂಡರೆ ನ್ಯಾಯಿಕ ಮಧ್ಯಪ್ರವೇಶ (ಸಬ್‌ಜುಡೀಸ್) ಆಗುತ್ತದೆ. ಹೀಗಾಗಿ, ಅರಣ್ಯ ತೀರುವಳಿಯ ಪ್ರಸ್ತಾವವನ್ನು ವಾಪಸ್ ಕಳುಹಿಸಲಾಗಿದೆ. ಸುಪ್ರೀಂ ಕೋರ್ಟ್ ನಿರ್ದೇಶನದ ಆಧಾರದಲ್ಲಿ ಪ್ರಸ್ತಾವದ ಮರುಪರಿಶೀಲನೆ ಮಾಡಲಾಗುವುದು' ಎಂದು ತಿಳಿಸಿದೆ.
- ಬಂಡೂರಾ ನಾಲಾ ತಿರುವು ಯೋಜನೆಗೆ ಪೈಪ್‌ಲೈನ್, ಪಂಪ್‌ಹೌಸ್, ವಿದ್ಯುತ್ ಮಾರ್ಗ ನಿರ್ಮಾಣಕ್ಕಾಗಿ ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ನೆರಸೆ, ಮಂತುರ್ಗ ಹಾಗೂ ಬಚೋಲಿ ಗ್ರಾಮಗಳ 71 ಎಕರೆ ಅರಣ್ಯ ಬಳಕೆಗೆ ಅನುಮೋದನೆ ಕೋರಿ ಕರ್ನಾಟಕ ನೀರಾವರಿ ನಿಗಮವು ಕೇಂದ್ರಕ್ಕೆ ಮೂರು ವರ್ಷಗಳ ಪ್ರಸ್ತಾವ ಸಲ್ಲಿಸಿತ್ತು. 2025ರ ಡಿಸೆಂಬರ್ 12ರಂದು ಸಭೆ ನಡೆಸಿದ್ದ ಪ್ರಾದೇಶಿಕ ಉನ್ನತಾಧಿಕಾರ ಸಮಿತಿಯು ರಾಜ್ಯ ಸರ್ಕಾರದಿಂದ ನಾಲ್ಕು ಸ್ಪಷ್ಟೀಕರಣಗಳನ್ನು ಕೇಳಿತ್ತು.
- 'ಮಹದಾಯಿ ಯೋಜನೆಗೆ ಆಕ್ಷೇಪ ವ್ಯಕ್ತಪಡಿಸಿ ಸುಪ್ರೀಂ ಕೋರ್ಟ್‌ನಲ್ಲಿ ಹಲವು ಅರ್ಜಿಗಳು ಸಲ್ಲಿಕೆಯಾಗಿವೆ. ಕರ್ನಾಟಕ ಸರ್ಕಾರ ಸಲ್ಲಿಸಿದ ಇತ್ತೀಚಿನ ವಿಶೇಷ ಮೇಲ್ಮನವಿ ಅರ್ಜಿಯ ವಿವರ ಸೇರಿದಂತೆ ಎಲ್ಲ ಅರ್ಜಿಗಳ ಸ್ಥಿತಿಗತಿಯ ವಿವರಗಳನ್ನು ಸಲ್ಲಿಸಬೇಕು' ಎಂದು ಸಮಿತಿ ತಾಕೀತು ಮಾಡಿತ್ತು. ನಾಲ್ಕೂವರೆ ತಿಂಗಳು ಕಳೆದರೂ ರಾಜ್ಯ ಸರ್ಕಾರ ಇದಕ್ಕೆ ಉತ್ತರ ನೀಡಿರಲಿಲ್ಲ.
- ಆ ಬಳಿಕ ಸಚಿವಾಲಯವು ಪ್ರಸ್ತಾವನ್ನು ಡಿ-ಲಿಸ್ಟ್ (ಪಟ್ಟಿಯಿಂದ ತೆಗೆದು ಹಾಕು) ಮಾಡಿತ್ತು. ರಾಜ್ಯದ ನಡೆಗೆ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಮೇ ತಿಂಗಳಲ್ಲಿ ರಾಜ್ಯ ಸರ್ಕಾರ ಉತ್ತರ ನೀಡಿತ್ತು.

- 'ಈ ಯೋಜನೆಗೆ ಸುಪ್ರೀಂ ಕೋರ್ಟ್ ತಡೆ ನೀಡಿಲ್ಲ. ಯೋಜನೆ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಕೇಂದ್ರದ ಅಧಿಕಾರಿಗಳು ಸ್ವತಂತ್ರರು. ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಿಂದ ಅಗತ್ಯ ಅನುಮೋದನೆಗಳನ್ನು ಪಡೆದ ಬಳಿಕ ರಾಜ್ಯ ಸರ್ಕಾರವು ಯೋಜನೆಯ ಅನುಷ್ಠಾನ ಮಾಡಲು ಅವಕಾಶ ಇದೆ. ಆದರೆ, ಗೋವಾ ಪಿಸಿಸಿಎಫ್ (ವನ್ಯಜೀವಿ) 2023ರಲ್ಲಿ ನೋಟಿಸ್ ನೀಡಿದ್ದಾರೆ. ಕರ್ನಾಟಕದ ಗಡಿಯೊಳಗೆ ಈ ಯೋಜನೆ ಅನುಷ್ಠಾನವಾಗುತ್ತಿರುವುದರಿಂದ ನೋಟಿಸ್ ನೀಡುವ ಅಧಿಕಾರ ಅವರಿಗಿಲ್ಲ' ಎಂದು ರಾಜ್ಯ ಸಮಜಾಯಿಷಿ ನೀಡಿತ್ತು. ಈ ವಾದವನ್ನು ಅರಣ್ಯ ಸಚಿವಾಲಯ ಒಪ್ಪಿಲ್ಲ.

## ❖ ಮರುಬಳಕೆ ಮಾಡದಂತೆ ಆಹಾರ ಸುರಕ್ಷತಾ ಇಲಾಖೆಯಿಂದ ಜಾಗೃತಿ: 45.87 ಲಕ್ಷ ಲೀಟರ್ ಬಳಸಿದ ಅಡುಗೆ ಎಣ್ಣೆ ಸಂಗ್ರಹ'

- ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳಲ್ಲಿ ಉಪಯೋಗಿಸಿದ ಅಡುಗೆ ಎಣ್ಣೆಯನ್ನು ಮರುಬಳಕೆ ಮಾಡುವುದನ್ನು ತಡೆಯಲು ಮುಂದಾಗಿರುವ ಆಹಾರ ಸುರಕ್ಷತಾ ಇಲಾಖೆಯು, ಎರಡು ವರ್ಷಗಳಲ್ಲಿ ಈ ಮಾದರಿಯ 45.87 ಲಕ್ಷ ಲೀಟರ್ ಎಣ್ಣೆಯನ್ನು ಸಂಗ್ರಹಿಸಿದೆ.
- ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಆಯುಕ್ತ ಕೆ. ಶ್ರೀನಿವಾಸ ಅವರು ಈ ವಿಷಯ ತಿಳಿಸಿದರು. ಇಲಾಖೆಯು ನಗರದಲ್ಲಿ ಹಮ್ಮಿಕೊಂಡಿದ್ದ 'ಟ್ರಾನ್ಸ್ ಫ್ಯಾಟ್' ಮುಕ್ತ (ಕೃತಕ ಕೊಬ್ಬಿನಾಂಶ) ಕರ್ನಾಟಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 2024ರಿಂದ 2026ರ ನಡುವೆ ಇಷ್ಟು ಬೃಹತ್ ಪ್ರಮಾಣದ ಎಣ್ಣೆಯನ್ನು ಸಂಗ್ರಹಿಸಲಾಗಿದೆ ಎಂದರು.
- 'ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳಲ್ಲಿ ಬಳಸಿದ ಅಡುಗೆ ಎಣ್ಣೆಯನ್ನು ಆಹಾರದಲ್ಲಿ ಮರುಬಳಕೆ ಮಾಡುವುದನ್ನು ತಡೆಯಲಾಗುತ್ತಿದೆ. ಆ ಎಣ್ಣೆಯನ್ನು ಜೈವಿಕ ಇಂಧನವಾಗಿ ಪರಿವರ್ತಿಸುವ ಉದ್ದೇಶದಿಂದ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಕಾರ್ಯಕ್ರಮ ರೂಪಿಸಿದೆ. ಬಳಕೆ ಮಾಡಿದ ಅಡುಗೆ ಎಣ್ಣೆಯನ್ನು ಪುನರ್ ಬಳಕೆ ಮಾಡುತ್ತಿರುವುದು ಕಂಡುಬಂದಲ್ಲಿ ದಂಡ ಸೇರಿದಂತೆ ವಿವಿಧ ಕ್ರಮಗಳನ್ನು ಕೈಗೊಳ್ಳಲಾಗಿದೆ. 2024-26ರ ಅವಧಿ ಯಲ್ಲಿ ₹28.91 ಲಕ್ಷ ದಂಡವನ್ನು ಆಹಾರ ಹಾಗೂ ಕೈಗಾರಿಕೋದ್ಯಮಿಗಳಿಗೆ ವಿಧಿಸಲಾಗಿದೆ' ಎಂದು ಹೇಳಿದರು.
- 'ಕೈಗಾರಿಕೆಯಲ್ಲಿ ಉತ್ಪಾದನೆ ಯಾಗುವ ಟ್ರಾನ್ಸ್ ಫ್ಯಾಟ್ ಗಳು ಸಾರ್ವಜನಿಕ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುವುದಲ್ಲದೆ, ಅಪಾಯಕಾರಿ ಅಂಶಗಳನ್ನು ಒಳಗೊಂಡಿ ರುತ್ತವೆ. ಹೃದಯ ಮತ್ತು ರಕ್ತನಾಳಗಳ ಕಾಯಿಲೆಗಳು, ಸ್ಥೂಲಕಾಯ, ಚಯಾಪಚಯ ಸಂಬಂಧಿತ ಅಸ್ವಸ್ಥತೆ ಗಳು ಹಾಗೂ ಸಂತಾನೋತ್ಪತ್ತಿ ಆರೋಗ್ಯದ ಮೇಲೆ ದುಷ್ಪರಿಣಾಮಗಳನ್ನು ಉಂಟುಮಾಡುತ್ತವೆ. ಜಾಗತಿಕ ಮಟ್ಟದಲ್ಲಿ ಪ್ರತಿವರ್ಷ ಸುಮಾರು 2.78 ಲಕ್ಷಕ್ಕೂ ಹೆಚ್ಚು ಸಾವುಗಳು ಕೈಗಾರಿಕೆ ಗಳಲ್ಲಿ ಉತ್ಪಾದಿಸಲ್ಪಡುವ ಟ್ರಾನ್ಸ್ ಫ್ಯಾಟ್‌ಗಳ ಸೇವನೆಯೊಂದಿಗೆ ಸಂಬಂಧ ಹೊಂದಿದ್ದು, ವಿಶ್ವ ಆರೋಗ್ಯ ಸಂಸ್ಥೆ ಇವುಗಳ ಜಾಗತಿಕ ನಿರ್ಮೂಲನೆಗೆ ಕರೆ ನೀಡಿದೆ' ಎಂದರು.
- 'ಕೃತಕ ಕೊಬ್ಬು ನಿರ್ವಹಣೆಗೆ ರಾಜ್ಯದಲ್ಲಿ ಪ್ರಯೋಗಾಲಯ ಪರೀಕ್ಷೆ, ತಪಾಸಣೆ ಸೇರಿ ವಿವಿಧ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗುವುದು. ರಾಜ್ಯದಾದ್ಯಂತ ಈಗಾಗಲೇ 52 ಸಾವಿರಕ್ಕೂ ಅಧಿಕ ಆಹಾರೋದ್ಯಮ ವೃತ್ತಿಪರರಿಗೆ ತರಬೇತಿ ನೀಡಲಾಗಿದೆ' ಎಂದು ಹೇಳಿದರು.
- ಕ್ಯಾನ್ಸರ್ ತಜ್ಞ ಡಾ.ವಿಶಾಲ್ ರಾವ್, ಬೆಂಗಳೂರು ಹೋಟೆಲ್ ಅಸೋಸಿಯೇಷನ್ ಗೌರವಾಧ್ಯಕ್ಷ ಪಿ.ಸಿ. ರಾವ್, ಕೈಗಾರಿಕೋದ್ಯಮಿಗಳು ಹಾಗೂ ಆಹಾರ ಉದ್ಯಮ ನಿರ್ವಾಹಕರು ಪಾಲ್ಗೊಂಡಿದ್ದರು.

Dr Rajkumar IAS/KAS Academy

ಜಾಗತಿಕ ಮಟ್ಟದ ಪ್ರಮುಖ ಕ್ರೀಡಾ ಹಬ್ಬವಾದ ಕಾಮನ್‌ವೆಲ್ತ್ ಕ್ರೀಡಾಕೂಟದ 23ನೇ ಆವೃತ್ತಿಗೆ ಕ್ಷಣಗಣನೆ ಆರಂಭವಾಗಿದೆ. ಸ್ಕಾಟ್ಲೆಂಡ್‌ನ ಗ್ಲಾಸ್ಗೊ ನಗರವು ಕ್ರೀಡಾಕೂಟದ ಆತಿಥ್ಯವಹಿಸಲು ಸರ್ವ ಸಜ್ಜಾಗಿದೆ. ಇಂದು (ಗುರುವಾರ) ಕೂಟಕ್ಕೆ ಚಾಲನೆ ಸಿಗಲಿದ್ದು, ಆಗಸ್ಟ್ 2ರವರೆಗೆ ನಡೆಯಲಿದೆ. ಭಾರತ ಸೇರಿದಂತೆ 74 ರಾಷ್ಟ್ರಗಳು ಭಾಗವಹಿಸಲಿವೆ. ಭಾರತ ಹೆಚ್ಚು ಸಾಮರ್ಥ್ಯ ತೋರುವ ಕುಸ್ತಿ, ಟೆನಿಸ್, ಶೂಟಿಂಗ್ ಸ್ಪರ್ಧೆಗಳು ಈ ಬಾರಿಯ ಕೂಟದಲ್ಲಿಲ್ಲ. ಹಾಗಿದ್ದರೂ, ದೇಶದ ಕ್ರೀಡಾಳುಗಳು ಉತ್ತಮ ಸಾಧನೆ ತೋರುವ ವಿಶ್ವಾಸದಲ್ಲಿದ್ದಾರೆ

# ಕಾಮನ್‌ವೆಲ್ತ್ ಕೂಟವೂ ಮಿಲ್ಕಾ ಸಿಂಗ್ ಚಿನ್ನವೂ



**ದೇಶಗಳ ಪದಕ ಸಾಧನೆ (ಅಗ್ರ 5 ದೇಶ)**

| ದೇಶ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|
| ಆಸ್ಟ್ರೇಲಿಯಾ | 1001 | 832 | 763 | 2596 |
| ಇಂಗ್ಲೆಂಡ್ | 773 | 783 | 766 | 2322 |
| ಕೆನಡಾ | 510 | 548 | 589 | 1647 |
| ಭಾರತ | 203 | 190 | 171 | 564 |
| ನ್ಯೂಜಿಲೆಂಡ್ | 179 | 232 | 296 | 707 |

## ಕೇವಲ ಸ್ಪರ್ಧೆಯಲ್ಲ

• ಪ್ರದೀಶ್ ಎಚ್. ಮರೋಡಿ

ಕಾಮನ್‌ವೆಲ್ತ್ ಕ್ರೀಡಾಕೂಟವು ಒಲಿಂಪಿಕ್ಸ್ ಮತ್ತು ಏಷ್ಯನ್ ಗೇಮ್ಸ್ ನಂತರ ವಿಶ್ವದ ಮೂರನೇ ಅತಿದೊಡ್ಡ ಬಹು ಕ್ರೀಡಾ ಸ್ಪರ್ಧೆಯಾಗಿ ಗುರುತಿಸಿಕೊಂಡಿದೆ. ಇದು ಕೇವಲ ಪದಕಗಳಿಗಾಗಿ ನಡೆಯುವ ಸ್ಪರ್ಧೆಯಲ್ಲ; ವಿವಿಧ ಖಂಡಗಳ ದೇಶಗಳನ್ನು ಕ್ರೀಡೆಯ ಮೂಲಕ ಒಂದೇ ಸೂರಿನಡಿ ತರುವ ವೇದಿಕೆಯೂ ಆಗಿದೆ. ಹಿಂದೆ ಬ್ರಿಟಿಷ್ ಸಾಮ್ರಾಜ್ಯದ ಆಳ್ವಿಕೆಗೆ ಒಳಪಟ್ಟಿದ್ದ ಹಾಗೂ ಪ್ರಸ್ತುತ ಕಾಮನ್‌ವೆಲ್ತ್ ಒಕ್ಕೂಟದಲ್ಲಿರುವ ರಾಷ್ಟ್ರಗಳು ಈ ಕೂಟದಲ್ಲಿ ಭಾಗವಹಿಸುತ್ತಿವೆ.

ಒಲಿಂಪಿಕ್ಸ್ ಹಾಗೂ ಏಷ್ಯನ್ ಗೇಮ್ಸ್‌ನಂತೆ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಈ ಕ್ರೀಡಾ ಹಬ್ಬವನ್ನು 'ಸ್ನೇಹಪರ ಕ್ರೀಡಾಕೂಟ' (ಫ್ರೆಂಡ್ಲಿ ಗೇಮ್ಸ್) ಎಂದೂ ಬಣ್ಣಿಸಲಾಗುತ್ತದೆ. ಈ ಕೂಟದ ರೂವಾರಿ ಮೆಲ್ವಿಲ್ ಮಾರ್ಕ್ಸ್ ರಾಬಿನ್ಸನ್. 1930ರಲ್ಲಿ ಕೆನಡಾದ ಹ್ಯಾಮಿಲ್ಟನ್ ನಗರದಲ್ಲಿ ನಡೆದ ಮೊದಲ ಆವೃತ್ತಿಯಲ್ಲಿ 11 ದೇಶಗಳ ಸುಮಾರು 400 ಕ್ರೀಡಾಪಟುಗಳು ವಿವಿಧ ಆರು ಕ್ರೀಡೆಗಳಲ್ಲಿ ಸ್ಪರ್ಧಿಸಿದ್ದರು. ಆರಂಭದಲ್ಲಿ 'ಬ್ರಿಟಿಷ್ ಎಂಪೈರ್ ಗೇಮ್ಸ್' ಎಂದು ಕರೆಯಲಾಗುತ್ತಿದ್ದ ಕೂಟವನ್ನು 1978ರಲ್ಲಿ 'ಕಾಮನ್‌ವೆಲ್ತ್ ಗೇಮ್ಸ್' ಎಂದು ಮರುನಾಮಕರಣ ಮಾಡಲಾಯಿತು. ಎರಡನೇ ಮಹಾಯುದ್ಧದ ಕಾರಣ 1942 ಮತ್ತು 1946ರ ಕೂಟಗಳು ನಡೆದಿರಲಿಲ್ಲ.

ವಿವಿಧ ಕಾರಣಗಳಿಂದ ಭಾರತ ಈ ಕ್ರೀಡೆಗಳಲ್ಲಿ ನಾಲ್ಕು ಬಾರಿ ಭಾಗವಹಿಸಿರಲಿಲ್ಲ. 1930ರ ಮೊದಲ (ಹ್ಯಾಮಿಲ್ಟನ್) ಕೂಟದಲ್ಲಿ, 1950ರ ಕೂಟದಲ್ಲಿ (ಆಕ್ಲೆಂಡ್), 1962ರ ಪರ್ತ್ ಕೂಟದಲ್ಲಿ ಮತ್ತು 1986ರ ಎಡಿನ್‌ಬರ್ಗ್ ಕೂಟದಲ್ಲಿ ಭಾರತ ಕಣಕ್ಕಿಳಿದಿರಲಿಲ್ಲ.

**ಭಾರತ ಆತಿಥ್ಯ:** 2010ರಲ್ಲಿ ಕಾಮನ್‌ವೆಲ್ತ್ ಗೇಮ್ಸ್‌ಗೆ ಮೊದಲ ಬಾರಿ ಆತಿಥ್ಯ ವಹಿಸುವ ಮೂಲಕ ಭಾರತ ವಿಶ್ವದ ಗಮನ ಸೆಳೆದಿತ್ತು. ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ನಡೆದ 19ನೇ ಆವೃತ್ತಿಯು ಭಾರಿ ಯಶಸ್ಸು ಕಂಡಿತ್ತು. ಈ ಕೂಟದಲ್ಲಿ 17 ವಿವಿಧ ಸ್ಪರ್ಧೆಗಳು ನಡೆದಿದ್ದವು. 71 ರಾಷ್ಟ್ರಗಳ ತಂಡಗಳು ಭಾಗವಹಿಸಿದ್ದವು. ಈ ಕೂಟದ ಇತಿಹಾಸದಲ್ಲೇ ಭಾರತ (101 ಪದಕ) ತನ್ನ ಅತ್ಯುತ್ತಮ ಪ್ರದರ್ಶನವನ್ನು ನೀಡಿತ್ತು. ಪದಕ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದಿತ್ತು.

ಕ್ರೀಡಾಕೂಟದ 24ನೇ ಆವೃತ್ತಿಯ ಆತಿಥ್ಯವನ್ನು ಭಾರತ ವಹಿಸಿಕೊಳ್ಳಲಿದೆ. ಗುಜರಾತ್‌ನ ರಾಜಧಾನಿ ಅಹಮದಾಬಾದ್‌ನಲ್ಲಿ 2030ರಲ್ಲಿ 100ನೇ ವರ್ಷದ (ಶತಮಾನೋತ್ಸವ) ಕೂಟ ಆಯೋಜನೆಗೊಳ್ಳಲಿದೆ. 2036ರ ಒಲಿಂಪಿಕ್ ಕ್ರೀಡಾಕೂಟದ ಆಯೋಜನೆಗೆ ಬಿಡ್ ಸಲ್ಲಿಸಲು ಸಿದ್ಧತೆ ನಡೆಸುತ್ತಿರುವ ಭಾರತಕ್ಕೆ ಇದು ವಿಶ್ವದರ್ಜೆಯ ಮೂಲಸೌಕರ್ಯ ಮತ್ತು ಸಾಮರ್ಥ್ಯವನ್ನು ಪ್ರದರ್ಶಿಸಲು ಬಲುದೊಡ್ಡ ವೇದಿಕೆಯಾಗಲಿದೆ.

ಕಾಮನ್‌ವೆಲ್ತ್ ಗೇಮ್ಸ್
ಗ್ಲಾಸ್ಗೊ 2026

### ಪದಕಗಳ ಭರವಸೆ

**ಅಥ್ಲೆಟಿಕ್ಸ್:** ಒಲಿಂಪಿಯನ್ ನೀರಜ್ ಚೋಪ್ರಾ ಅವರು ಜಾವೆಲಿನ್‌ನಲ್ಲಿ ಭಾರತಕ್ಕೆ ಸ್ವರ್ಣ ಗೆದ್ದುಕೊಡುವ ವಿಶ್ವಾಸದಲ್ಲಿದ್ದಾರೆ. ಮುರಳಿ ಶ್ರೀಶಂಕರ್ (ಲಾಂಗ್‌ಜಂಪ್), ಸರ್ವೇಶ್ ಕುಶಾರೆ (ಹೈಜಂಪ್), ಪ್ರವೀಣ್ ಚಿತ್ರವೇಲ್ (ಟ್ರಿಪಲ್ ಜಂಪ್), ದೀರ್ಘ ಅಂತರದ ಓಟಗಾರ್ತಿ ಪಾರುಲ್ ಚೌಧರಿ ಅವರೂ ಪದಕದ ಭರವಸೆಯಾಗಿದ್ದಾರೆ.

**ಬಾಕ್ಸಿಂಗ್:** ಒಲಿಂಪಿಕ್ ಪದಕ ವಿಜೇತೆ ಲವ್ಲಿನಾ ಬೊರ್ಗೊಹೈನ್, ವಿಶ್ವ ಚಾಂಪಿಯನ್ ಜೈಸ್ಮಿನ್ ಲಂಬೋರಿಯಾ ಹಾಗೂ ಪ್ರೀತಿ ಪವಾರ್ ಬಾಕ್ಸಿಂಗ್‌ನಲ್ಲಿ ಪದಕ ಗೆಲ್ಲುವ ಛಲದಲ್ಲಿದ್ದಾರೆ.

**ವೇಟ್‌ಲಿಫ್ಟಿಂಗ್:** ಅನುಭವಿ ಮೀರಾಬಾಯಿ ಚಾನು ಅವರ ಮುಂದಾಳತ್ವದಲ್ಲಿ ವೇಟ್‌ಲಿಫ್ಟಿಂಗ್ ಪಟುಗಳು ಕನಿಷ್ಠ ಮೂರ್ನಾಲ್ಕು ಪದಕ ಗೆಲ್ಲುವ ವಿಶ್ವಾಸದಲ್ಲಿದ್ದಾರೆ.

**ಈಜು:** ಕರ್ನಾಟಕದ ಶ್ರೀಹರಿ ನಟರಾಜ್, ಅನೀಶ್ ಗೌಡ, ದಕ್ಷಿಣ್ ಎಸ್. ಮತ್ತು ಕೇರಳದ ಸಜನ್ ಪ್ರಕಾಶ್ ಈಜು ಸ್ಪರ್ಧೆಯಲ್ಲಿ 'ಪೋಡಿಯಂ ಫಿನಿಷ್' ಮಾಡುವ ಭರವಸೆ ತೋರಿದ್ದಾರೆ.



ಶ್ರೀಹರಿ ನಟರಾಜ್

Publication Date
23/07/2026

## ಮಿಲ್ಕಾ ಸಿಂಗ್ ಚಿನ್ನವೂ

• ಗಿರೀಶ ದೊಡ್ಡಮನಿ

ಕಾರ್ಡಿಫ್ ಕ್ರೀಡಾಂಗಣದಲ್ಲಿ ಚಿನ್ನದ ಪದಕ ಕೊರಳಿಗೇರಿಸಿಕೊಂಡು ಹೆಮ್ಮೆಯಿಂದ ಬೀಗುತ್ತಿದ್ದ ಮಿಲ್ಕಾ ಸಿಂಗ್ ಅವರ ಸಾಧನೆಯನ್ನು ಭಾರತದ ಆಗಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಸಹೋದರಿ ವಿಜಯಲಕ್ಷ್ಮೀ ಪಂಡಿತ್ ವೀಕ್ಷಿಸಿದ್ದರು. ಅವರು ಮಿಲ್ಕಾ ಅವರನ್ನು ಭೇಟಿಯಾಗಿ ಅಭಿನಂದಿಸಿದರು. 'ಏನು ಕಾಣಿಕೆ ಬೇಕು' ಎಂದು ಕೇಳಿದ್ದರು. ಆಗ ಮಿಲ್ಕಾ ಅವರು, 'ಭಾರತದಲ್ಲಿ ಒಂದು ದಿನ ರಾಷ್ಟ್ರೀಯ ರಜೆ ಘೋಷಿಸಿ' ಎಂದು ಮನವಿ ಮಾಡಿದರು.

ಸಹೋದರಿಯ ಮೂಲಕ ವಿಷಯ ತಿಳಿದ ನೆಹರೂ ಅವರು ಮಿಲ್ಕಾ ಆಸೆಯನ್ನು ಈಡೇರಿಸಿಬಿಟ್ಟರು. ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತ ಕಂಡ ಸ್ವಾರಸ್ಯಕರ ಘಟನೆಯಾಗಿ ಇದು ದಾಖಲಾಗಿದೆ.

ಭಾರತ 1934ರ ಎರಡನೇ ಆವೃತ್ತಿಯಿಂದ ಈ ಕೂಟದಲ್ಲಿ ಭಾಗವಹಿಸುತ್ತ ಬಂದಿದೆ. ಆದರೆ ದೇಶಕ್ಕೆ ಮೊದಲ ಚಿನ್ನ ಒಲಿದಿದ್ದು 1958ರಲ್ಲಿ ಕಾರ್ಡಿಫ್‌ನಲ್ಲಿ ನಡೆದ ಕೂಟದಲ್ಲಿ. ಅದನ್ನು ಗೆದ್ದುಕೊಟ್ಟವರು 'ಫ್ಲೈಯಿಂಗ್ ಸಿಖ್' ಖ್ಯಾತಿಯ ಮಿಲ್ಕಾ ಸಿಂಗ್. ಪುರುಷರ 440 ಯಾರ್ಡ್ಸ್ ಓಟದಲ್ಲಿ 46.71 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಚಿನ್ನ ಗೆದ್ದರು. ಅಲ್ಲಿಂದ ಭಾರತದ ಚಿನ್ನದ ಬೇಟೆ ಶುರುವಾಯಿತು. ಹಾಗೆ ನೋಡಿದರೆ, 1934ರಲ್ಲಿ ನಡೆದ ಎಂಪೈರ್ ಗೇಮ್ಸ್ (ಈಗ ಕಾಮನ್‌ವೆಲ್ತ್) ಪೈಲ್ವಾನ್ ರಶೀದ್ ಅನ್ವರ್ ಅವರು ಕುಸ್ತಿಯಲ್ಲಿ ಜಯಿಸಿದ್ದ ಕಂಚು ಭಾರತದ ಖಾತೆಗೆ ಸೇರಿದ ಮೊದಲ ಪದಕ.

ಮಹಿಳೆಯರ ವಿಭಾಗದಲ್ಲಿ ಭಾರತಕ್ಕೆ ಪ್ರಥಮ ಪದಕ ಒಲಿದಿದ್ದು 1978ರ ಎಡ್ಮಂಟನ್ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ. ಅಮಿ ಜಿಯಾ ಮತ್ತು ಕನ್ವಲ್ ಠಾಕರ್ ಸಿಂಗ್ ಅವರ ಜೋಡಿಯು ಮಹಿಳೆಯರ ಬ್ಯಾಡ್ಮಿಂಟನ್ ಡಬಲ್ಸ್‌ನಲ್ಲಿ ಕಂಚಿನ ಪದಕ ಜಯಿಸಿತು. ಆ ಕೂಟಕ್ಕೆ ತೆರಳಿದ್ದ ಭಾರತ ತಂಡದಲ್ಲಿ ಇದ್ದವರು ಇವರಿಬ್ಬರೇ ಮಹಿಳೆಯರು. ಉಳಿದಂತೆ 40 ಜನ ಪುರುಷ ಅಥ್ಲೀಟ್‌ಗಳು ಇದ್ದರು. ಅದರಲ್ಲಿದ್ದ ಕನ್ನಡಿಗ ಪ್ರಕಾಶ್ ಪಡುಕೋಣೆ ಅವರು ಪುರುಷರ ಬ್ಯಾಡ್ಮಿಂಟನ್ ಸಿಂಗಲ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದರು. ಮಹಿಳೆಯರ ವಿಭಾಗದಲ್ಲಿ ಪಿ.ವಿ. ಸಿಂಧು ಅವರ ಸಾಧನೆ ಐತಿಹಾಸಿಕ. 2014ರಲ್ಲಿ ಇದೇ ಗ್ಲಾಸ್ಗೊದಲ್ಲಿ ನಡೆದಿದ್ದ ಕೂಟದಲ್ಲಿ ಅವರು ಕಂಚಿನ ಪದಕ ಜಯಿಸಿದ್ದರು. 2018ರಲ್ಲಿ ಗೋಲ್ಡ್‌ಕೋಸ್ಟ್‌ನಲ್ಲಿ ಚಿನ್ನ, ಬೆಳ್ಳಿ ಜಯಿಸಿದ್ದರು. ಹೋದ ಸಲ (2022) ಕೂಡ ಎರಡು ಪದಕ ಗೆದ್ದಿದ್ದರು. ಆದರೆ ಈ ಬಾರಿಯ ಕೂಟದಲ್ಲಿ ಬ್ಯಾಡ್ಮಿಂಟನ್ ಇಲ್ಲ. ಭಾರತಕ್ಕೆ ಹೆಚ್ಚು ಪದಕ ಸಾಧನೆ ಮಾಡುವ ಅವಕಾಶ ಇರುವ ಕುಸ್ತಿ, ಶೂಟಿಂಗ್, ಟೆನಿಸ್ ಕೂಡ ಈ ಬಾರಿ ನಡೆಯುತ್ತಿಲ್ಲ. ಇರುವ ಹತ್ತು ಕ್ರೀಡೆಗಳಲ್ಲಿಯೇ ಪದಕ ಗೆಲ್ಲುವ ಸವಾಲು ಭಾರತ ತಂಡಕ್ಕೆ ಇದೆ.

ಆದರೂ ಪದಕ ಗೆಲುವಿನ ಪರಂಪರೆಯನ್ನು ಮುಂದುವರಿಸುವ ಛಲದಲ್ಲಿ ಭಾರತದ ಅಥ್ಲೀಟ್‌ಗಳು ಇದ್ದಾರೆ. ಮುಂದಿನ ಕಾಮನ್‌ವೆಲ್ತ್ ಕೂಟಕ್ಕೆ (2030) ಭಾರತವೇ ಆತಿಥ್ಯ ವಹಿಸುತ್ತಿದೆ. ಆಗ ಎಲ್ಲ ಕ್ರೀಡಾ ಪ್ರಕಾರಗಳಿಗೆ ಮತ್ತೆ ಅವಕಾಶ ನೀಡುವ ನಿರೀಕ್ಷೆ ಇದೆ. ಅಲ್ಲದೆ ಇದೇ ಸೆಪ್ಟೆಂಬರ್‌ನಲ್ಲಿ ಜಪಾನ್‌ನಲ್ಲಿ ಏಷ್ಯನ್ ಗೇಮ್ಸ್ ನಡೆಯಲಿದೆ. ಗ್ಲಾಸ್ಗೊದಲ್ಲಿ ಭಾಗವಹಿಸುವ ಕೆಲವು ಅಥ್ಲೀಟ್‌ಗಳು ಜಪಾನ್‌ನಲ್ಲಿ ಕಣಕ್ಕಿಳಿಯುವರು. ಇಲ್ಲಿನ ಗೆಲುವು ಅವರ ಆತ್ಮವಿಶ್ವಾಸ ಹೆಚ್ಚಿಸುವ ನಿರೀಕ್ಷೆ ಇದೆ.



ಮುರಳಿ ಶ್ರೀಶಂಕರ್




ಮಿಲ್ಕಾ ಸಿಂಗ್



ಪಿ.ವಿ.ಸಿಂಧು



ಪ್ರಕಾಶ್ ಪಡುಕೋಣೆ



ನೀರಜ್ ಚೋಪ್ರಾ

### ಪ್ರಮುಖ ಅಂಶಗಳು

- ಆಸ್ಟ್ರೇಲಿಯಾ ಈ ಕ್ರೀಡಾಕೂಟದ ಆತಿಥ್ಯವನ್ನು ಅತಿ ಹೆಚ್ಚು ಸಲ (5 ಬಾರಿ) ವಹಿಸಿದೆ
- ಭಾರತವು 1934ರ ಲಂಡನ್ ಗೇಮ್ಸ್‌ನಲ್ಲಿ (ಎರಡನೇ ಆವೃತ್ತಿ) ಮೊದಲ ಬಾರಿ ಸ್ಪರ್ಧಿಸಿತ್ತು. 1930, 1950, 1962, 1986ರ ಕೂಟಗಳಲ್ಲಿ ಭಾರತ ಪಾಲ್ಗೊಂಡಿರಲಿಲ್ಲ
- 2018ರ ಗೋಲ್ಡ್ ಕೋಸ್ಟ್ ಕೂಟದ ಬಳಿಕ ಪುರುಷರು ಮತ್ತು ಮಹಿಳೆಯರಿಗೆ ಸಮಾನ ಸಂಖ್ಯೆಯ ಪದಕ ಸ್ಪರ್ಧೆ ನಿಗದಿ ಮಾಡಲಾಗಿದೆ
- ಪ್ಯಾರಾ ಕ್ರೀಡಾಪಟುಗಳು ದೇಶದ ಮುಖ್ಯ ತಂಡದ ಭಾಗವಾಗಿ ಸ್ಪರ್ಧಿಸುತ್ತಾರೆ. ಅವರು ಗೆಲ್ಲುವ ಪದಕಗಳೂ ದೇಶದ ಒಟ್ಟಾರೆ ಪದಕಗಳ ಪಟ್ಟಿಗೆ ಸೇರಿಸಲಾಗುತ್ತದೆ

Presented by

**ಹತ್ತು ಕ್ರೀಡೆಗಳು:** • 3x3 ಬ್ಯಾಸ್ಕೆಟ್‌ಬಾಲ್ • ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್ • ಅಥ್ಲೆಟಿಕ್ಸ್ • ಬೌಲ್ಸ್ • ಬಾಕ್ಸಿಂಗ್ • ಜುಡೊ • ಈಜು • ಟ್ರ್ಯಾಕ್ ಸೈಕ್ಲಿಂಗ್ • ವೇಟ್‌ಲಿಫ್ಟಿಂಗ್ • ನೆಟ್ ಬಾಲ್

**ಪ್ಯಾರಾ ವಿಭಾಗ:** • ಟ್ರ್ಯಾಕ್ ಸೈಕ್ಲಿಂಗ್ • ಈಜು • ಬೌಲ್ಸ್ • ಪವರ್‌ಲಿಫ್ಟಿಂಗ್ • ಅಥ್ಲೆಟಿಕ್ಸ್ • 3x3 ವ್ಹೀಲ್‌ಚೇರ್ ಬ್ಯಾಸ್ಕೆಟ್‌ಬಾಲ್



ಎರಡು ಬಾರಿ ಪದಕ ಗೆದ್ದಿದ್ದ ವೇಟ್‌ಲಿಫ್ಟರ್ ಗುರುರಾಜ್ ಪೂಜಾರಿ

ಮೀರಾಬಾಯಿ ಚಾನು

ಲವ್ಲಿನಾ ಬೊರ್ಗೊಹೈನ್

## ವೆಚ್ಚ ಕಡಿಮೆ, ಪ್ರಯೋಗ ಹಲವು



• ಬಾಲರಾಜ್ ಎಸ್.

ಆತಿಥ್ಯ 'ಬಿಳಿಯಾನೆಯಾಗಲಿದೆ' ಎಂಬ ಕಾರಣ ನೀಡಿ ಆಸ್ಟ್ರೇಲಿಯಾದ ವಿಕ್ಟೋರಿಯಾ ನಗರವು 2026ರ ಕಾಮನ್‌ವೆಲ್ತ್ ಗೇಮ್ಸ್ ಆಯೋಜನೆಯಿಂದ ಹಿಂದೆ ಸರಿದಾಗ, ಈ ಕೂಟವು 2027ಕ್ಕೆ ಮುಂದೂಡಿಕೆಯಾಗುವ ಅಥವಾ ಸಂಪೂರ್ಣ ರದ್ದಾಗುವ ಸಂಭವವಿತ್ತು. ಆಗ, ಕಡಿಮೆ ವೆಚ್ಚದಲ್ಲಿ ನಿಗದಿತ ಸಮಯದಲ್ಲಿಯೇ ಕೂಟ ಆಯೋಜಿಸಲು ಸ್ಕಾಟ್ಲೆಂಡ್ ಮುಂದೆ ಬಂತು. ಹೊಸ ಕ್ರೀಡಾಂಗಣ ನಿರ್ಮಿಸಿ, ಹೆಚ್ಚು ವೆಚ್ಚ ಮಾಡದೆ ಗ್ಲಾಸ್ಗೊನಲ್ಲಿ ಈಗಾಗಲೇ ಇರುವ ಕ್ರೀಡಾ ಸೌಲಭ್ಯಗಳಲ್ಲಿಯೇ ಕೂಟ ಆಯೋಜಿಸಲು ನಿರ್ಧರಿಸಿತು. ಕ್ರೀಡೆಗಳ ಪ್ರಮಾಣ ಇಳಿಕೆಯೂ ವೆಚ್ಚ ತಗ್ಗಿಸುವ ಭಾಗವೇ ಆಗಿದೆ. ಅಲ್ಲದೆ, ಭವಿಷ್ಯದಲ್ಲಿ ಈ ಕೂಟವನ್ನು ಕಡಿಮೆ ವೆಚ್ಚದಲ್ಲಿಯೇ ಆಯೋಜಿಸಲು ಈ ಬಾರಿಯ ಕೂಟದಲ್ಲಿ ಹಲವು ಪ್ರಯೋಗಗಳನ್ನು ಮಾಡಲಾಗಿದೆ.

**ಒಳಾಂಗಣ ಕ್ರೀಡಾಂಗಣದಲ್ಲಿ ಉದ್ಘಾಟನೆ:** ಕಾಮನ್‌ವೆಲ್ತ್ ಗೇಮ್ಸ್‌ನ 96 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಉದ್ಘಾಟನಾ ಕಾರ್ಯಕ್ರಮವು ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ. ಗ್ಲಾಸ್ಗೊದ ಒವಿಒ ಹೈಡ್ರೊ ಅರೇನಾ ಒಳಾಂಗಣ ಕ್ರೀಡಾಂಗಣವು ಉದ್ಘಾಟನಾ ಕಾರ್ಯಕ್ರಮಕ್ಕೆ ವೇದಿಕೆಯಾಗಿದೆ.

**8 ಮೈಲು ವ್ಯಾಪ್ತಿ:** ಕೂಟದಲ್ಲಿರುವ ಎಲ್ಲ 10 ಕ್ರೀಡೆಗಳ ವಿವಿಧ ಸ್ಪರ್ಧೆಗಳು ಗ್ಲಾಸ್ಗೊದ ನಾಲ್ಕು ಕ್ರೀಡಾಂಗಣಗಳಲ್ಲಿ ನಡೆಯಲಿವೆ. ಇವುಗಳು ಪ್ರಧಾನ ತಾಣದಿಂದ (ಹೈಡ್ರೊ ಅರೇನಾ ಕ್ರೀಡಾಂಗಣ) ಎಂಟು ಮೈಲುಗಳ ವ್ಯಾಪ್ತಿಯಲ್ಲೇ ಇವೆ. ಕ್ರೀಡಾಂಗಣ ನಿರ್ಮಾಣ ವೆಚ್ಚ ತಗ್ಗಿಸಲು ಹಾಗೂ ಮಾಲಿನ್ಯ ಇಳಿಕೆಯ ಭಾಗವಾಗಿ ಈ 'ಸುಸ್ಥಿರ' ಯೋಜನೆ ರೂಪಿಸಲಾಗಿದೆ.

**ಒಳಾಂಗಣದಲ್ಲಿ ಲಾನ್ ಬೌಲ್ಸ್ ಸ್ಪರ್ಧೆ:** ಹೊರಾಂಗಣ ಕ್ರೀಡೆಯಾಗಿರುವ ಲಾನ್ ಬೌಲ್ಸ್ ಸ್ಪರ್ಧೆಯನ್ನೂ ಒಳಾಂಗಣದಲ್ಲಿ ಆಯೋಜಿಸಲಾಗಿದೆ. ಇದು ಸ್ಪರ್ಧಿಗಳ ಪ್ರದರ್ಶನದ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಪುರುಷರ ಮತ್ತು ಮಹಿಳೆಯರ 1,500 ಮೀ. ಓಟವನ್ನು ಇಂಪೀರಿಯಲ್ ಮೈಲು (1,609 ಮೀ.) ಮಾದರಿಯಲ್ಲಿ ಆಯೋಜಿಸಲಾಗುತ್ತಿದೆ.

**ಆರು ಪ್ಯಾರಾ ಕ್ರೀಡೆಗಳು:** ಈ ಕೂಟದಲ್ಲಿ ಪ್ಯಾರಾ ಅಥ್ಲೀಟುಗಳಿಗೆ ಆರು ಕ್ರೀಡೆಗಳ ವಿವಿಧ ವಿಭಾಗಗಳಲ್ಲಿ 47 ಪದಕಗಳನ್ನು ಗೆಲ್ಲುವ ಅವಕಾಶವಿದೆ. ಇದು ಕಾಮನ್‌ವೆಲ್ತ್ ಗೇಮ್ಸ್ ಇತಿಹಾಸದಲ್ಲಿಯೇ ಅತಿ ಹೆಚ್ಚು.

**'ರುಲೊ' ತ್ರಿಭುಜಾಕೃತಿ ಪದಕಗಳು:** ಸಾಮಾನ್ಯವಾಗಿ ಬಹುತೇಕ ಕೂಟಗಳಲ್ಲಿ ಸ್ಪರ್ಧೆಗಳ ವಿಜೇತರಿಗೆ ವೃತ್ತಾಕಾರದ ಪದಕಗಳನ್ನು ನೀಡಲಾಗುತ್ತದೆ. ಆದರೆ, ಗ್ಲಾಸ್ಗೊದಲ್ಲಿ ಅರೆ (ರುಲೊ) ತ್ರಿಭುಜಾಕೃತಿಯ ವಿಶಿಷ್ಟ ಪದಕಗಳನ್ನು ಸಿದ್ಧಪಡಿಸಲಾಗಿದೆ. ಇದು ಗ್ಲಾಸ್ಗೊವಿನ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸಲಿದೆ. ಅಲ್ಲದೆ ಮೊದಲ ಬಾರಿ ಪದಕಗಳ ಮೇಲೆ ಬ್ರೈಲ್ ಲಿಪಿಯಲ್ಲಿ ಬರೆಯಲಾಗಿದೆ. ಬಲ್ಗೇರಿಯಾ ಮೂಲದ ಕಲಾವಿದೆ (ಸದ್ಯ ಗ್ಲಾಸ್ಗೊ ನಿವಾಸಿ) ಮಿಲಿತ್ಸಾ ಮಿಲೆಂಕೊವಾ ಅವರ ಕೌಶಲದಲ್ಲಿ ಈ ವಿನ್ಯಾಸ ಮೂಡಿಬಂದಿದೆ.

**ಫಿನೀ:** ಸ್ಕಾಟ್ಲೆಂಡ್‌ನ ರಾಷ್ಟ್ರೀಯ ಪ್ರಾಣಿ ಆಗಿರುವ ಯೂನಿಕಾರ್ನ್ (ಕಾಲ್ಪನಿಕ ಪ್ರಾಣಿ) ಗ್ಲಾಸ್ಗೊ ಕಾಮನ್‌ವೆಲ್ತ್ ಗೇಮ್ಸ್‌ನ ಅಧಿಕೃತ ಮ್ಯಾಸ್ಕಟ್– 'ಫಿನೀ' ಆಗಿದೆ. ಗ್ಲಾಸ್ಗೊದ 24 ಶಾಲೆಗಳ 76 ವಿದ್ಯಾರ್ಥಿಗಳ ಗುಂಪು ಇದನ್ನು ರಚಿಸಿದೆ.



Publication Date
23/07/2026

Presented by

# ಕೈಹಿಡಿದ ಶಾಖೋತ್ಪನ್ನ ವಿದ್ಯುತ್

## ಪ್ರತಿನಿತ್ಯ ಸರಾಸರಿ 84.34 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಳೆ ಕೊರತೆಯಿಂದಾಗಿ ರಾಜ್ಯದಲ್ಲಿ ಜಲ ವಿದ್ಯುತ್ ಉತ್ಪಾದನೆ ಕುಂಠಿತವಾಗಿರುವ ಕಾರಣ ಶಾಖೋತ್ಪನ್ನ ಕೇಂದ್ರಗಳಲ್ಲಿ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಲಾಗಿದೆ. ಈ ತಿಂಗಳಲ್ಲಿ ಪ್ರತಿನಿತ್ಯ ಸರಾಸರಿ 84.34 ದಶಲಕ್ಷ ಯೂನಿಟ್ ಶಾಖೋತ್ಪನ್ನ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ.

ಇದನ್ನು ಪ್ರತಿನಿತ್ಯ 100 ದಶಲಕ್ಷ ಯೂನಿಟ್‌ಗೆ ಹೆಚ್ಚಿಸಲು ಕ್ರಮ ವಹಿಸಲಾಗುತ್ತಿದೆ. ಕಳೆದ ವರ್ಷ ಜುಲೈ ತಿಂಗಳಲ್ಲಿ ನಿತ್ಯ ಸರಾಸರಿ 54.47 ದಶಲಕ್ಷ ಯೂನಿಟ್ ಉತ್ಪಾದನೆ ಮಾಡಲಾಗಿತ್ತು. ರಾಜ್ಯದ ಮೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಿಗೆ ಅಗತ್ಯವಿರುವ ಕಲ್ಲಿದ್ದಲು ಪೂರೈಸುವುದರ ಜತೆಗೆ ವಿದ್ಯುತ್ ಉತ್ಪಾದನೆಯಲ್ಲೂ ಗಣನೀಯವಾಗಿ ಏರಿಕೆಯಾಗಿದೆ ಎಂದು ಕರ್ನಾಟಕ ವಿದ್ಯುತ್ ನಿಗಮವು ತಿಳಿಸಿದೆ.

ಜಲ ವಿದ್ಯುತ್ ಉತ್ಪಾದನೆ ಕುಂಠಿತವಾಗಿರುವ ಕಾರಣ ಪೂರೈಕೆಗೆ ಸಮಸ್ಯೆಯಾಗದಂತೆ ಮುಕ್ತ ಮಾರುಕಟ್ಟೆಯಿಂದ ವಿದ್ಯುತ್ ಖರೀದಿಸಬೇಕಾಗುತ್ತದೆ. ಇದರಿಂದ ಸರ್ಕಾರದ ಬೊಕ್ಕಸದ ಮೇಲೆ ಹೊರೆ ಬೀಳುತ್ತದೆ. ಇದನ್ನು ತಪ್ಪಿಸಿ ರಾಜ್ಯದಲ್ಲೇ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಲು ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳನ್ನು ಸಜ್ಜುಗೊಳಿಸಲಾಗಿದೆ ಎಂದು ತಿಳಿಸಲಾಗಿದೆ.

> **ಗ್ರಾಹಕರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸುವ ನಿಟ್ಟಿನಲ್ಲಿ ಶಾಖೋತ್ಪನ್ನ ಸ್ಥಾವರಗಳಲ್ಲಿ ಪ್ರತಿನಿತ್ಯ 100 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಲು ಕ್ರಮ ಕೈಗೊಳ್ಳಲಾಗಿದೆ**
>
> **ರಾಜೇಂದ್ರ ಚೋಳನ್ ಪಿ.,** ವ್ಯವಸ್ಥಾಪಕ ನಿರ್ದೇಶಕ, ಕೆಪಿಸಿಎಲ್

**ವಿದ್ಯುತ್ ಉತ್ಪಾದನೆ ಪ್ರಮಾಣ:** ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರದಲ್ಲಿ ಈ ತಿಂಗಳಲ್ಲಿ ಸರಾಸರಿ 24.45 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಲಾಗಿದೆ. ಕಳೆದ ವರ್ಷ ಜುಲೈ ತಿಂಗಳಲ್ಲಿ ಸರಾಸರಿ 13.12 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗಿತ್ತು.

ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಸ್ಥಾವರದಲ್ಲಿ 33.64 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಕಳೆದ ವರ್ಷ ಜುಲೈ ತಿಂಗಳಲ್ಲಿ ಸರಾಸರಿ 25.35 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಲಾಗಿತ್ತು. ಯರಮರಸ್ ಶಾಖೋತ್ಪನ್ನ ಸ್ಥಾವರದಲ್ಲಿ ಸರಾಸರಿ 26.25 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಕಳೆದ ವರ್ಷ ಜುಲೈ ತಿಂಗಳಲ್ಲಿ ಸರಾಸರಿ 16 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗಿತ್ತು.

**ಕಲ್ಲಿದ್ದಲು ಸಂಗ್ರಹ ಹೆಚ್ಚಳ:** ಶಾಖೋತ್ಪನ್ನ ಕೇಂದ್ರಗಳಲ್ಲಿ ಹೆಚ್ಚುವರಿ ವಿದ್ಯುತ್ ಉತ್ಪಾದನೆ ಮಾಡಲು ಕಲ್ಲಿದ್ದಲು ಸಂಗ್ರಹ ಹೆಚ್ಚಿಸಲು ಕ್ರಮವಹಿಸಲಾಗಿದೆ. ಕಳೆದ ವರ್ಷ ಈ ಅವಧಿಯಲ್ಲಿ 12 ದಿನಕ್ಕೆ ಬೇಕಾಗುವ ಕಲ್ಲಿದ್ದಲು ಸಂಗ್ರಹವಿತ್ತು. ಈಗ 15 ದಿನಕ್ಕೆ ಬೇಕಾಗುವ ಕಲ್ಲಿದ್ದಲು ಸಂಗ್ರಹವಾಗಿದೆ. ಇದಲ್ಲದೆ ಕಲ್ಲಿದ್ದಲು ಸಂಗ್ರಹವನ್ನು 20 ದಿನಕ್ಕೆ ಬೇಕಾಗುವಷ್ಟು ಹೆಚ್ಚಿಸಲು ಕ್ರಮಕೈಗೊಳ್ಳಲಾಗಿದೆ. ದಿನಕ್ಕೆ 17ರಿಂದ 18 ರೇಕ್ ಕಲ್ಲಿದ್ದಲು ತರಿಸಿಕೊಳ್ಳಲಾಗುತ್ತಿದೆ ಎಂದು ನಿಗಮವು ತಿಳಿಸಿದೆ.



**ಕಲ್ಲಿದ್ದಲು ಸಂಗ್ರಹ ಹೆಚ್ಚಳ**

ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದರ ಜತೆಗೆ ಹೆಚ್ಚುವರಿಯಾಗಿ ಕಲ್ಲಿದ್ದಲು ಸಂಗ್ರಹಿಸಲಾಗುತ್ತಿದೆ. ಅಲ್ಲದೆ ಶಾಖೋತ್ಪನ್ನ ವಿದ್ಯುತ್ ಉತ್ಪಾದನೆ ಹೆಚ್ಚಿಸುವ ಮೂಲಕ ಸಮರ್ಪಕವಾಗಿ ವಿದ್ಯುತ್ ಪೂರೈಸಲು ಕ್ರಮಕೈಗೊಳ್ಳಲಾಗುತ್ತಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದ್ದಾರೆ.

**ರಾಜ್ಯದಲ್ಲಿ ಮಳೆ ಕೊರತೆಯಿಂದ ಜಲವಿದ್ಯುತ್ ಉತ್ಪಾದನೆಗೆ ಹೊಡೆತ ಬಿದ್ದಿದ್ದು, ಈ ಕೊರತೆ ನೀಗಲು ಶಾಖೋತ್ಪನ್ನ ಕೇಂದ್ರಗಳಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಳಕ್ಕೆ ಸರ್ಕಾರ ಮುಂದಾಗಿದೆ. ಅಷ್ಟಾದರೂ ಬೇಸಿಗೆಯನ್ನು ನೆನಪಿಸುತ್ತಿರುವ ಋತುವಿನಿಂದಾಗಿ, ಕೃಷಿ ಪಂಪ್‌ಸೆಟ್ ಮತ್ತು ಮನೆಗಳಲ್ಲಿ ವಿದ್ಯುತ್ ಬಳಕೆ ಪ್ರಮಾಣ ಮಳೆಗಾಲ ಬಂದರೂ ತಗ್ಗದೆ ಪೂರೈಕೆ ಸವಾಲನ್ನು ತಂದೊಡ್ಡಿದೆ**

# ಮಳೆಗಾಲದಲ್ಲೂ ತಗ್ಗದ ವಿದ್ಯುತ್ ಬೇಡಿಕೆ

• ಅಮೃತ್ ಕಿರಣ್ ಬಿ.ಎಂ.

**ದಾವಣಗೆರೆ:** ರಾಜ್ಯದಲ್ಲಿ ಮಳೆ ಕೊರತೆ ತೀವ್ರವಾಗಿದ್ದು, ಇದರಿಂದ ವಿದ್ಯುತ್ ಸರಬರಾಜಿನ ಮೇಲಿನ ಒತ್ತಡ ಹೆಚ್ಚುತ್ತಿದೆ. ಮಳೆಗಾಲದ ಅವಧಿಯಲ್ಲೂ ವಿದ್ಯುತ್ ಬೇಡಿಕೆ ಗಣನೀಯವಾಗಿ ಏರಿಕೆ ಕಂಡಿರುವುದು ಪೂರೈಕೆಗೆ ಸವಾಲಾಗಿದೆ.

ಪ್ರತಿವರ್ಷ ಮಳೆಗಾಲ ಆರಂಭವಾದ ಬಳಿಕ ಕೃಷಿ ಪಂಪ್‌ಸೆಟ್, ಗೃಹಬಳಕೆ ವಿದ್ಯುತ್ ಬಳಕೆ ಪ್ರಮಾಣ ತಗ್ಗುತ್ತಿತ್ತು. ಆದರೆ ಈ ಬಾರಿ ಬಿರು ಬೇಸಿಗೆಯ ಮಾರ್ಚ್, ಏಪ್ರಿಲ್ ಅವಧಿಯಲ್ಲಿ ಇದ್ದ ಬೇಡಿಕೆಯ ಸನಿಹಕ್ಕೆ ಬಂದಿದೆ.

ಜುಲೈ 17ರಂದು ರಾಜ್ಯದಲ್ಲಿ ಒಟ್ಟಾರೆ 322.12 ದಶಲಕ್ಷ ಯೂನಿಟ್ ವಿದ್ಯುತ್ ಬಳಕೆಯಾಗಿದೆ. ಸಹಜ ಮಳೆಗಾಲ ಇದ್ದ 2025ರ ಜುಲೈ 17ರಂದು 257.56 ದಶಲಕ್ಷ ಯೂನಿಟ್ ಬಳಕೆಯಾಗಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಅಂದಾಜು 70 ದಶಲಕ್ಷ ಯೂನಿಟ್‌ನಷ್ಟು ಹೆಚ್ಚುವರಿ ವಿದ್ಯುತ್ ಈ ಬಾರಿಯ ಮುಂಗಾರು ಅವಧಿಯಲ್ಲಿ ಬಳಕೆಯಾಗುತ್ತಿದೆ.

ಬೇಸಿಗೆ ತೀವ್ರವಾಗಿದ್ದ ಇದೇ ಮಾರ್ಚ್ ತಿಂಗಳ 17ರಂದು 356.77 ದಶಲಕ್ಷ ಯೂನಿಟ್ ವಿದ್ಯುತ್ ಖರ್ಚಾಗಿತ್ತು. ಇದಕ್ಕೆ ಹೋಲಿಸಿದರೆ, ಜುಲೈನಲ್ಲಿ ವಿದ್ಯುತ್ ಬೇಡಿಕೆ ಪ್ರಮಾಣ 34 ದಶಲಕ್ಷ ಯೂನಿಟ್ ಮಾತ್ರ ಕಡಿಮೆಯಿದೆ. ಮಳೆ ಕೊರತೆ ಹೀಗೇ ಮುಂದುವರಿದರೆ, ಮಾರ್ಚ್‌ನಲ್ಲಿದ್ದ ಬೇಡಿಕೆಯನ್ನೂ ಮೀರುವ ಸಾಧ್ಯತೆಯಿದೆ.

ಜೂನ್‌ನಿಂದ ಮುಂಗಾರು ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಆಗಿಲ್ಲ. ಜುಲೈನಲ್ಲೂ ಕೊರತೆಯಾಗಿರುವ ಕಾರಣಕ್ಕೆ ಕೃಷಿ ಪಂಪ್‌ಸೆಟ್ ಮೇಲೆ ರೈತರ ಅವಲಂಬನೆ ಹೆಚ್ಚಾಗಿದೆ.

Publication Date
23/07/2026

**ವಿದ್ಯುತ್ ಉತ್ಪಾದನೆ ಪ್ರಮಾಣ (ದಶಲಕ್ಷ ಯೂನಿಟ್‌ಗಳಲ್ಲಿ)**

| (ದಿನಕ್ಕೆ/ಸರಾಸರಿ) | |
|---|---|
| ಉಷ್ಣ ಸ್ಥಾವರ | 77 |
| ಜಲವಿದ್ಯುತ್ | 32 |
| ಪವನಶಕ್ತಿ | 48.45 |
| ಸೌರಶಕ್ತಿ | 38.4 |

**ರೈತರು ಬೆಳೆಗಳನ್ನು ಉಳಿಸಿಕೊಳ್ಳಲು ಪಂಪ್‌ಸೆಟ್ ಮೊರೆ ಹೋಗಿದ್ದು, ನೀರಾವರಿ ಬಳಕೆಯ ವಿದ್ಯುತ್‌ಗೆ ಬೇಡಿಕೆ ಹೆಚ್ಚಿದೆ. ಕೊರತೆಯಾಗದಂತೆ ಬೆಸ್ಕಾಂ ಕ್ರಮ ಕೈಗೊಂಡಿದೆ**

**ತಿಪ್ಪೇಸ್ವಾಮಿ ಎ.ಕೆ.,** ಬೆಸ್ಕಾಂ ಕಾರ್ಯನಿರ್ವಾಹಕ ಎಂಜಿನಿಯರ್

## 'ಜಲವಿದ್ಯುತ್ ಒಂದನ್ನೇ ನೆಚ್ಚಿಕೊಂಡಿಲ್ಲ'

ಈ ಹಿಂದೆ ಜಲವಿದ್ಯುತ್ ಉತ್ಪಾದನೆ ಮೇಲಿನ ಅವಲಂಬನೆ ಹೆಚ್ಚಿತ್ತು. ಈಗ ಅಂತಹ ಸ್ಥಿತಿ ಇಲ್ಲ. ಉಷ್ಣಸ್ಥಾವರ, ಸೌರಶಕ್ತಿ, ಪವನಶಕ್ತಿ ಸೇರಿದಂತೆ ವಿವಿಧ ಮೂಲಗಳಿಂದ ವಿದ್ಯುತ್ ಪಡೆಯಲಾಗುತ್ತಿದೆ. ಪರಿಸ್ಥಿತಿ ಹೀಗೇ ಮುಂದುವರಿದರೂ, ಮುಂದಿನ ದಿನಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಆಗುವುದಿಲ್ಲ ಎಂದು ಕೆಪಿಟಿಸಿಎಲ್ ದಾವಣಗೆರೆ ವಿಭಾಗದ ಸೂಪರಿಂಟೆಂಡೆಂಟ್ ಎಂಜಿನಿಯರ್ ರೇವಣಸಿದ್ದಪ್ಪ ಜಿ.ಎಂ. ಸ್ಪಷ್ಟಪಡಿಸಿದರು.

ಕೈಗಾ ಅಣು ವಿದ್ಯುತ್ ಘಟಕ, ವೈಟಿಪಿಎಸ್, ಆರ್‌ಟಿಪಿಎಸ್, ಬಿಟಿಪಿಎಸ್ ಉಷ್ಣವಿದ್ಯುತ್ ಘಟಕಗಳು ಅತ್ಯಧಿಕ ಉತ್ಪಾದನೆ ಮಾಡುತ್ತಿದ್ದು, ಮುಂಚೂಣಿಯಲ್ಲಿವೆ. ಕುಸುಮ್–ಸಿ ಯೋಜನೆಯ ಸೌರಶಕ್ತಿ ಘಟಕಗಳು ಉತ್ಪಾದನೆಯಲ್ಲಿ ತಮ್ಮ ಪಾಲು ಹೆಚ್ಚಿಸಿವೆ. ಪವನ ವಿದ್ಯುತ್ ಘಟಕಗಳು ಸಮರ್ಥವಾಗಿ ಕೆಲಸ ಮಾಡುತ್ತಿವೆ. ವಿದ್ಯುತ್ ಕೊರತೆ ಆಗದಂತೆ ಸರ್ಕಾರ ಎಲ್ಲ ಕ್ರಮ ಕೈಗೊಂಡಿದೆ. ರೈತರ ಪಂಪ್‌ಸೆಟ್‌ಗೆ ವಿದ್ಯುತ್ ಒದಗಿಸಲು ಬದ್ಧವಾಗಿದೆ. ಹೀಗಾಗಿ ಆತಂಕಪಡುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

Presented by ಪ್ರಜಾವಾಣಿ

# ಶಿವನಸಮುದ್ರ, ಶಿಂಷಾದಲ್ಲಿ ಜಲವಿದ್ಯುತ್ ಉತ್ಪಾದನೆ ಸ್ಥಗಿತ

• ಸಿದ್ದು ಆರ್.ಜಿ.ಹಳ್ಳಿ

**ಮಂಡ್ಯ:** ಕಾವೇರಿ ಕಣಿವೆಯಲ್ಲಿ ತೀವ್ರ ಮಳೆ ಕೊರತೆಯಿಂದಾಗಿ, ಏಷ್ಯಾದ ಮೊದಲ ಜಲವಿದ್ಯುತ್ ಸ್ಥಾವರ ಶಿವನಸಮುದ್ರ ಮತ್ತು ಶಿಂಷಾ ಕೇಂದ್ರಗಳಲ್ಲಿ ಒಂದೂವರೆ ತಿಂಗಳಿನಿಂದ ಜಲವಿದ್ಯುತ್ ಉತ್ಪಾದನೆ ಸಂಪೂರ್ಣ ಸ್ಥಗಿತಗೊಂಡಿದೆ.

ಈ ಬಾರಿ ಪೂರ್ವ ಮುಂಗಾರು ಮತ್ತು ಮುಂಗಾರು ಮಳೆ ಕೈಕೊಟ್ಟ ಕಾರಣ, ಮಳವಳ್ಳಿ ತಾಲ್ಲೂಕಿನ ಶಿವನಸಮುದ್ರ ಸಮೀಪ ಕಾವೇರಿ ನದಿ ಬತ್ತಿದೆ. ಜಲವಿದ್ಯುತ್ ಉತ್ಪಾದನಾ ಘಟಕಗಳಿಗೆ ನೀರಿನ ಅಭಾವ ತಲೆದೋರಿದೆ. ಇದರಿಂದಾಗಿ ಜೂನ್ 6ರಿಂದಲೇ ಈ ಘಟಕಗಳು ಕೆಲಸ ಸ್ಥಗಿತಗೊಳಿಸಿವೆ.

ಜೂನ್ ಮತ್ತು ಜುಲೈ ತಿಂಗಳಲ್ಲಿ ವಾಡಿಕೆಯಷ್ಟು ಮಳೆಯಾಗದ ಕಾರಣ ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜಸಾಗರ ಜಲಾಶಯಕ್ಕೆ ಒಳಹರಿವು ಕಡಿಮೆಯಾಗಿದೆ. ಇದರಿಂದ ಅಣೆಕಟ್ಟೆಯಲ್ಲಿ ಪ್ರಸ್ತುತ 92.38 ಅಡಿ ಮಾತ್ರ ನೀರಿದ್ದು, ಭರ್ತಿಗೆ ಇನ್ನೂ 32 ಅಡಿ ನೀರು ಬರಬೇಕಿದೆ. ಡ್ಯಾಂ ಭರ್ತಿಯಾಗದ ಕಾರಣ ಕಾವೇರಿ ನದಿಗೆ ನೀರು ಹರಿಸಲು ಸಾಧ್ಯವಾಗುತ್ತಿಲ್ಲ.

**ವಾರ್ಷಿಕ 518 ದಶಲಕ್ಷ ಯುನಿಟ್ ಸಾಮರ್ಥ್ಯ:** ಶಿವನಸಮುದ್ರ ಯೋಜನೆಯಲ್ಲಿ ವಿದ್ಯುತ್ ಉತ್ಪಾದಿಸುವ 10 ಘಟಕಗಳಿದ್ದು, ಇವು ವಾರ್ಷಿಕ 367.92 ದಶಲಕ್ಷ ಯುನಿಟ್ ಉತ್ಪಾದನಾ ಸಾಮರ್ಥ್ಯ ಹೊಂದಿವೆ. ಶಿಂಷಾ ಯೋಜನೆಯಲ್ಲಿ ಎರಡು ಘಟಕಗಳಿದ್ದು, ವಾರ್ಷಿಕವಾಗಿ 150.67 ದಶಲಕ್ಷ ಯುನಿಟ್ ಉತ್ಪಾದನಾ ಸಾಮರ್ಥ್ಯ ಹೊಂದಿವೆ.

ಪ್ರತಿ ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ 35 ಕ್ಯುಸೆಕ್ ನೀರು ಅವಶ್ಯವಿದೆ. 42 ಮೆಗಾವಾಟ್ ವಿದ್ಯುತ್ ಉತ್ಪಾದಿಸಲು ನಿತ್ಯ ಸುಮಾರು 1,400 ಕ್ಯುಸೆಕ್ ನೀರು ಬೇಕಾಗುತ್ತದೆ.

**ಕಡಿಮೆ ಉತ್ಪಾದನೆ :** ಶಿವನಸಮುದ್ರ ಮತ್ತು ಶಿಂಷಾದ ಕೆಲವು ಘಟಕಗಳಲ್ಲಿ ದುರಸ್ತಿ ಕಾರ್ಯ ಬಾಕಿ ಇದ್ದ ಕಾರಣ, ಕಳೆದ ಮೂರ್ನಾಲ್ಕು ವರ್ಷಗಳಿಂದ ನಿಗದಿತ ಸಾಮರ್ಥ್ಯದಷ್ಟು ವಿದ್ಯುತ್ ಉತ್ಪಾದನೆ ಮಾಡಲು ಸಾಧ್ಯವಾಗಿರಲಿಲ್ಲ.

ಶಿವನಸಮುದ್ರದ ಏಳು ಘಟಕಗಳ ದುರಸ್ತಿ ಈಗ ಬಹುತೇಕ ಪೂರ್ಣಗೊಂಡಿದೆ. ಮೂರು ಘಟಕಗಳ ದುರಸ್ತಿ ಮಾತ್ರ ಬಾಕಿಯಿದೆ. ಉಳಿದ ಘಟಕಗಳ ದುರಸ್ತಿ ಕಾರ್ಯ ನಡೆದರೆ ಮಾತ್ರ ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡಲು ಸಾಧ್ಯವಾಗುತ್ತದೆ ಎನ್ನುತ್ತಾರೆ ಎಂಜಿನಿಯರ್‌ಗಳು.



ಮಳವಳ್ಳಿ ತಾಲ್ಲೂಕಿನ ಶಿವನಸಮುದ್ರದ 'ಸರ್ ಕೆ.ಶೇಷಾದ್ರಿ ಅಯ್ಯರ್ ಪವರ್ ಸ್ಟೇಷನ್'ನಲ್ಲಿ ನೀರಿನ ಅಭಾವದಿಂದ ಜಲವಿದ್ಯುತ್ ಉತ್ಪಾದನೆ ಸ್ಥಗಿತಗೊಂಡಿದೆ

**ಶಿವನಸಮುದ್ರ: ವಿದ್ಯುತ್ ಉತ್ಪಾದನೆ ವಿವರ (ದಶಲಕ್ಷ ಯುನಿಟ್‌ಗಳಲ್ಲಿ)**

| ವರ್ಷ | ಉತ್ಪಾದನೆ | ಶೇ. |
|---|---|---|
| 2020-21 | 255.50 | 69.44 |
| 2021-22 | 252.99 | 68.76 |
| 2022-23 | 267.70 | 72.76 |
| 2023-24 | 156.47 | 42.53 |
| 2024-25 | 116.438 | 31.65 |

**ಶಿಂಷಾ: ವಿದ್ಯುತ್ ಉತ್ಪಾದನೆ ವಿವರ (ದಶಲಕ್ಷ ಯುನಿಟ್‌ಗಳಲ್ಲಿ)**

| ವರ್ಷ | ಉತ್ಪಾದನೆ | ಶೇ. |
|---|---|---|
| 2020-21 | 61.00 | 40.48 |
| 2021-22 | 43.91 | 29.14 |
| 2022-23 | 15.70 | 10.42 |
| 2023-24 | 3.62 | 2.40 |
| 2024-25 | 31.104 | 20.64 |

## ಗಗನಚುಕ್ಕಿ, ಭರಚುಕ್ಕಿ ಭಣಭಣ

ಕಾವೇರಿ ನದಿಯು ಶಿವನಸಮುದ್ರದ ಬಳಿ ಎರಡು ಕವಲುಗಳಾಗಿ ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತವನ್ನು ಸೃಷ್ಟಿಸುತ್ತದೆ. ಈ ಬಾರಿ ನೀರಿಲ್ಲದೆ ಜಲಪಾತಗಳೂ ಭಣಗುಡುತ್ತಿವೆ.

ಕಾವೇರಿ ನದಿಯ ನೀರನ್ನು ಸುರಂಗ ಮತ್ತು ದೊಡ್ಡ ಕೊಳವೆಗಳ ಮೂಲಕ ವೇಗವಾಗಿ ಹರಿಸಿ, ಕೆಳಭಾಗದಲ್ಲಿರುವ ಟರ್ಬೈನ್‌ಗಳ ಮೇಲೆ ರಭಸವಾಗಿ ಬೀಳುವಂತೆ ಮಾಡಲಾಗುತ್ತದೆ. ನೀರಿನ ರಭಸಕ್ಕೆ ಟರ್ಬೈನ್‌ಗಳು ಅತ್ಯಂತ ವೇಗವಾಗಿ ತಿರುಗುತ್ತವೆ.

ಜನರೇಟರ್‌ಗೆ ಸಂಪರ್ಕ ಹೊಂದಿರುವ ಟರ್ಬೈನ್‌ಗಳು ತಿರುಗಿದಾಗ, ಜನರೇಟರ್‌ನಲ್ಲಿರುವ ಕಾಂತೀಯ ಕ್ಷೇತ್ರದಿಂದ ಯಾಂತ್ರಿಕ ಶಕ್ತಿಯು ವಿದ್ಯುತ್ ಶಕ್ತಿಯಾಗಿ ಪರಿವರ್ತನೆಯಾಗುತ್ತದೆ.

**ಕೆಆರ್‌ಎಸ್ ಡ್ಯಾಂ ಭರ್ತಿಯಾಗದ ಕಾರಣ ಕಾವೇರಿ ನದಿಗೆ ನೀರು ಹರಿಸುತ್ತಿಲ್ಲ. ನೀರಿನ ಅಭಾವದಿಂದ ಜೂನ್ 6ರಿಂದಲೇ ಜಲವಿದ್ಯುತ್ ಉತ್ಪಾದನೆ ಸ್ಥಗಿತಗೊಂಡಿದೆ**

**ಅನಿತಾ ಎಂ.,** ಕಾರ್ಯಪಾಲಕ ಎಂಜಿನಿಯರ್, ಶಿವನಸಮುದ್ರ ಜಲವಿದ್ಯುತ್ ಕೇಂದ್ರ

# ಜೆನೆರಿಕ್‌ಗೆ ಸುಂಕ: ಭಾಗಶಃ ಪರಿಣಾಮ

## ದೇಶದ ಔಷಧಗಳ ರಫ್ತು ಮೇಲೆ ಪರಿಣಾಮ: ಜಿಟಿಆರ್‌ಐ ಅಂದಾಜು



**ನವದೆಹಲಿ (ಪಿಟಿಐ):** ಜೆನೆರಿಕ್ ಔಷಧಗಳ ಮೇಲಿನ ಆಮದು ಸುಂಕವನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಕಟಿಸಿದ್ದು, ಇದರಿಂದಾಗಿ ಭಾರತದಿಂದ ರಫ್ತಾಗುವ ಔಷಧಗಳ ಮೇಲೆ ಪರಿಣಾಮ ಉಂಟಾಗಬಹುದು ಎಂದು ಜಿಟಿಆರ್‌ಐ ವಿಶ್ಲೇಷಿಸಿದೆ. ಆದರೆ ಪರಿಣಾಮವು ಎಲ್ಲ ಕಂಪನಿಗಳ ಮೇಲೆಯೂ ಒಂದೇ ಬಗೆಯಲ್ಲಿ ಇರಲಿಕ್ಕಿಲ್ಲ ಎಂದು ಅಂದಾಜಿಸಿದೆ.

'ಭಾರತದ ಹಲವು ಜೆನೆರಿಕ್ ಔಷಧಗಳು ಅಮೆರಿಕದಲ್ಲಿ ಅಲ್ಲಿನ ಬ್ರ್ಯಾಂಡೆಡ್ ಔಷಧಗಳ ಬೆಲೆಯ ಏಳರಿಂದ ಹತ್ತು ಪಟ್ಟು ಕಡಿಮೆ ಬೆಲೆಗೆ ಮಾರಾಟವಾಗುತ್ತಿವೆ. ಶೇ 100ರಷ್ಟು ಸುಂಕ ಜಾರಿಗೆ ನಂದ ನಂತರವೂ ಹಲವು ಔಷಧ ಉತ್ಪನ್ನಗಳ ಬೆಲೆಯು ಅಲ್ಲಿನ ಬ್ರ್ಯಾಂಡೆಡ್ ಔಷಧಗಳ ಬೆಲೆಗಿಂತ ಕಡಿಮೆ ಮಟ್ಟದಲ್ಲಿ ಉಳಿಯಬಹುದು. ಅಂದರೆ, ಸುಂಕ ಏರಿಕೆಯಿಂದಾಗಿ ಭಾರತದ ರಫ್ತು ತಕ್ಷಣ ನಿಂತುಹೋಗುವುದಿಲ್ಲ; ಏರಿಕೆಯ ಬಹುತೇಕ ಪಾಲು ಅಮೆರಿಕದ ರೋಗಿಗಳು, ವಿಮಾ ಕಂಪನಿಗಳು ಹಾಗೂ ಅಲ್ಲಿ ಆರೋಗ್ಯಸೇವೆ ಒದಗಿಸುವವರ ಹೆಗಲಿಗೆ ವರ್ಗಾವಣೆ ಆಗುತ್ತದೆ' ಎಂದು ಜಿಟಿಆರ್‌ಐ ವರದಿ ಹೇಳಿದೆ.

ಹೆಚ್ಚಿನ ಬೆಲೆಯ ಜೆನೆರಿಕ್ ಔಷಧಗಳ ಮೇಲೆ ಹಾಗೂ ಬ್ರ್ಯಾಂಡೆಡ್ ಜೆನೆರಿಕ್ ಔಷಧಗಳ ಮೇಲೆ ಜಾಸ್ತಿ ಪರಿಣಾಮ ಉಂಟಾಗುವ ನಿರೀಕ್ಷೆ ಇದೆ. ಈ ಬಗೆಯ ಔಷಧಗಳನ್ನು ಅಮೆರಿಕ-ದಲ್ಲಿಯೇ ತಯಾರು ಮಾಡುವುದು ಹಣಕಾಸಿನ ದೃಷ್ಟಿಯಿಂದ ಹೆಚ್ಚು ಸೂಕ್ತ ಅನ್ನಿಸಬಹುದು ಎಂದು ಅಂದಾಜು ಮಾಡಲಾಗಿದೆ.

'ಪ್ರಸ್ತಾವಿತ ಸುಂಕಗಳು ಭಾರತದ ಪಾಲಿನ ಅತಿದೊಡ್ಡ ಔಷಧ ರಫ್ತು ಮಾರುಕಟ್ಟೆಯ ಮೇಲೆ ಪರಿಣಾಮ ಉಂಟುಮಾಡಬಹುದು' ಎಂದು ಜಿಟಿಆರ್‌ಐ (ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್) ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ.

ಭಾರತವು ಅಮೆರಿಕದ ಮಾರುಕಟ್ಟೆ ಮೇಲಿನ ಅವಲಂಬನೆಯಲ್ಲಿ ಕಡಿಮೆ ಮಾಡಬೇಕು. ಯುರೋಪ್, ಲ್ಯಾಟಿನ್ ಅಮೆರಿಕ, ಆಫ್ರಿಕಾ ಮತ್ತು ಏಷ್ಯಾ ಮಾರುಕಟ್ಟೆಗಳಿಗೆ ರಫ್ತನ್ನು ಹೆಚ್ಚಿಸಬೇಕು ಎಂದು ಅವರು ಸಲಹೆ ನೀಡಿದ್ದಾರೆ.

**ಜೆನೆರಿಕ್ ಔಷಧಗಳು ಅಂದರೆ:** ಇವು ಪೇಟೆಂಟ್ ಇಲ್ಲದ ಔಷಧಗಳು. ಆದರೆ ಮೂಲ ಬ್ರ್ಯಾಂಡೆಡ್ ಔಷಧಗಳಲ್ಲಿ ಇರುವಷ್ಟೇ ಶಕ್ತಿ, ಅಲ್ಲಿ ಇರುವಂತಹ ಔಷಧೀಯ ಗುಣಗಳು ಇವುಗಳಲ್ಲಿಯೂ ಇರುತ್ತವೆ. ಇವುಗಳನ್ನು ಜೆನೆರಿಕ್ ಹೆಸರಿನಲ್ಲಿ ಅಥವಾ ಇನ್ನೊಂದು ಬ್ರ್ಯಾಂಡ್ ಹೆಸರಿನಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುತ್ತದೆ.

### ಭಾರತದಿಂದ ಆಗುವ ರಫ್ತು ಎಷ್ಟು?

- 2025ರಲ್ಲಿ ಭಾರತದಿಂದ 25.8 ಬಿಲಿಯನ್ ಡಾಲರ್ (ಅಂದಾಜು ₹2.48 ಲಕ್ಷ ಕೋಟಿ) ಮೌಲ್ಯದ ಔಷಧಗಳು ರಫ್ತಾಗಿವೆ
- ಈ ಪೈಕಿ ಅಮೆರಿಕಕ್ಕೆ ರಫ್ತಾದ ಔಷಧಗಳ ಪಾಲು ಶೇ 37.7ರಷ್ಟು

### ಸುಂಕ ಏರಿಕೆ: ಟ್ರಂಪ್ ಘೋಷಣೆ

ಆಗಸ್ಟ್ 1ರಿಂದ ಅನ್ವಯ ಆಗುವಂತೆ ಅಮೆರಿಕಕ್ಕೆ ಆಮದಾಗುವ ಎಲ್ಲ ಜೆನೆರಿಕ್ ಔಷಧಗಳ ಮೇಲೆ ಎರಡು ವರ್ಷಗಳ ಅವಧಿಗೆ ಶೂನ್ಯ ಸುಂಕ ಇರಲಿದೆ. ಇದಾದ ನಂತರದಲ್ಲಿ (ಅಂದರೆ 2028ರ ಆಗಸ್ಟ್‌ನಿಂದ) ಶೇ 100ರಷ್ಟು ಸುಂಕ ವಿಧಿಸಲಾಗುತ್ತದೆ ಎಂಧು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಘೋಷಿಸಿದ್ದಾರೆ.

ಶೇ 100ರಷ್ಟು ಆಮದು ಸುಂಕವು ಒಂದು ವರ್ಷ ಜಾರಿಯಲ್ಲಿರಲಿದೆ. ಅದಾದ ನಂತರದಲ್ಲಿ ಆಮದು ಸುಂಕವು ಶೇ 200ಕ್ಕೆ ಹೆಚ್ಚಲಿದೆ ಎಂದು ಅವರು ಹೇಳಿದ್ದಾರೆ.

'ಜೆನೆರಿಕ್ ಔಷಧಗಳ ತಯಾರಿಕೆಯು ಮತ್ತೆ ಅಮೆರಿಕದಲ್ಲಿಯೇ ಶುರುವಾಗಬೇಕು ಎಂಬ ಉದ್ದೇಶದಿಂದ ಹೀಗೆ ಮಾಡಲಾಗುತ್ತಿದೆ. ನಿಗದಿತ ಅವಧಿಯಲ್ಲಿ ಅಮೆರಿಕದಲ್ಲಿ ತಯಾರಿಕಾ ಘಟಕವನ್ನು ಸ್ಥಾಪಿಸದೆ ಇರುವ ಕಂಪನಿಗಳಿಗೆ ದಂಡ ವಿಧಿಸಲಾಗುತ್ತದೆ' ಎಂದು ಟ್ರಂಪ್ ಎಚ್ಚರಿಸಿದ್ದಾರೆ.

Publication Date
23/07/2026

Presented by

## ❖ 'ಜಿಲ್ಲಾ ನ್ಯಾಯಾಧೀಶರ ನಿವೃತ್ತಿ ವಯಸ್ಸನ್ನು 61ಕ್ಕೆ ಏರಿಸಬಹುದೇ?'

ಜಿಲ್ಲಾ ನ್ಯಾಯಾಧೀಶರ ನಿವೃತ್ತಿ ವಯಸ್ಸನ್ನು 61ಕ್ಕೆ ಏರಿಸಲು ಸಾಧ್ಯವೇ ಎಂಬ ಕುರಿತು ಆಯಾ ಹೈಕೋರ್ಟ್‌ಗಳೊಂದಿಗೆ ಸಮಾಲೋಚನೆ ನಡೆಸಿ ನಿರ್ಧಾರ ತೆಗೆದುಕೊಳ್ಳಬೇಕು ಎಂದು ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂ ಕೋರ್ಟ್ ಹೇಳಿದೆ.

ದೇಶದಾದ್ಯಂತ ಜಿಲ್ಲಾ ನ್ಯಾಯಾಧೀಶದ ನಿವೃತ್ತಿ ವಯಸ್ಸನ್ನು 62ಕ್ಕೆ ಏರಿಸುವ ಮೂಲಕ ಏಕರೂಪತೆ ಕಾಯ್ದುಕೊಳ್ಳಬೇಕು ಎಂಬ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ ಮತ್ತು ವಿ. ಮೋಹನ ಅವರ ಪೀಠವು, ಈ ಮಧ್ಯಂತರ ನಿರ್ದೇಶನ ಹೊರಡಿಸಿದೆ.

# ಅಲಿರೇಝಾಗೆ ಚಾಂಪಿಯನ್ ಪಟ್ಟ

## ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್: ಇರಿಗೇಶಿ ಜೊತೆಗೆ ಡ್ರಾ

**ಚೆನ್ನೈ (ಪಿಟಿಐ):** ಏಳನೇ ಹಾಗೂ ಅಂತಿಮ ಸುತ್ತಿನಲ್ಲಿ ಭಾರತದ ಅರ್ಜುನ್ ಇರಿಗೇಶಿ ಜೊತೆ ಡ್ರಾ ಮಾಡಿಕೊಂಡ ಫ್ರಾನ್ಸ್‌ನ ಅಲಿರೇಝಾ ಫಿರೋಝ್‌ಜಾ ಅವರು ಬುಧವಾರ ಚೆನ್ನೈ ಗ್ರ್ಯಾಂಡ್‌ಮಾ-ಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಚಾಂಪಿಯನ್ ಕಿರೀಟ ಧರಿಸಿದರು.

ಅಲಿರೇಝಾ ಅವರು ಟೂರ್ನಿಯಲ್ಲಿ ಅಜೇಯರಾಗುಳಿದು (ಎರಡು ಗೆಲುವು, ಐದು ಡ್ರಾ) ಒಟ್ಟು 4.5 ಪಾಯಿಂಟ್ಸ್ ಕಲೆಹಾಕಿದರು. ಕೊನೆಯ ಸುತ್ತಿನಲ್ಲಿ ಇರಿಗೇಶಿ ಜೊತೆ ಡ್ರಾ ಮಾಡಿಕೊಂಡರೂ ಅಲಿರೇಝಾಗೆ ಪ್ರಶಸ್ತಿ ಖಚಿತವಾಗಿತ್ತು. ಅದನ್ನು ಅವರು 41 ನಡೆಗಳಲ್ಲಿ ಸಾಧಿಸಿದರು. ವಿಜೇತ ಆಟಗಾರನಿಗಿರುವ ₹25 ಲಕ್ಷ ಬಹುಮಾನ ಜೇಬಿಗಿಳಿಸಿದರು.

ಇರಿಗೇಶಿ ಮತ್ತು ರಷ್ಯಾದ ಡಿಮಿಟ್ರಿ ಅಂದ್ರೇಯಿಕಿನ್ ತಲಾ ನಾಲ್ಕು ಪಾಯಿಂಟ್ಸ್ ಪಡೆದರು.

ಆರನೇ ಸುತ್ತಿನ ಕೊನೆಗೆ ಅಲಿರೇಝಾ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿಗಳಾದ ಇರಿಗೇಶಿ ಮತ್ತು ಗ್ರ್ಯಾಂಡ್‌ಮಾಸ್ಟರ್ ನೊದಿರ್ಬೆಕ್ ಅಬ್ದುಸತ್ತಾರೋವ್ ಅವರಿಗಿಂತ ಅರ್ಧ ಪಾಯಿಂಟ್ ಮುಂದಿದ್ದರು.




ಫ್ರಾನ್ಸ್‌ನ ಅಲಿರೇಝಾ ಫಿರೋಝ್‌ಜಾ ಚಿತ್ರ: ಎಂಜೆಡಿ1



ಅಂದ್ರೇಯಿಕಿನ್



ಇರಿಗೇಶಿ

ಗೆದ್ದರೆ ಅಬ್ದುಸತ್ತಾರೋವ್ ಅವರಿಗೂ ಪ್ರಶಸ್ತಿ ಅವಕಾಶವಿತ್ತು. ಆದರೆ ಅವರು ನಿರ್ಣಾಯಕ ಪಂದ್ಯದಲ್ಲಿ ಆಂದ್ರೇಯಿಕಿನ್ ಅವರಿಗೆ 37 ನಡೆಗಳಲ್ಲಿ ಮಣಿದರು. ಉಜ್ಬೇಕ್ ಆಟಗಾರ ಮತ್ತು ಭಾರತದ ನಿಹಾಲ್ ಸರಿನ್ ತಲಾ 3.5 ಪಾಯಿಂಟ್ಸ್ ಕಲೆಹಾಕಿದರು.

ನಿಹಾಲ್ ಸ್ವದೇಶದ ಎಂ.ಪ್ರಾಣೇಶ್ (3.5) ಜೊತೆ ಡ್ರಾ ಮಾಡಿಕೊಂಡರು. ವಿಶ್ವ ಚಾಂಪಿಯನ್ ಡಿ.ಗುಕೇಶ್ (2) ಮತ್ತು ಅಮೆರಿಕದ ಹ್ಯಾನ್ಸ್ ನೀಮನ್ (3) ನಡುವಣ ಪಂದ್ಯ ಡ್ರಾ ಆಯಿತು. ಗುಕೇಶ್ ಕೊನೆಯ ಸ್ಥಾನಗಳಿಸಿದರು.

Publication Date
23/07/2026

Presented by

# ₹7,316 ಕೋಟಿ ಮೊತ್ತದ ಯೋಜನೆಗೆ ಜಲ ಆಯೋಗ ತಗಾದೆ

ಪ್ರಜಾವಾಣಿ ವಾರ್ತೆ

ಕೃಷಿ ಸಿಂಚಾಯಿ

**ನವದೆಹಲಿ:** ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಅನುದಾನ ಕೋರಿದ್ದ ನಾಲ್ಕು ನೀರಾವರಿ ಯೋಜನೆಗಳ ₹7,316 ಕೋಟಿ ಮೊತ್ತದ ಪ್ರಸ್ತಾವಗಳಿಗೆ ಕೇಂದ್ರ ಜಲ ಆಯೋಗ ತಗಾದೆ ಎತ್ತಿದೆ.

₹11,122 ಕೋಟಿ ಮೊತ್ತದ ಆರು ನೀರಾವರಿ ಯೋಜನೆಗಳಿಗೆ ಕೇಂದ್ರದ ಅನುದಾನ ನೀಡುವಂತೆ ಕರ್ನಾಟಕ ಜಲಸಂಪನ್ಮೂಲ ಇಲಾಖೆಯು ಕೇಂದ್ರ ಜಲಶಕ್ತಿ ಸಚಿವಾಲಯಕ್ಕೆ 2025ರ ಫೆಬ್ರುವರಿಯಲ್ಲಿ ಪ್ರಸ್ತಾವ ಸಲ್ಲಿಸಿತ್ತು. ಈ ಯೋಜನೆಗಳ ತಾಂತ್ರಿಕ ಮೌಲ್ಯಮಾಪನ ನಡೆಸುವಂತೆ ಜಲ ಆಯೋಗಕ್ಕೆ ಜಲಶಕ್ತಿ ಸಚಿವಾಲಯ ಸೂಚಿಸಿತ್ತು. ಆಯೋಗದ ಸಲಹಾ ಸಮಿತಿಯು ಸೋಂತಿ ಏತ ನೀರಾವರಿ ಯೋಜನೆಯ ಪರಾಮರ್ಶೆ ನಡೆಸಿ ಪರಿಷ್ಕೃತ ಯೋಜನಾ ಮೊತ್ತಕ್ಕೆ ಒಪ್ಪಿಗೆ ಕೊಟ್ಟಿದೆ. ಮಲಪ್ರಭಾ ಕಾಲುವೆ ಆಧುನಿಕರಣಕ್ಕೆ ಪೂರ್ವ ಕಾರ್ಯಸಾಧ್ಯತಾ ವರದಿ ತಯಾರಿಸಲು ಜಲ ಆಯೋಗ ಒಪ್ಪಿದೆ.

ತುಂಗಾಭದ್ರಾ ಎಡದಂಡೆ ಕಾಲುವೆ ಪ್ರಸ್ತಾವದ ಬಗ್ಗೆ ಸಲಹಾ ಸಮಿತಿಯು ಕೆಲವೊಂದು ಅವಲೋಕನಗಳನ್ನು ಮಾಡಿ ಯೋಜನಾ ಪ್ರಾಧಿಕಾರದಿಂದ ವಿವರಣೆ ಕೇಳಿದೆ. ಘಟಪ್ರಭಾ ಬಲದಂಡೆ ಮುಖ್ಯ ಕಾಲುವೆ ಆಧುನೀಕರಣ ಪ್ರಸ್ತಾವಕ್ಕೂ ಜಲ ಆಯೋಗ ಆಕ್ಷೇಪ ವ್ಯಕ್ತಪಡಿಸಿದೆ. ಬೆಣ್ಣಿಹಳ್ಳ ನದಿ ಪ್ರವಾಹ ನಿಯಂತ್ರಣ ಯೋಜನೆಯ ಪ್ರಸ್ತಾವದಲ್ಲಿ ಹಲವು ಲೋಪಗಳಿವೆ ಎಂದು ಆಯೋಗ ಅಭಿಪ್ರಾಯಪಟ್ಟಿದೆ. ಜತೆಗೆ, ಪ್ರಸ್ತಾವವನ್ನು ರಾಜ್ಯ ಸರ್ಕಾರಕ್ಕೆ ವಾಪಸ್ ಕಳುಹಿಸಿದೆ.

**ಯಾವೆಲ್ಲ ಯೋಜನೆಗಳು**

| ಯೋಜನೆ | ಜಿಲ್ಲೆ | ನೀರಾವರಿ ಅನುಕೂಲ (ಹೆಕ್ಟೇರ್) | ಮೊತ್ತ (₹ಕೋಟಿಗಳಲ್ಲಿ) |
|---|---|---|---|
| ಸೋಂತಿ ಏತ ನೀರಾವರಿ | ಕಲಬುರ್ಗಿ, ಯಾದಗಿರಿ | 16,000 | ₹804 |
| ಇಂಡಿ ಕಾಲುವೆ | ವಿಜಯಪುರ | 16,000 | ₹2,666 |
| ಬೆಣ್ಣಿಹಳ್ಳ ನದಿ ಪ್ರವಾಹ ನಿಯಂತ್ರಣ | ಧಾರವಾಡ | - | ₹1,610 |
| ಮಲಪ್ರಭಾ ಕಾಲುವೆ ಆಧುನೀಕರಣ | ಧಾರವಾಡ, ಬಾಗಲಕೋಟೆ, ಬೆಳಗಾವಿ, ಗದಗ | 44,457 | ₹3,000 |
| ಘಟಪ್ರಭಾ ಬಲದಂಡೆ ಕಾಲುವೆ | ಬೆಳಗಾವಿ, ಬಾಗಲಕೋಟೆ | 25,000 | ₹1,596 |
| ತುಂಗಭದ್ರಾ ಎಡದಂಡೆ ಕಾಲುವೆ | ಕೊಪ್ಪಳ, ರಾಯಚೂರು | 96,440 | ₹1,444 |



## ❖ 2026-27ನೇ ಶೈಕ್ಷಣಿಕ ಸಾಲಿನಿಂದಲೇ ಅನ್ವಯ, ಒಳಮೀಸಲಾತಿಗೂ ಅವಕಾಶ: 'ಅತಿಥಿ'ಗಳ ನೇಮಕಕ್ಕೂ ಮೀಸಲಾತಿ

- ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಇದೇ ಮೊದಲ ಬಾರಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಮೀಸಲಾತಿ ಜಾರಿಗೊಳಿಸಲಾಗಿದ್ದು, ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಒಳಮೀಸಲಾತಿ ಅನ್ವಯಿಸಲಾಗಿದೆ.
- ಇದುವರೆಗೂ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಜಾತಿ ಆಧಾರಿತ ಮೀಸಲಾತಿ ಇರಲಿಲ್ಲ. ಅಂಗವಿಕಲರು, ಮಹಿಳೆಯರಿಗೆ ಆದ್ಯತೆ ನೀಡಲಾಗುತ್ತಿತ್ತು. 2026-27ನೇ ಶೈಕ್ಷಣಿಕ ಸಾಲಿನಿಂದಲೇ ಜಾತಿ ಆಧಾರಿತ ಮೀಸಲಾತಿ (ಶೇ.50) ಅಳವಡಿಸಿಕೊಂಡು ನೇಮಕಾತಿ ಮಾಡಲು ಉನ್ನತ ಶಿಕ್ಷಣ ಇಲಾಖೆ ಮುಂದಾಗಿದೆ.

# ಭಾರತದ ಲವ್ಲಿನಾ ನೇರ ಸೆಮಿಫೈನಲ್‌ಗೆ

## ಗ್ಲಾಸ್ಗೊ ನಗರದಲ್ಲಿ ಕ್ರೀಡಾಕೂಟಕ್ಕೆ ಚಾಲನೆ ಪದಕ ಖಚಿತಪಡಿಸಿಕೊಂಡ ಬಾಕ್ಸರ್

ಕಾಮನ್‌ವೆಲ್ತ್ ಗೇಮ್ಸ್
ಗ್ಲಾಸ್ಗೊ 2026



ಲವ್ಲಿನಾ ಬೊರ್ಗೊಹೈನ್

ಗ್ಲಾಸ್ಗೊ (ಪಿಟಿಐ): ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಲವ್ಲಿನಾ ಬೊರ್ಗೊಹೈನ್ ಅವರು ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಭಾರತಕ್ಕೆ ಮೊದಲ ಪದಕ ಖಚಿತಪಡಿಸಿಕೊಂಡಿದ್ದಾರೆ. ಮಹಿಳೆಯರ ಬಾಕ್ಸಿಂಗ್ 75 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಲಿರುವ ಅವರು ನೇರವಾಗಿ ಸೆಮಿಫೈನಲ್‌ಗೆ 'ಬೈ ಪಡೆದಿರುವುದರಿಂದ ಕನಿಷ್ಠ ಕಂಚಿನ ಪದಕ ಖಾತರಿಯಾಗಿದೆ.

ಈ ಕ್ರೀಡೆಗಳ ಬಾಕ್ಸಿಂಗ್ ಸ್ಪರ್ಧೆಗಳು ಶುಕ್ರವಾರ ಆರಂಭವಾಗಲಿವೆ. 75 ಕೆ.ಜಿ. ವಿಭಾಗದಲ್ಲಿ ಐವರಷ್ಟೇ ಕಣದಲ್ಲಿದ್ದಾರೆ. ಸೆಮಿಫೈನಲ್ ತಲುಪಿದವರಿಗೆ ಪದಕ ಖಚಿತ. ಲವ್ಲಿನಾ ಜುಲೈ 31ರಂದು ನಡೆಯಲಿರುವ ಸೆಮಿಫೈನಲ್‌ನಲ್ಲಿ ತುವಾಲು ದೇಶದ ತಾಫಕಿ ಅವರನ್ನು ಎದುರಿಸಲಿದ್ದಾರೆ. ಇದು 28 ವರ್ಷದ ಭಾರತದ ಬಾಕ್ಸರ್‌ಗೆ ಈ ಕ್ರೀಡೆಗಳಲ್ಲಿ ಮೊದಲ ಪದಕವಾಗಲಿದೆ.

ಅಸ್ಸಾಮಿನ ಬಾಕ್ಸರ್ ಈ ಹಿಂದೆ ಒಲಿಂಪಿಕ್ ಕ್ರೀಡೆಗಳಲ್ಲಿ, ವಿಶ್ವ ಚಾಂಪಿಯನ್‌ಷಿಪ್, ಏಷ್ಯನ್ ಗೇಮ್ಸ್ ಮತ್ತು ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಪದಕಗಳನ್ನು ಗೆದ್ದಿದ್ದಾರೆ.

**ರೆಯಾನ್‌ಗೆ ಸೋನೊವಾಲ್ ಆಘಾತ:** ಭಾರತದ ಪುತುಲ್ ಸೋನೊವಾಲ್ ಅವರು ಗುರುವಾರ ಕಾಮನ್‌ವೆಲ್ತ್ ಕ್ರೀಡಾಕೂಟದ ಲಾನ್ ಬೌಲ್ಸ್ ಪುರುಷರ ಸಿಂಗಲ್ಸ್‌ನಲ್ಲಿ ಮಾಜಿ ವಿಶ್ವ ಚಾಂಪಿಯನ್ ರೆಯಾನ್ ಬೆಸ್ಟರ್ ಅವರಿಗೆ ಟೈಬ್ರೇಕ್‌ನಲ್ಲಿ ಆಘಾತ ನೀಡಿದರು.

ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಪದಾರ್ಪಣೆ ಮಾಡಿದ ಸೋನೊವಾಲ್ ಮೊದಲ ಗೇಮ್ ಅನ್ನು 5-4 ರಿಂದ ಗೆದ್ದುಕೊಂಡರು. ಆದರೆ, ಎರಡನೇ ಗೇಮ್‌ನಲ್ಲಿ ಕೆನಡಾದ ಬೆಸ್ಟರ್ 7-3ರಿಂದ ಮೇಲುಗೈ ಸಾಧಿಸಿದ್ದರಿಂದ ಪಂದ್ಯ ಟೈಬ್ರೇಕ್‌ನತ್ತ ಸಾಗಿತು. ಅಲ್ಲಿ ಅಸ್ಸಾಂನ ಸೋನೊ ವಾಲ್ ಗೆಲುವಿನ ನಗೆ ಬೀರಿ ದರು. ಏಷ್ಯನ್ ಚಾಂಪಿಯನ್ ಆಗಿರುವ ಅವರು ಎರಡನೇ ಪಂದ್ಯದಲ್ಲಿ ಫಾಕ್‌ಲ್ಯಾಂಡ್ ದ್ವೀಪದ ಅಲೆಕ್ಸಾಂಡರ್ ಅವರನ್ನು ಎದುರಿಸಲಿದ್ದಾರೆ.

ಭಾರತದ ರೂಪಾ ರಾಣಿ ಟಿರ್ಕಿ (ಲೀಡ್) ಮತ್ತು ಪಿಂಕಿ ಸಿಂಗ್ (ಸ್ಕಿಪ್) ಜೋಡಿಯು ಮಹಿಳೆಯರ ಡಬಲ್ಸ್‌ನಲ್ಲಿ ಮಾಲ್ಟಾ ವಿರುದ್ಧ ಆರಂಭಿಕ ಪಂದ್ಯವನ್ನು ಟೈಬ್ರೇಕ್‌ನಲ್ಲಿ ಗೆದ್ದುಕೊಂಡಿತು.

'ಬಿ' ವಿಭಾಗದ ಆರಂಭಿಕ ಸುತ್ತಿನ ಪಂದ್ಯದಲ್ಲಿ ಭಾರತದ ಜೋಡಿಯು ಮೊದಲ ಗೇಮ್‌ನಲ್ಲಿ 7-1 ಅಂತರದ ಗೆಲುವಿನೊಡನೆ 1-0 ಮುನ್ನಡೆ ಪಡೆಯಿತು. ಆದರೆ, ಎರಡನೇ ಗೇಮ್‌ನಲ್ಲಿ ಮಾಲ್ಟಾದ ರೆಬೆಕಾ ಲೂಯಿಸ್ ರಿಕ್ಸನ್ ಮತ್ತು ಕಾನಿ-ಲೀ ರಿಕ್ಸನ್ ತಿರುಗಿಬಿದ್ದು, 3-4ರಿಂದ ಹಿಡಿತ ಸಾಧಿಸಿದರು.



ಗ್ಲಾಸ್ಗೊ ನಗರದಲ್ಲಿ ಗುರುವಾರ ತಡರಾತ್ರಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದ 23ನೇ ಆವೃತ್ತಿಯ ಉದ್ಘಾಟನಾ ಸಮಾರಂಭದಲ್ಲಿ ಭಾರತದ ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಮತ್ತು ಇತರ ಕ್ರೀಡಾಪಟುಗಳು ಪಾಲ್ಗೊಂಡರು ಪಿಟಿಐ ಚಿತ್ರ

### ಮುಖ್ಯಾಂಶಗಳು

- ಗುರುವಾರ ತಡರಾತ್ರಿ ಕ್ರೀಡಾಕೂಟಕ್ಕೆ ಚಾಲನೆ
- ಭಾರತದ ಧ್ವಜಧಾರಿಯಾಗಿ ಮೀರಾಬಾಯಿ ಚಾನು

ಟೈ ಬ್ರೇಕ್‌ನಲ್ಲಿ ಭಾರತದ ಆಟಗಾರ್ತಿಯರು ತಮ್ಮ ಎದುರಾಳಿ ಗಳಿಗಿಂತ ಹಿನ್ನಡೆಯಲ್ಲಿದ್ದರು. ಆದರೆ, ಪಿಂಕಿ ಕೊನೆಯ ಎಸೆತದಲ್ಲಿ ಅಮೋಘ ಪ್ರದರ್ಶನ ನೀಡಿ ಪಂದ್ಯವನ್ನು ಗೆದ್ದುಕೊಟ್ಟರು.

ಟಿರ್ಕಿ ಮತ್ತು ಪಿಂಕಿ ಅವರಿಬ್ಬರೂ 2022ರ ಬರ್ಮಿಂಗ್‌ಹ್ಯಾಮ್ ಆವೃತ್ತಿಯಲ್ಲಿ ಚಿನ್ನ ಗೆದ್ದ ಬೌಲ್ಸ್‌ನ ಮಹಿಳಾ ಫೋರ್ಸ್ ತಂಡದ ಭಾಗವಾಗಿದ್ದರು. ಆದರೆ, ಗ್ಲಾಸ್ಗೊ ಕೂಟದಲ್ಲಿ ಪುರುಷ ಮತ್ತು ಮಹಿಳಾ ಫೋರ್ಸ್ ಸ್ಪರ್ಧೆಯನ್ನು ಹೊರಗಿಡಲಾಗಿದೆ. ಪುರುಷರ ಸಿಂಗಲ್ಸ್, ಡಬಲ್ಸ್ ಹಾಗೂ ಮಹಿಳಾ ಸಿಂಗಲ್ಸ್, ಡಬಲ್ಸ್ ಸ್ಪರ್ಧೆಗಳನ್ನು ಮಾತ್ರ ಸೇರಿಸಲಾಗಿದೆ.

### ಜುಡೊ ಸ್ಪರ್ಧಿ ಅರುಣ್ ಅಮಾನತು

ನವದೆಹಲಿ (ಪಿಟಿಐ): ಭಾರತದ ಜೂಡೊ ಪಟು ಅರುಣ್ ಕುಮಾರ್ ಅವರು ಸ್ಪರ್ಧಾಪೂರ್ವ ಡೋಪಿಂಗ್ ಪರೀಕ್ಷೆಯಲ್ಲಿ ಸಿಲುಕಿದ್ದು, ಗ್ಲಾಸ್ಗೊದ ಕಾಮನ್‌ವೆಲ್ತ್ ಕ್ರೀಡಾಕೂಟದಿಂದ ಹೊರಬಿದ್ದಿದ್ದಾರೆ.

73 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸುವ ಅವರು ಕಳೆದ ತಿಂಗಳು ಕ್ವಿಂಗ್‌ದಾವೊ ಗ್ರ್ಯಾನ್‌ಪ್ರಿಯಲ್ಲಿ ಪಾಲ್ಗೊಂಡಿದ್ದರು. ಅವರಿಂದ ಪಡೆದ ಮಾದರಿಯಲ್ಲಿ ಅನಬಾಲಿಕ್ ಸ್ಟೆರಾಯಿಡ್ ಅಂಶ ಕಂಡುಬಂದ ಕಾರಣ ರಾಷ್ಟ್ರೀಯ ಉದ್ದೀಪನ-ಮದ್ದು ನಿಗ್ರಹ ಘಟಕ ಅವರನ್ನು ತಾತ್ಕಾಲಿಕವಾಗಿ ಅಮಾನತು ಮಾಡಿದೆ.

'ಅಮಾನತಿನ ಮಾಹಿತಿ ತಲುಪಿದೆ. ಅವರನ್ನು ಕೈಬಿಡಲಾಗಿದೆ' ಎಂದು ಫೆಡರೇಷನ್‌ನ ಮೂಲವೊಂದು ಪಿಟಿಐಗೆ ತಿಳಿಸಿವೆ.

**ವೇಟ್‌ಲಿಫ್ಟರ್‌ಗೆ ಗಾಯ:** ಡೋಪಿಂಗ್ ನಿಯಮಾವಳಿಯನ್ನು ಉಲ್ಲಂಘಿಸಿದ್ದಕ್ಕಾಗಿ ಭಾರತದ ವೇಟ್‌ಲಿಫ್ಟಿಂಗ್ ತಂಡದಲ್ಲಿ ಸ್ಪರ್ಧಿಗಳು ಕಡಿಮೆಯಾಗಿದ್ದಾರೆ. ಮೊದಲು 16 ಮಂದಿ ಕೋಟಾ ಇತ್ತು. ಅದರಲ್ಲಿ ಮೂವರು ಡೋಪಿಂಗ್ ನಲ್ಲಿ ಸಿಕ್ಕಿಕೊಂಡಿದ್ದರು. ಇದೀಗ ದಿಲ್ ಭಾಗ್ ಸಿಂಗ್ ಅವರು ಬೆನ್ನುಹುರಿ ಗಾಯದಿಂದಾಗಿ ಹೊರನಡೆದಿದ್ದಾರೆ.

Publication Date
24/07/2026

Presented by

## ❖ ಪ್ಯಾರಾ ಅಥ್ಲೆಟ್ ಶಿಲ್ಪಾಗೆ ₹5 ಲಕ್ಷ ಪ್ರೋತ್ಸಾಹ ಧನ

- ಸ್ಕಾಟ್ಲೆಂಡ್‌ನ ಗ್ಲಾಸ್ಗೊದಲ್ಲಿ ನಡೆದಿರುವ ಕಾಮನ್‌ವೆಲ್ತ್ ಕ್ರೀಡಾ ಕೂಟದಲ್ಲಿ ಪಾಲ್ಗೊಂಡಿರುವ ಪ್ಯಾರಾ ಅಥ್ಲೆಟ್ ಶಿಲ್ಪಾ ಅವರಿಗೆ ರಾಜ್ಯ ಸರ್ಕಾರ ₹5 ಲಕ್ಷ ಪ್ರೋತ್ಸಾಹ ಧನ ಘೋಷಿಸಿದೆ.
- ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿನ ಕಂಚಗಾರ ಕೊಪ್ಪಲಿನ ಕೆ.ಎಸ್. ಶಿಲ್ಪಾ ಎಫ್-57 ವಿಭಾಗದಲ್ಲಿ ಶಾಟ್‌ಪಟ್‌ನಲ್ಲಿ ಸ್ಪರ್ಧಿಸಿದ್ದು ಅವರಿಗೆ ಕ್ರೀಡಾಪಟುಗಳಿಗೆ ನೀಡಲಾಗುವ ಪ್ರೋತ್ಸಾಹ ಧನ ಮಂಜೂರು ಮಾಡಿ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ಗುರುವಾರ ಆದೇಶಿಸಿದ್ದಾರೆ.
- ಶಿಲ್ಪಾ ಸಾಧನೆ ಕುರಿತು 'ಪ್ರಜಾವಾಣಿ' ಕ್ರೀಡಾಪುಟದಲ್ಲಿ ಗುರುವಾರದ ಸಂಚಿಕೆಯಲ್ಲಿ ವರದಿ ಪ್ರಕಟವಾಗಿತ್ತು.
- ಬೆಂಗಳೂರಿನ ಲಾಂಗ್ ಜಂಪ್ ಅಥ್ಲೀಟ್ ಲೋಕೇಶ್ ಸತ್ಯನಾಥನ್ ಅವರಿಗೂ ₹ 5 ಲಕ್ಷ ಆರ್ಥಿಕ ನೆರವು ನೀಡುವುದಾಗಿ ಪರಮೇಶ್ವರ್ ತಿಳಿಸಿದ್ದಾರೆ.

## ❖ ಮತ್ತೆ 100 ಡಾಲರ್ ದಾಟಿದ ಕಚ್ಚಾ ತೈಲ

- ಪಶ್ಚಿಮ ಏಷ್ಯಾ ಸಂಘರ್ಷದ ಹೆಚ್ಚಳದಿಂದ ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಮತ್ತೆ ಪ್ರತಿ ಬ್ಯಾರಲ್ 100 ಡಾಲರ್ ದಾಟಿದೆ. ಮೇ ತಿಂಗಳಿನಲ್ಲಿ ಬ್ಯಾರಲ್ ದರ 100 ಡಾಲರ್ ಆಗಿತ್ತು.
- ಗುರುವಾರ ಒಂದೇ ದಿನ ಪ್ರತಿ ಬ್ಯಾರಲ್ ಕಚ್ಚಾ ತೈಲ ದರವು ಶೇ 6.3ರಷ್ಟು ಏರಿಕೆಯಾಗಿ, ಬ್ಯಾರಲ್ ದರ 100.41 ಡಾಲರ್‌ಗೆ ತಲುಪಿದೆ.
- ಸಂಘರ್ಷಕ್ಕೂ ಮುನ್ನ 72 ಡಾಲರ್‌ಗಿಂತ ಕಡಿಮೆ ಇತ್ತು. ವರದಿ ಸಿದ್ಧಪಡಿಸುವ ಹೊತ್ತಿಗೆ ಬ್ಯಾರಲ್ ಕಚ್ಚಾ ತೈಲದ ದರವು 100.53 ಡಾಲರ್ ಆಗಿತ್ತು.
- ಷೇರು ಸೂಚ್ಯಂಕ ಇಳಿಕೆ: ಕಚ್ಚಾ ತೈಲ ದರ ಏರಿಕೆಯು ದೇಶದ ಷೇರುಪೇಟೆ ಸೂಚ್ಯಂಕಗಳ ಇಳಿಕೆಗೆ ಒಂದು ಕಾರಣವಾಗಿದೆ.
- ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 363 ಅಂಶ ಇಳಿಕೆಯಾಗಿ, 76,391ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 126 ಅಂಶ ಕಡಿಮೆಯಾಗಿ 23,869ಕ್ಕೆ ಕೊನೆಗೊಂಡಿದೆ.

Dr. Rajkumar IAS/KAS Academy

## ಪೂರ್ವಾನುಮತಿ ಅಗತ್ಯ: ಸುಪ್ರೀಂ ಕೋರ್ಟ್ ಆದೇಶ

# ಕಲಾಪದ ವಿಡಿಯೊ ಪೋಸ್ಟ್‌ಗೆ ನಿಷೇಧ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ಪ್ರಧಾನ ಕಾರ್ಯದರ್ಶಿ ಅಥವಾ ಹೈಕೋರ್ಟ್‌ಗಳ ರಿಜಿಸ್ಟ್ರಾರ್ ಜನರಲ್‌ಗಳ ಪೂರ್ವಾನುಮತಿ ಇಲ್ಲದೆ ನ್ಯಾಯಾಲಯದ ಕಲಾಪಗಳ ನೇರ ಪ್ರಸಾರದ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮ ಮತ್ತು ಡಿಜಿಟಲ್ ವೇದಿಕೆಗಳಲ್ಲಿ ಪೋಸ್ಟ್, ಮರು ಪೋಸ್ಟ್ ಹಾಗೂ ಅಪ್‌ಲೋಡ್ ಮಾಡುವುದಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ನಿಷೇಧ ಹೇರಿದೆ.

ಈ ಆದೇಶದಿಂದ, ಕಾನೂನು ಬದ್ಧವಾಗಿ ವರದಿಗಾರಿಕೆ ಮಾಡುವವರ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

ನ್ಯಾಯಾಲಯದ ಕಲಾಪಗಳ ನೇರ ಪ್ರಸಾರದ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ದುರುಪಯೋಗ ಪಡಿಸಿಕೊಳ್ಳುತ್ತಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ ಮತ್ತು ವಿ. ಮೋಹನಾ ಅವರನ್ನೊಳಗೊಂಡ ಪೀಠವು ಎಲ್ಲ ಹೈಕೋರ್ಟ್‌ಗಳು, ಕೇಂದ್ರ ಸರ್ಕಾರ ಹಾಗೂ ಮೆಟಾ, 'ಎಕ್ಸ್' ಸೇರಿದಂತೆ ಪ್ರಮುಖ ಸಾಮಾಜಿಕ ಮಾಧ್ಯಮ ಸಂಸ್ಥೆಗಳಿಗೆ ನೋಟಿಸ್ ಜಾರಿ ಮಾಡಿದೆ.


ಅನುಮತಿ ಇಲ್ಲದೆ ನ್ಯಾಯಾಲಯದ ಕಲಾಪಗಳ ವಿಡಿಯೊಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು, ಮಾರ್ಪಡಿಸುವುದು, ಪ್ರಸಾರ ಮಾಡುವುದನ್ನು ನಿಷೇಧಿಸಲಾಗಿದೆ ಎಂದು ಪೀಠವು ಮಧ್ಯಂತರ ಆದೇಶದಲ್ಲಿ ತಿಳಿಸಿದೆ.

ಅರ್ಜಿದಾರರ ಪರವಾಗಿ ಹಾಜರಿದ್ದ ಹಿರಿಯ ವಕೀಲ ವಿಕಾಸ್ ಸಿಂಗ್, 'ನ್ಯಾಯಾಲಯದ ಕಲಾಪಗಳಲ್ಲಿ ಪಾರದರ್ಶಕತೆ ಮತ್ತು ಮುಕ್ತ ನ್ಯಾಯದಾನವನ್ನು ಉತ್ತೇಜಿಸಲು ನೇರ ಪ್ರಸಾರವನ್ನು ಪರಿಚಯಿಸಲಾಗಿದೆ. ಆದರೆ, ಇದಕ್ಕೆ ಯಾವುದೇ ನಿಯಂತ್ರಣ ಕ್ರಮಗಳು ಇಲ್ಲ. ಸಂಚಲನ ಸೃಷ್ಟಿಸಲು ಮತ್ತು ಹಣ ಗಳಿಕೆ ಉದ್ದೇಶದಿಂದ ನೇರ ಪ್ರಸಾರವನ್ನು ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ' ಎಂದು ಗಮನ ಸೆಳೆದರು.

'ನ್ಯಾಯಾಲಯದ ನಡಾವಳಿಗಳನ್ನು ತಿರುಚಲು, ಎಡಿಟ್ ಮಾಡಿದ ವಿಡಿಯೊ ತುಣುಕುಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೆ ಮಾಡಲಾಗುತ್ತಿದೆ' ಎಂದು ತಿಳಿಸಿದರು.

ಸಿಂಗ್ ಅವರ ಮಾತಿಗೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಸಹಮತ ವ್ಯಕ್ತಪಡಿಸಿದರು.

### 'ನನ್ನ ಹೇಳಿಕೆಯನ್ನೇ ತಿರುಚಲಾಗಿದೆ'



'ಕೆಲವೊಮ್ಮೆ ನನ್ನ ಹೇಳಿಕೆಗಳನ್ನು ಸಹ ತಿರುಚಿ ಮುದ್ರಣ ಮಾಧ್ಯಮದಲ್ಲಿ ಪ್ರಕಟಿಸಲಾಗಿದೆ' ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಬೇಸರ ವ್ಯಕ್ತಪಡಿಸಿದ್ದಾರೆ.

'ನೇರ ಪ್ರಸಾರದ ಮಾರ್ಗಸೂಚಿಗಳ ಅನುಷ್ಠಾನದ ಕುರಿತು ಹೈಕೋರ್ಟ್‌ಗಳು ವರದಿ ಸಲ್ಲಿಸಬೇಕು. ಸುರಕ್ಷತಾ ಕ್ರಮಗಳನ್ನು ಜಾರಿಗೆ ತರಲು ನೋಡಲ್ ಸಂಸ್ಥೆಯನ್ನು ಕೇಂದ್ರ ಸರ್ಕಾರವು ಗೊತ್ತುಪಡಿಸಬೇಕು' ಎಂದು ನಿರ್ದೇಶನ ನೀಡಿದ್ದಾರೆ.

### ❖ ಬಿಪಿಎಲ್: ಆಹಾರ ಸಚಿವಕೆ.ಎಚ್. ಮುನಿಯಪ್ಪ ಮಾಹಿತಿ: ಆದಾಯ ಮಿತಿ ₹3 ಲಕ್ಷಕ್ಕೆ ಏರಿಕೆ

- 'ಬಿಪಿಎಲ್ ಕಾರ್ಡ್ ಪಡೆಯಲು ರಾಜ್ಯ ಸರ್ಕಾರ ನಿಗದಿಪಡಿಸಿದ್ದ ₹1.20 ಲಕ್ಷದ ವಾರ್ಷಿಕ ಆದಾಯ ಮಿತಿಯನ್ನು ಆಡಳಿತ ಸುಧಾರಣಾ ಆಯೋಗದ ಶಿಫಾರಸಿನಂತೆ ₹3 ಲಕ್ಷಕ್ಕೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.
- ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆಯ ನಂತರ ಈ ಕುರಿತು ಅವರು ಮಾಹಿತಿ ನೀಡಿದರು.
- 'ಕೇಂದ್ರ ಸರ್ಕಾರದ ಮಾನದಂಡಗಳ ಅನ್ವಯ ಪಡಿತರ ಕಾರ್ಡ್‌ಗಳ ಪರಿಶೀಲನಾ ಕಾರ್ಯ ನಡೆಯುತ್ತಿದೆ. ಯಾವ ಕಾರ್ಡನ್ನೂ ರದ್ದು ಮಾಡುವುದಿಲ್ಲ. ಎಪಿಎಲ್‌ಗೆ ಬದಲಾಯಿಸುತ್ತೇವೆ. ಆದಾಯ ಮಿತಿ ಏರಿಕೆ ಜಾರಿಯಾದ ನಂತರ ಅಂತಹ ಫಲಾನುಭವಿಗಳು ಮತ್ತೆ ಬಿಪಿಎಲ್ ಕಾರ್ಡ್ ಪಡೆಯಬಹುದು' ಎಂದರು.

- 'ಇಂದಿರಾ ಕಿಟ್ ವಿತರಣೆ ಟೆಂಡರ್ ಅಂತಿಮ ಹಂತದಲ್ಲಿದ್ದು, ಮುಂದಿನ ಎರಡು ತಿಂಗಳಲ್ಲಿ ಕಿಟ್ ವಿತರಿಸಲಾಗುವುದು. ಅದಕ್ಕಾಗಿ ₹6,000 ಕೋಟಿ ವ್ಯಯಿಸಲಾಗುತ್ತಿದೆ. ಅನ್ನಭಾಗ್ಯ ಯೋಜನೆ ಅಡಿ ರಾಜ್ಯದ ಸುಮಾರು 4.42 ಕೋಟಿ ಫಲಾನುಭವಿಗಳಿಗೆ ತಲಾ 10 ಕೆ.ಜಿ ಧಾನ್ಯ ವಿತರಣೆ ಮಾಡುತ್ತಿದ್ದೇವೆ. ಕಾನೂನು ಮಾಪನಶಾಸ್ತ್ರ ಇಲಾಖೆಯ ಮೂಲಕ ತೂಕ ಮತ್ತು ಅಳತೆಯ ತಪಾಸಣೆ ಮಾಡಲು 33 ವಾಹನಗಳನ್ನು ಇಲಾಖೆಗೆ ಹಂಚಿಕೆ ಮಾಡಲಾಗಿದೆ. ಕಳೆದ ಮೂರು ವರ್ಷದಲ್ಲಿ ಸುಮಾರು ₹250 ಕೋಟಿ ರಾಜಸ್ವ ಸಂಗ್ರಹ ಮಾಡಲಾಗಿದೆ' ಎಂದು ವಿವರ ನೀಡಿದರು.
- 'ನ್ಯಾಯಬೆಲೆ ಅಂಗಡಿಗಳನ್ನು ಬೆಳಿಗ್ಗೆ 6ರಿಂದ ರಾತ್ರಿ 10ರವರೆಗೂ ತೆರೆದು ಪಡಿತರ ವಿತರಿಸಲು ಸೂಚಿಸಲಾಗಿದ್ದು, ತಪ್ಪಿದಲ್ಲಿ ಇಲಾಖೆಯ ಸಹಾಯವಾಣಿ ಸಂಖ್ಯೆ 1967ಕ್ಕೆ ಕರೆ ಮಾಡಿ ದೂರು ನೀಡಬಹುದು' ಎಂದರು.

## ❖ 'ಕುಸುಮ್ ಬಿ': ಸೆಪ್ಟೆಂಬರ್ ಅಂತ್ಯದವರೆಗೆ ಯೋಜನೆಯ ಅವಧಿ ವಿಸ್ತರಣೆ: ಸೌರ ಪಂಪ್‌ಸೆಟ್ ಅಳವಡಿಕೆಗೆ ಗಡುವು

- 'ಕುಸುಮ್ ಬಿ' ಯೋಜನೆಯಡಿ ಅರ್ಜಿ ಸಲ್ಲಿಸಿರುವ ರೈತರ ಕೊಳವೆಬಾವಿಗಳಿಗೆ ಸೆಪ್ಟೆಂಬರ್ ಅಂತ್ಯದ ಒಳಗೆ ಸೌರ ಪಂಪ್‌ಸೆಟ್‌ಗಳನ್ನು ಅಳವಡಿಸುವಂತೆ ಕರ್ನಾಟಕ ನವೀಕರಿಸ ಬಹುದಾದ ಇಂಧನ ಅಭಿವೃದ್ಧಿ ನಿಗಮ (ಕ್ರೆಡಲ್) ಸೂಚನೆ ನೀಡಿದೆ.



**'ಅರ್ಜಿಗಳ ಸಂಖ್ಯೆ ಅಧಿಕ'**

2024–25 ಮತ್ತು 2025–26ರಲ್ಲಿ 40 ಸಾವಿರ ಕೊಳವೆಬಾವಿಗಳಿಗೆ ಸೌರ ಪಂಪ್‌ಸೆಟ್ ಅಳವಡಿಸುವ ಗುರಿ ಹೊಂದಲಾಗಿತ್ತು. ಒಟ್ಟು 1,05,901 ರೈತರು ಅರ್ಜಿ ಸಲ್ಲಿಸಿದ್ದಾರೆ. 'ಕುಸುಮ್ ಬಿ' ಯೋಜನೆ 2020–21ರಲ್ಲಿ ಆರಂಭವಾಗಿದ್ದು, ಮೊದಲ ಎರಡು ವರ್ಷಗಳಲ್ಲಿ ಆರು ಸಾವಿರ ಕೊಳವೆಬಾವಿಗಳಿಗೆ ಸೌರ ಪಂಪ್‌ಸೆಟ್‌ಗಳನ್ನು ಅಳವಡಿಸುವ ಗುರಿ ಹೊಂದಲಾಗಿತ್ತು. ಆದರೆ, ಪ್ರಚಾರದ ಕೊರತೆ ಮತ್ತು ರೈತರಲ್ಲಿ ಅರಿವು ಇಲ್ಲದ ಕಾರಣ 319 ಅರ್ಜಿಗಳಷ್ಟೇ ಬಂದಿದ್ದವು.

ಕೊಳವೆಬಾವಿಯಲ್ಲಿ 400 ಅಡಿ ಒಳಗೆ ನೀರು ಲಭ್ಯವಾಗುತ್ತಿದ್ದರೆ ಮಾತ್ರ ಸೌರಶಕ್ತಿ ಆಧಾರಿತ ಕೃಷಿ ಪಂಪ್‌ಸೆಟ್ ಅಳವಡಿಸಬಹುದು. ಅದಕ್ಕಿಂತ ಹೆಚ್ಚಿನ ಆಳದಲ್ಲಿ ನೀರು ಇದ್ದರೆ, ಇದರಿಂದ ಉಪಯೋಗ ಆಗುವುದಿಲ್ಲ. ಹೀಗಾಗಿ, ಎಷ್ಟು ಅಡಿ ಆಳದಲ್ಲಿ ನೀರು ಲಭ್ಯವಾಗುತ್ತಿದೆ ಎಂಬುದನ್ನು ಆಧರಿಸಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.

**'ಕುಸುಮ್ 2.0' ಜಾರಿ ಸಾಧ್ಯತೆ**

ಕೇಂದ್ರ ಸರ್ಕಾರ ಈ ವರ್ಷದಿಂದ 'ಕುಸುಮ್ 2.0' ಯೋಜನೆ ಆರಂಭಿಸಿದೆ. ಆದರೆ, ಇದನ್ನು ಯಾವ ರೀತಿ ಅನುಷ್ಠಾನಗೊಳಿಸಬೇಕು ಎಂಬ ಮಾರ್ಗಸೂಚಿಯನ್ನು ಇನ್ನೂ ರೂಪಿಸಿಲ್ಲ. ಹೀಗಾಗಿ, ಇದರಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲು ಎಷ್ಟು, ಯಾರೆಲ್ಲ ಅರ್ಹರು ಎಂಬುದು ಗೊತ್ತಾಗಿಲ್ಲ.

ಆದರೆ, ಈ ವರ್ಷ 23,350 ಕೊಳವೆಬಾವಿಗಳು ಸೇರಿದಂತೆ ಐದು ವರ್ಷಗಳ ಅವಧಿಯಲ್ಲಿ ಒಟ್ಟು 78,400 ಕೊಳವೆಬಾವಿಗಳಿಗೆ ಸೌರ ಪಂಪ್‌ಸೆಟ್‌ಗಳನ್ನು ಅಳವಡಿಸುವ ಕುರಿತು ನಿಗಮವು ಕ್ರಿಯಾ ಯೋಜನೆಯನ್ನು ಈಗಾಗಲೇ ರೂಪಿಸಿದೆ. ಕೇಂದ್ರದಿಂದ ಸೂಚನೆ ಬಂದ ನಂತರ ಜಾರಿಯಾಗಲಿದೆ.

- 'ಅರ್ಹ ರೈತರು ತಮ್ಮ ಪಾಲಿನ ಹಣ ಪಾವತಿಸಿದ್ದಾರೆ. ಆದರೆ, ಕೊಳವೆಬಾವಿಗೆ ಪಂಪ್‌ಸೆಟ್ ಅಳವಡಿಸಲು ಪರವಾನಗಿ ಪಡೆದಿರುವ ಏಜೆನ್ಸಿಯವರು ಅನಗತ್ಯ ವಾಗಿ ವಿಳಂಬ ಮಾಡುತ್ತಿರುವುದರಿಂದ ರೈತರಿಗೆ ತೊಂದರೆ ಆಗುತ್ತಿರುವುದು ಗಮನಕ್ಕೆ ಬಂದಿದೆ. ಹೀಗಾಗಿ ಕೆಲವರಿಗೆ ನೋಟಿಸ್ ನೀಡಲಾಗಿದೆ' ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಜಿ.ಆರ್.ಜೆ ದಿವ್ಯಾ ಪ್ರಭು 'ಪ್ರಜಾವಾಣಿ'ಗೆ ತಿಳಿಸಿದರು.
- ರಾಜ್ಯದ ಐದೂ ವಿದ್ಯುತ್ ಕಂಪನಿಗಳ ವ್ಯಾಪ್ತಿಯಲ್ಲಿ 2024-25 ಮತ್ತು 2025-26ನೇ ಸಾಲಿನಲ್ಲಿ 40 ಸಾವಿರ ರೈತರ ಕೊಳವೆಬಾವಿಗಳಿಗೆ ಸೌರ ಪಂಪ್‌ಸೆಟ್‌ಗಳನ್ನು ಅಳವಡಿಸುವ ಗುರಿ ಹೊಂದಲಾಗಿತ್ತು. ಆದರೆ, ಇದುವರೆಗೆ 27,072 ಕೊಳವೆಬಾವಿಗಳಿಗೆ ಮಾತ್ರ ಸೌರ ಪಂಪ್‌ಸೆಟ್ ಅಳವಡಿಸಿದ್ದು, ಗುರಿ ತಲುಪಲು ಇನ್ನೂ ಸಾಧ್ಯವಾಗಿಲ್ಲ.
- 'ಇಂಧನ ಸಚಿವ ಕೆ.ಜೆ.ಜಾರ್ಜ್ ಅವರ ಸೂಚನೆಯಂತೆ ಕಾಲಮಿತಿಯಲ್ಲಿ ಸೌರ ಪಂಪ್‌ಸೆಟ್ ಅಳವಡಿಸಲು ಸಂಬಂಧಪಟ್ಟ ಏಜೆನ್ಸಿಗಳಿಗೆ ಈಗಾಗಲೇ ನಿರ್ದೇಶನ ನೀಡಲಾಗಿದೆ. ಒಟ್ಟು 13 ಏಜೆನ್ಸಿಗಳ ಪೈಕಿ ಐದು ಏಜೆನ್ಸಿಯವರು ತಡ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಈ ಸಂಬಂಧ ಅವರೊಂದಿಗೆ ಚರ್ಚೆ ನಡೆಸಿ, ಬೇಗ ಪಂಪ್‌ಸೆಟ್ ಅಳವಡಿಸಲು ಸೂಚಿಸಲಾಗಿದೆ' ಎಂದು ತಿಳಿಸಿದರು.
- ರೈತರ ಕೊಳವೆಬಾವಿಗಳಿಗೆ ಸೌರ ಪಂಪ್‌ಸೆಟ್‌ಗಳನ್ನು ಅಳವಡಿಸುವ 'ಕುಸುಮ್ ಬಿ' ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ರಾಜ್ಯದಲ್ಲಿ ಇದನ್ನು ಅನುಷ್ಠಾನಗೊಳಿಸುವ ಹೊಣೆಯನ್ನು ಕ್ರೆಡಲ್‌ಗೆ ವಹಿಸಲಾಗಿದೆ. ಒಂದು ಸೌರ ಪಂಪ್‌ಸೆಟ್‌ಗೆ ₹3 ಲಕ್ಷದಿಂದ ₹3.50 ಲಕ್ಷ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಇದರಲ್ಲಿ ಶೇ 80ರಷ್ಟನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ಸಹಾಯಧನದ ರೂಪದಲ್ಲಿ ಭರಿಸಲಿದ್ದು. ಉಳಿದ ಹಣವನ್ನು ರೈತರೇ ಭರಿಸಬೇಕು.

- ಈ ಯೋಜನೆಯಡಿ ಅರ್ಜಿ ಸಲ್ಲಿಸಿದ ನಂತರ ಅರ್ಹ ರೈತರನ್ನು ಪಟ್ಟಿ ಮಾಡಿ, ಅವರಿಗೆ ತಮ್ಮ ಪಾಲಿನ ಹಣ ಪಾವತಿಸಲು ಸೂಚಿಸಲಾಗುತ್ತದೆ. ಸಂಬಂಧಪಟ್ಟ ಏಜೆನ್ಸಿಯವರು ಸೌರ ಪಂಪ್‌ಸೆಟ್ ಅಳವಡಿಸಿದ ನಂತರ ಸಹಾಯಧನದ ಮೊತ್ತವನ್ನು ನೇರವಾಗಿ ಅವರಿಗೆ ವರ್ಗಾಯಿಸಲಾಗುತ್ತದೆ. ಒಟ್ಟಾರೆ 40 ಸಾವಿರ ಕೊಳವೆಬಾವಿಗಳಿಗೆ ಸೌರ ಪಂಪ್‌ಸೆಟ್‌ಗಳನ್ನು ಅಳವಡಿಸಲು ಒಟ್ಟು ₹1,501.34 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ.
- 'ರೈತರ ಕೊಳವೆಬಾವಿಗಳ ಆಳಕ್ಕೆ ಅನುಗುಣವಾಗಿ 5 ಎಚ್.ಪಿ., 7.5 ಎಚ್.ಪಿ ಮತ್ತು 10 ಎಚ್.ಪಿವರೆಗಿನ ಸೌರ ಪಂಪ್‌ಸೆಟ್‌ಗಳನ್ನು ಅಳವಡಿಸಲು ಬೇರೆ ಬೇರೆ ದರಗಳನ್ನು ನಿಗದಿಪಡಿಸಿ, ಏಜೆನ್ಸಿಗಳನ್ನು ಆಯ್ಕೆ ಮಾಡಲಾಗಿದೆ. ಆದರೆ, ಅವರು ಸರಿಯಾಗಿ ಸ್ಪಂದಿಸುತ್ತಿಲ್ಲ.ವಿನಾಕಾರಣ ತಡ ಮಾಡುತ್ತಿದ್ದಾರೆ ಎಂಬ ದೂರುಗಳು ಬಂದಿರುವುದು ನಿಜ. ಈಗ ಏಜೆನ್ಸಿಗಳಿಗೆ ಎಚ್ಚರಿಕೆ ನೀಡಿದ್ದು, ಸೆಪ್ಟೆಂಬರ್ ಒಳಗೆ ಗುರಿ ತಲುಪುವ ವಿಶ್ವಾಸವಿದೆ' ಎಂದು ದಿವ್ಯಾ ಪ್ರಭು ತಿಳಿಸಿದರು.
- 'ವಾಸ್ತವವಾಗಿ ಈ ಯೋಜನೆ 2025ರ ಡಿಸೆಂಬರ್‌ಗೆ ಪೂರ್ಣಗೊಳ್ಳ ಬೇಕಿತ್ತು. ಆದರೆ, ಗುರಿ ತಲುಪಲು ಸಾಧ್ಯವಾಗದ ಕಾರಣ ಈ ವರ್ಷದ ಸೆಪ್ಟೆಂಬರ್‌ವರೆಗೂ ವಿಸ್ತರಿಸಲಾಗಿದೆ.ಅಷ್ಟರ ಒಳಗೆ ಪೂರ್ಣಗೊಳಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು' ಎಂದು ಅವರು ಹೇಳಿದರು.



## 25 ಲಕ್ಷ ಟನ್ ಯೂರಿಯಾ, 7 ಲಕ್ಷ ಟನ್ ಡಿಎಪಿ ಆಮದು: ಕೇಂದ್ರ

# 115 ಲಕ್ಷ ಟನ್ ರಸಗೊಬ್ಬರ ಉತ್ಪಾದನೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ದೇಶದಲ್ಲಿ ಒಟ್ಟು 115.72 ಲಕ್ಷ ಟನ್‌ನಷ್ಟು ರಸಗೊಬ್ಬರ ಉತ್ಪಾದನೆ ಆಗಿದೆ ಕೇಂದ್ರ ಸರ್ಕಾರ ಲೋಕಸಭೆಗೆ ಶುಕ್ರವಾರ ತಿಳಿಸಿದೆ.

ದೇಶದಲ್ಲಿನ ಬೇಡಿಕೆ ಪೂರೈಸಲು ಇದೇ ಅವಧಿಯಲ್ಲಿ 25.08 ಲಕ್ಷ ಟನ್‌ನಷ್ಟು ಯೂರಿಯಾ ಮತ್ತು 7.11 ಲಕ್ಷ ಟನ್‌ನಷ್ಟು ಡೈ ಅಮೋನಿಯಂ ಫಾಸ್ಫೇಟ್ (ಡಿಎಪಿ) ಆಮದು ಮಾಡಿಕೊಳ್ಳಲಾಗಿದೆ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಜೆ.ಪಿ.ನಡ್ಡಾ ಅವರು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ದೇಶದ ಒಟ್ಟು ಉತ್ಪಾದನೆಯ ಪೈಕಿ 71.55 ಲಕ್ಷ ಟನ್‌ನಷ್ಟು ಯೂರಿಯಾ ಮತ್ತು 9.84 ಲಕ್ಷ ಟನ್ ಡಿಎಪಿ ಇದೆ.

> ದೇಶದ ರಸಗೊಬ್ಬರ ಕಂಪನಿಗಳು ಮತ್ತು ವಿದೇಶಿ ಪೂರೈಕೆದಾರರ ನಡುವೆ ವ್ಯಾಪಾರ ಒಪ್ಪಂದಕ್ಕೆ ಅವಕಾಶ ಕಲ್ಪಿಸುವ ಮೂಲಕ ರಸಗೊಬ್ಬರ ಪೂರೈಕೆಯನ್ನು ಬಲಪಡಿಸಲಾಗುವುದು
> **ಜೆ.ಪಿ.ನಡ್ಡಾ,** ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ

2025-26ರ ಪೂರ್ಣ ಆರ್ಥಿಕ ವರ್ಷದಲ್ಲಿ ದೇಶದಲ್ಲಿ 517.74 ಲಕ್ಷ ಟನ್‌ನಷ್ಟು ರಸಗೊಬ್ಬರ ಉತ್ಪಾದನೆ ಆಗಿತ್ತು. ಇದೇ ಅವಧಿಯಲ್ಲಿ 103.50 ಲಕ್ಷ ಟನ್ ಯೂರಿಯಾ ಮತ್ತು 61.94 ಲಕ್ಷ ಟನ್ ಡಿಎಪಿ ಆಮದು ಮಾಡಿಕೊಳ್ಳಲಾಗಿದೆ.

ಜಾಗತಿಕ ಮಟ್ಟದಲ್ಲಿ ಉಂಟಾಗುವ ಅಡಚಣೆಗಳಿಂದ ದೇಶದ ರಸಗೊಬ್ಬರ ಪೂರೈಕೆಗೆ ತೊಂದರೆ ಆಗದಂತೆ ಇರಲು ಕೇಂದ್ರ ಸರ್ಕಾರವು ಮಾರುಕಟ್ಟೆಗಳನ್ನು ಹೆಚ್ಚಿಸಿಕೊಳ್ಳಲು ನಿರಂತರ ಪ್ರಯತ್ನ ಕೈಗೊಂಡಿದೆ ಎಂದು ನಡ್ಡಾ ಹೇಳಿದ್ದಾರೆ.

ಚೀನಾ ಸೇರಿದಂತೆ ಯಾವುದೇ ಒಂದು ದೇಶದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು, ವಿವಿಧ ದೇಶಗಳಿಂದ ಪೂರೈಕೆಯ ಪರ್ಯಾಯ ಮಾರ್ಗಗಳನ್ನು ಗುರುತಿಸಲು ಮತ್ತು ಅನ್ವೇಷಿಸಲು ರಸಗೊಬ್ಬರ ಇಲಾಖೆಯು ಕಾರ್ಯಪ್ರವೃತ್ತವಾಗಿದೆ ಎಂದು ನಡ್ಡಾ ತಿಳಿಸಿದ್ದಾರೆ.

ಭಾರತಕ್ಕೆ ವಿಶೇಷ ರಸಗೊಬ್ಬರ-ಗಳ ರಫ್ತನ್ನು ಚೀನಾ ತಡೆಹಿಡಿದಿರುವುದರಿಂದ ಭಾರತದ ಕಂಪನಿಗಳು ಈ ಆಮದು ಕೊರತೆಯನ್ನು ಸರಿದೂಗಿಸಲು ಬೆಲ್ಜಿಯಂ, ಈಜಿಪ್ಟ್, ಜರ್ಮನಿ, ಮೊರಾಕೊ ಮತ್ತು ಅಮೆರಿಕದಲ್ಲಿನ ಪರ್ಯಾಯ ಪೂರೈಕೆದಾರರಿಂದ ರಸಗೊಬ್ಬರಗಳನ್ನು ಖರೀದಿಸುತ್ತಿವೆ ಎಂದು ಹೇಳಿದ್ದಾರೆ.

ರಸಗೊಬ್ಬರಗಳ ನಿರಂತರ ಪೂರೈಕೆಗಾಗಿ ಸೌದಿ ಅರೇಬಿಯಾದ ಕಂಪನಿಗಳೊಂದಿಗೆ ವಾರ್ಷಿಕ 31 ಲಕ್ಷ ಟನ್ ಡಿಎಪಿಗಾಗಿ ದೀರ್ಘಾವಧಿ ಒಪ್ಪಂದ ಮಾಡಿಕೊಳ್ಳಲಾಗಿದೆ. ಅಲ್ಲದೆ, ರಷ್ಯಾದ ಕಂಪನಿಗಳೊಂದಿಗೆ 26.50 ಲಕ್ಷ ಟನ್ ಡಿಎಪಿ/ಎನ್‌ಪಿಕೆ ರಸಗೊಬ್ಬರ, 4.80 ಲಕ್ಷ ಟನ್ ಎಂಒಪಿ ಪೂರೈಕೆಗೆ ದೇಶದ ಕಂಪನಿಗಳು ರಷ್ಯಾ, ಜರ್ಮನಿ ಮತ್ತು ತುರ್ಕಮೆನಿಸ್ತಾನ್‌ದ ರಸಗೊಬ್ಬರ ಪೂರೈಕೆದಾರರೊಂದಿಗೆ ಒಪ್ಪಂದ ಮಾಡಿಕೊಂಡಿವೆ ಎಂದು ತಿಳಿಸಿದ್ದಾರೆ.

Publication Date
25/07/2026

Presented by

## ❖ ಬಲವಂತದ ಕಾರ್ಮಿಕ ಪದ್ಧತಿ ಅಮೆರಿಕದಿಂದ ಶೇ 12.5 ಸುಂಕ

- ಬಲವಂತದ ಕಾರ್ಮಿಕ ಪದ್ಧತಿಯನ್ನು ತಡೆಯುವಲ್ಲಿ ವಿಫಲವಾಗಿವೆ ಎಂಬ ಕಾರಣ ನೀಡಿ, ಭಾರತ ಸೇರಿದಂತೆ 60 ರಾಷ್ಟ್ರಗಳ ಮೇಲೆ ಶೇ 10 ರಿಂದ ಶೇ12.5ರಷ್ಟು ಸುಂಕವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸರ್ಕಾರವು ಶುಕ್ರವಾರ ಜಾರಿಗೊಳಿಸಿದೆ.
- ಈ ಹಿಂದೆ ಟ್ರಂಪ್ ಹೊರಡಿಸಿದ್ದ ಪ್ರತಿಸುಂಕ ನೀತಿಗೆ ಸುಪ್ರೀಂ ಕೋರ್ಟ್‌ನಲ್ಲಿ ಹಿನ್ನಡೆಯಾದ ಬಳಿಕ ಶೇ 10ರ ತಾತ್ಕಾಲಿಕ ಸುಂಕವನ್ನು 150 ದಿನಗಳ ಅವಧಿಗೆ ಜಾರಿಗೊಳಿಸಲಾಗಿತ್ತು. ಆ ಅವಧಿಯು ಶುಕ್ರವಾರಕ್ಕೆ ಕೊನೆಗೊಂಡಿರುವಾ ಗಲೇ ಟ್ರಂಪ್ ಆಡಳಿತ ಈ ಹೊಸ ಸುಂಕ ಜಾರಿಗೊಳಿಸಿದೆ.
- 1974ರ ವ್ಯಾಪಾರ ಕಾಯ್ದೆ ಸೆಕ್ಷನ್ 301ರ ಅನ್ವಯ 60 ರಾಷ್ಟ್ರಗಳ ಮೇಲೆ ಈ ಹೊಸ ಸುಂಕ ವಿಧಿಸಲಾಗಿದೆ. ಅಮೆರಿಕದ ಒಟ್ಟು ಆಮದಿನಲ್ಲಿ ಈ ರಾಷ್ಟ್ರಗಳ ಪಾಲು ಶೇ 99ರಷ್ಟಿದೆ.

- ಅಮೆರಿಕದ ವ್ಯಾಪಾರ ಪ್ರತಿನಿಧಿ ಜೆಮಿಸನ್ ಗ್ರೀರ್ ಅವರು ಈ ಕುರಿತು ಮಾಹಿತಿ ನೀಡಿ, 'ಅಮೆರಿಕವು ಬಲವಂತದ ಕಾರ್ಮಿಕ ಪದ್ಧತಿಯಿಂದ ಉತ್ಪಾದಿಸಿದ ವಸ್ತುಗಳ ಆಮದು ನಿಷೇಧವನ್ನು ಕಳೆದ ಒಂದು ಶತಮಾನದಿಂದ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುತ್ತಿದೆ. ನಮ್ಮ ವ್ಯಾಪಾರ ಪಾಲುದಾರರೂ ಅದೇ ನಿಯಮವನ್ನು ಅನುಸರಿಸುವ ಸಮಯ ಈಗ ಬಂದಿದೆ' ಎಂದಿದ್ದಾರೆ.
- ಅಮೆರಿಕದ ಈ ಸುಂಕ ನೀತಿಗೆ ಹಲವು ರಾಷ್ಟ್ರಗಳು ಆಕ್ಷೇಪ ವ್ಯಕ್ತಪಡಿಸಿವೆ. ಬಲವಂತದ ಕಾರ್ಮಿಕ ಪದ್ಧತಿಯ ವಿರುದ್ಧ ಕಠಿಣ ಕಾನೂನು ಕ್ರಮಗಳನ್ನು ನಾವು ಅನುಸರಿಸುತ್ತಿದ್ದರೂ ಅಮೆರಿಕ ಏಕಮುಖವಾಗಿ ನಿರ್ಧರಿಸಿ ಸುಂಕ ಹೇರುತ್ತಿರುವುದು ನ್ಯಾಯ ಸಮ್ಮತವಲ್ಲ ಎಂದು ಆಕ್ಷೇಪಿಸಿವೆ.

## ❖ ಶೂಟಿಂಗ್ ವಿಶ್ವಕಪ್: ಮೊದಲ ಪದಕ ಗೆದ್ದ ಭಾರತ

- ಚಂಡೀಗಢದ ಸೈನ್ಯಮ್ ಅವರ ಮೂಲಕ ಐಎಸ್‌ಎಸ್‌ಎಫ್ ವಿಶ್ವಕಪ್ (ರೈಫಲ್/ ಪಿಸ್ತೂಲ್/ ಶಾಟ್‌ಗನ್) ಟೂರ್ನಿಯಲ್ಲಿ ಭಾರತ ಕೊನೆಗೂ ಮೊದಲ ಪದಕ ಗೆಲ್ಲುವಲ್ಲಿ ಯಶಸ್ವಿಯಾಯಿತು.
- ಸೈನ್ಯಮ್ ಅವರು ಶುಕ್ರವಾರ ನಡೆದ ಮಹಿಳೆಯರ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರು.
- ತೀವ್ರ ಹೋರಾಟದ ಫೈನಲ್‌ನಲ್ಲಿ ಅವರು ಉದ್ವೇಗಕ್ಕೆ ಒಳಗಾಗದೇ 243.4 ಸ್ಕೋರ್ ದಾಖಲಿಸಿದರು. ಅವರು 579ರ ಸ್ಕೋರ್‌ನೊಡನೆ ಅಂತಿಮ ಸುತ್ತಿಗೆ ಅರ್ಹತೆ ಪಡೆದಿದ್ದರು.
- ಭಾರತದ ಇತರ ಸ್ಪರ್ಧಿಗಳ ಪೈಕಿ, ಸುರುಚಿ ಇಂದರ್ ಸಿಂಗ್ ಅವರು ಎಂಟು ಮಂದಿಗೆ ಅವಕಾಶವಿರುವ ಫೈನಲ್ ತಲುಪಿದ್ದಾರೆ. ಅವರು ಏಳನೇ ಸ್ಥಾನದೊಡನೆ (ಸ್ಕೋರ್ 137.6) ಅರ್ಹತೆ ಪಡೆದರು.
- ಒಲಿಂಪಿಕ್ ಪದಕ ವಿಜೇತೆ ಮನು ಭಾಕರ್ ಅವರು ಅಗ್ರಸ್ಥಾನ ಪಡೆದರು. ಆದರೆ ಅವರು ಇಲ್ಲಿ ಪದಕಗಳಿಗೆ ಸ್ಪರ್ಧಿಸುತ್ತಿಲ್ಲ. ರ್‍ಯಾಂಕಿಂಗ್ ಪಾಯಿಂಟ್‌ಗಾಗಷ್ಟೇ ಕಣದಲ್ಲಿದ್ದಾರೆ.

**-------------------------------------------ಶುಭವಂದನೆಗಳು---------------------------------------**

Dr. Rajkumar IAS/KAS Academy